"ನನ್ನ ಕರ್ತನು ಸರ್ವಶಕ್ತನು"

# ಕಣ್ಣೀರಿನ ಕೂಗು



ಲೇಖಕರು:
ಪಾಸ್ಟರ್ ಪಿ.ತೇಜಸ್

ದೇವರ ನಾಮಕ್ಕೆ ಸ್ತೋತ್ರ

# ಕಣ್ಣೀರಿನ ಕೂಗು

## ಅರ್ಪಣೆ

"ಯೆಹೋವನಲ್ಲಿ ಭರವಸವಿಟ್ಟು ಒಳ್ಳೆಯದನ್ನು ಮಾಡು; ದೇಶದಲ್ಲಿ ವಾಸವಾಗಿದ್ದು ನಂಬಿಕೆಯನ್ನು ಅನುಸರಿಸು" (ಕೀರ್ತನೆ 37:3)

ಯಾವಾಗಲೂ ಒಳ್ಳೆಯದನ್ನೇ ಹೇಳಿಕೊಡುವ ನನ್ನ ಸರ್ವಶಕ್ತನಿಗೆ ನನ್ನ ಹೃದಯಪೂರ್ವಕವಾಗಿ 'ಕಣ್ಣೀರಿನ ಕೂಗು' ಎನ್ನುವ ಈ ಪುಸ್ತಕವನ್ನು ಅರ್ಪಿಸುತ್ತಿದ್ದೇನೆ.

ಲೇಖಕರು:
ಸಹೋದರಿ.ಪಿ.ತೇಜಸ್

# ದೇವರ ನಾಮಕ್ಕೆ ಸ್ತೋತ್ರ

# "ಕಣ್ಣೀರಿನ ಕೂಗು"

ಪುಸ್ತಕ : 4
ಮೊದಲನೆಯ ಮುದ್ರಿಕೆ : 2014
ಪ್ರತಿಗಳು : 5000
ಪುಟಗಳು : 48

ಓದಿರುವಿರಾ :–

1. "ನಂಬಿಕೆಯ ರಹಸ್ಯ"
2. "ಅದ್ಭುತ ಸಾಕ್ಷಿ"
3. "ಪ್ರೀತಿಯ ಯಶಸ್ಸು"

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
ಫೋನ್ ನಂಬರ್: 9900241593, 9880245222

## ಲೇಖಕರ ಮಾತು

ಪ್ರೀತಿಯ ಸಹೋದರ-ಸಹೋದರಿಯರೆ ಹಾಗೂ ಯೌವನಸ್ಥರೇ ಸತ್ಯವೇದದಲ್ಲಿ ಇರುವಂತಹ ಅನೇಕ ಕಥೆಗಳನ್ನು ಓದುವಾಗ ಒಂದೊಂದು ಕಥೆಯಲ್ಲೂ ಒಂದೊಂದು ರೀತಿಯಲ್ಲಿ ಅರ್ಥವನ್ನು ತೋರಿಸಿಕೊಂಡು ಮೈಜುಮ್ ಎನ್ನುವ ಹಾಗೆ ಆತ್ಮೀಕವಾಗಿಯೂ ಮತ್ತು ಶರೀರಿಕವಾಗಿಯೂ ಇರುವ ವಿಶೇಷವಾಗಿರುವಂತಹ ಅನೇಕ ವಿಚಾರಗಳು ಕಂಡುಬರುತ್ತದೆ, ಏಕೆಂದರೆ ಅದನ್ನು ಬರೆದವರು ಸಾಮಾನ್ಯವಾದಂತಹ ವ್ಯಕ್ತಿಗಳು ಅಲ್ಲ; ಆ ವ್ಯಕ್ತಿಗಳು ಪವಿತ್ರಾತ್ಮ ಭರಿತರಾದಾಗ ದೇವರು ಅವರ ಮುಖಾಂತರ ಕಾರ್ಯನಡೆಸಿದ್ದಾರೆ. ಈ ಸತ್ಯವೇದವು ಅಭಿಷೇಕ ಹೊಂದಿದ ಅನೇಕ ದೇವಜನರನ್ನು ಒಳಗೊಂಡಿರುವ ಒಂದು ಅದ್ಭುತವಾದಂತಹ ಬಹು ಪ್ರಾಬಲ್ಯವುಳ್ಳ ಅತಿ ಮಹತ್ತಾದ ಗ್ರಂಥವಾಗಿದೆ. ಗ್ರೀಕ್ ಪದವಾದ 'ಬಿಬ್ಲಿಯ' ಎನ್ನುವ ಪದವನ್ನು ಆಂಗ್ಲಭಾಷೆಗೆ ತರ್ಜುಮೆ ಮಾಡಿದಾಗ "ಬೈಬಲ್ ಎಂಬ ಪದವು ಬಂದಿತು. ಮೊಟ್ಟ ಮೊದಲು ಇದನ್ನು "ಪುಸ್ತಕಗಳು' ಎಂದು ಮಾತ್ರ ಕರೆಯಲಾಗಿತ್ತು ಮತ್ತು ಈ ಪುಸ್ತಕಗಳನ್ನು ಸುಮಾರು ಒಂದು ಸಾವಿರ ವರ್ಷಗಳಿಗೂ ಹೆಚ್ಚಿನ ಅವಧಿಯಲ್ಲಿ ಬರೆಯಲಾಗಿದೆಯಾದರೂ ಮೊದಲು ಈ ಪುಸ್ತಕಗಳನ್ನು ಪ್ರತ್ಯೇಕವಾಗಿ ಒಂದೊಂದೇ ಪುಸ್ತಕಗಳಾಗಿ ಓದಲ್ಪಡುತ್ತಿದ್ದವು ಆದರೆ ಪರಿಶುದ್ಧಾತ್ಮನು ಈ ಎಲ್ಲಾ ಪುಸ್ತಕಗಳನ್ನು ಒಂದು ಕೂಡಿಸಿ ಇವುಗಳನ್ನು ಇಂದು "ಸತ್ಯವೇದವು" ಎಂದು ಕರೆಯಲ್ಪಡುವ ಅತ್ಯುತ್ತಮವಾದ ಮಹಾ ದೊಡ್ಡ ಗ್ರಂಥವಾಗಿ ಮಾಡಿ ನಮ್ಮೆಲ್ಲರ ಕೈ ತಲುಪುವಂತೆ ಮಾಡಿದೆ. ಇವೆಲ್ಲವನ್ನು ಒಂದು ಕಡೆ ಶೇಕರಣೆ ಮಾಡಲು ಮತ್ತು ಇದನ್ನು ಪೂರ್ಣಗೊಳಿಸಲು ಹೆಚ್ಚು ವರ್ಷಗಳು ತೆಗೆದುಕೊಂಡಿತು. ಮತ್ತು ನಮ್ಮಲ್ಲರ ಕೈ ತಲುಪುವಂತೆ ಮಾಡಲು ಎಷ್ಟೋ ದೈವ ಜನರ ಪ್ರಯಾಸವು ಸಹ ಹೆಚ್ಚು ವರ್ಷಗಳನ್ನೇ ತೆಗೆದುಕೊಂಡಿತು.

ದೇವರ ಮಗುವೇ ಇಂತಹ ಒಂದು ಗ್ರಂಥವನ್ನು ಓದುವ ನಿನ್ನ ಜೀವನವು ಖಂಡಿತವಾಗಿಯೂ ಬದಲಾಗಲೇಬೇಕು ಮತ್ತು ನೀನು ದೇವರ ಬಳಿಯಲ್ಲಿ ನಿನ್ನ ಎಲ್ಲಾ ಪಾಪಕ್ಕಾಗಿ ಪಶ್ಚಾತ್ತಾಪ ಪಟ್ಟು 'ಕಣ್ಣೀರಿನ ಕೂಗಿ'ನಿಂದ ದೇವರಲ್ಲಿ ಮೊರೆಯಿಡಲೇಬೇಕು.

ಯಾಕೆಂದರೆ ಈ ಭೂಮಿಯಲ್ಲಿ ನಿನ್ನ ಜೀವಿತಕಾಲ ೬೦ ಇಲ್ಲದಿದ್ದರೆ ೭೦ ವರ್ಷಗಳು ಮಾತ್ರ. ಆ ಮೇಲೆ ನಿನ್ನೊಳಗೆ ಇರುವ 'ಆತ್ಮ' ಎಲ್ಲಿ ಹೋಗುತ್ತೇ? ಎಲ್ಲಿ ಸೇರುತ್ತೇ? ಅದಕ್ಕೆ ಇರಲು ಸ್ಥಳ ಎಲ್ಲಿ ಇದೆ? ಒಂದು ಭಾರಿ ಯೋಚಿಸಿ ನೋಡುವುದಾದರೆ ಹೃದಯದಲ್ಲಿ ಭಯವು ಶುರುವಾಗುತ್ತದೆ. ಇಲ್ಲಿ ಅಲ್ಪ ಸುಖಕ್ಕಾಗಿ ಜೀವಿಸಿ ಸಮಯ ವ್ಯರ್ಥ ಮಾಡುವುದಾದರೆ; ಮುಂದೆ ಶಾಶ್ವತವಾಗಿ ಸಂಕಟದಲ್ಲಿ ಬೀಳುತ್ತೀಯಾ! ಇವೆಲ್ಲದರಿಂದ ಹೊರಗೆ ಬಂದು ನೀನು ಉತ್ತಮವಾಗಿ ಜೀವಿಸುವುದಕ್ಕಾಗಿ ನಿನ್ನನ್ನು ಹುಡುಕಿಕೊಂಡು ಬಂದಿರುವ ಈ 'ಕಣ್ಣೀರಿನ ಕೂಗು' ಎನ್ನುವ ಈ ಪುಸ್ತಕವನ್ನು ಓದಿ ಉತ್ತಮವಾದ ತೀರ್ಮಾನದಲ್ಲಿ ದೃಢವಾಗಿ ನಿಲ್ಲಬೇಕೆಂದು ಹೃದಯಪೂರ್ವಕವಾಗಿ ಹಾರೈಸುತ್ತೇನೆ.

**ಕರ್ತನ ಮಗಳಾದ ಪಿ.ತೇಜಸ್**

## ಪರಿಚಯ

ಪ್ರೀತಿಯ ದೇವರ ಮಕ್ಕಳಿಗೆ ನನ್ನ ಯೇಸುಕ್ರಿಸ್ತನ ನಾಮದಲ್ಲಿ ನಿಮ್ಮೆಲ್ಲರಿಗೆ ಸಹೋದರಿ ಪಿ.ತೇಜಸ್ಸ್ ರವರನ್ನು ಪರಿಚಯ ಪಡಿಸಲು ಉತ್ಸಾಹವುಳ್ಳವಳಾಗಿದ್ದೇನೆ. ನಾನು 'ಅದ್ಭುತ ಸಾಕ್ಷಿ' ಎನ್ನುವ ಪುಸ್ತಕವನ್ನು ಓದಿದೆ. ಅದರಲ್ಲಿ ಇರುವ ಪ್ರಧಾನ ವ್ಯಕ್ತಿಗಳ ಅದ್ಭುತಗಳನ್ನು ಓದಿದಾಗ ನನಗೆ ತುಂಬಾ ಆಶ್ಚರ್ಯವೆನಿಸಿತು. ದೇವರು ಎಂತಹ ಭಯಂಕರನೂ, ಶೂರನು ಸರ್ವಶಕ್ತನು ಆಗಿರುವ ಸೃಷ್ಟಿಕರ್ತನು ಒಬ್ಬ ಸಾಮಾನ್ಯ ವ್ಯಕ್ತಿಯ ಮುಖಾಂತರ ಎಂತಹ ಕಾರ್ಯಗಳನ್ನು ಮಾಡಿಸಿದ್ದಾನೆ ಎಂದು ತಿಳಿಯಲು ಸಾಧ್ಯವಾಯಿತು. ಸತ್ಯವೇದವನ್ನು ನಾವೆಲ್ಲರೂ ಓದುತ್ತೇವೆ ಆದರೆ ಒಂದು ಕಥೆಯ ರೀತಿಯಲ್ಲಿ ಓದುವಾಗ ಅದರಿಂದ ಅನೇಕ ಕಾರ್ಯಗಳನ್ನು ತಿಳಿದುಕೊಳ್ಳಬಹುದು. ಸುಮ್ಮನೆ ಓದುವಾಗ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಹೊಸ ಒಡಂಬಡಿಕೆಯಲ್ಲಿ ಯೇಸುದೇವರು ಶಿಷ್ಯರೊಟ್ಟಿಗೆ ಸಾಮ್ಯರೂಪವಾಗಿ ಕೆಲವು ಸಂಗತಿಗಳನ್ನು ಹೇಳಿರುವುದನ್ನು ನೋಡಬಹುದು. ಅದು ಓದುವಾಗ ಬೇಗನೇ ಅರ್ಥವಾಗುತ್ತದೆ. ಬೇರೆ ವಾಕ್ಯಗಳನ್ನು ನೋಡುವಾಗ ಸ್ವಲ್ಪ ಕಷ್ಟಕರವಾಗಿ ಕಾಣಲ್ಪಡುತ್ತದೆ. ಅದೇ ರೀತಿ ನಮ್ಮ ಸಹೋದರಿ ಪಿ.ತೇಜಸ್ಸ್ ರವರು ಕರ್ತನ ಆತ್ಮನಿಂದ ಪ್ರೇರೇಪಿಸಲ್ಪಟ್ಟು ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ಈ ಪುಸ್ತಕವನ್ನು ಬರೆದಿರುವುದನ್ನು ನೋಡಿದಾಗ ತುಂಬ ಆಶ್ಚರ್ಯವಾಗುತ್ತದೆ.

ಮೂರನೇ ಪುಸ್ತಕವಾದ 'ಪ್ರೀತಿಯ ಯಶಸ್ಸು' ನನ್ನ ಆತ್ಮೀಕತೆಯನ್ನು ಹೆಚ್ಚಿಸಿದೆ. ನೀವು ತಪ್ಪದೇ ಈ ಪುಸ್ತಕವನ್ನು ಓದಲೇಬೇಕೆಂದು ನಾನು ಅಪೇಕ್ಷಿಸುತ್ತೇನೆ. ದೇವರು ನಿಮ್ಮ ಕೈಗೆ ಸಹೋದರಿ ಪಿ.ತೇಜಸ್ಸ್ ರವರ ಪುಸ್ತಕಗಳನ್ನು ದೊರೆಯುವಂತೆ ಮಾಡಲೆಂದು ಪ್ರಾರ್ಥಿಸುತ್ತೇನೆ.

ಪವಿತ್ರಾತ್ಮನ ಸಹಾಯ ಇಲ್ಲದಿದ್ದರೆ ಏನೂ ಮಾಡಲು ಸಾಧ್ಯವಿಲ್ಲ. ಕರ್ತನು ಪಿ.ತೇಜಸ್ಸ್ ರವರನ್ನು ಪರಿಶುದ್ಧಾತ್ಮನ ಶಕ್ತಿಯಿಂದಲೇ ತುಂಬಿಸಿ ನಡೆಸುತ್ತಿರುವುದನ್ನು ನಾನು ಈ ಪುಸ್ತಕವನ್ನು ಓದುವಾಗ ಅರ್ಥ ಮಾಡಿಕೊಳ್ಳಲು ನನಗೆ ಸಹಾಯವಾಯಿತು. ನನ್ನಲ್ಲೂ ಸಹ ಒಂದು ಬದಲಾವಣೆ ಕಂಡು ಬಂತು; ನಾನು ಸಹಾ ಕರ್ತನಲ್ಲಿ ಒಳ್ಳೆ ಸಾಕ್ಷಿಯಾಗಿ ನಿಂತುಕೊಳ್ಳಬೇಕು, ನಾನು ಕರ್ತನ ರಾಜ್ಯಕ್ಕಾಗಿ ಹೆಚ್ಚು ಸಮಯವನ್ನು ಕೊಡಬೇಕು ಎನ್ನುವ ಭಾವನೆ ನನ್ನಲ್ಲಿ ಮೂಡಿಬಂತು. ಸಹೋದರಿಯ ಪುಸ್ತಕಗಳೆಲ್ಲವು ನಿಜವಾಗಲೂ ತುಂಬ ಅದ್ಭುತಕರವಾಗಿಯೂ ಆತ್ಮೀಕವಾಗಿಯೂ ಇದೆ. ಪ್ರಿಯ ಸಹೋದರಿಯನ್ನು ದೇವರು ಉಪಯೋಗಿಸಬೇಕೆಂತಲೂ ಮತ್ತು ಅನೇಕ ಪುಸ್ತಕಗಳನ್ನು ಬರೆಯಲು ಪವಿತ್ರಾತ್ಮನು ಇನ್ನೂ ಹೆಚ್ಚಾಗಿ ಸಹಾಯಕ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ ಹಾಗೂ ಈ ಪುಸ್ತಕಗಳನ್ನು ಓದುವ ಒಬ್ಬೊಬ್ಬರ ಜೀವಿತದಲ್ಲೂ ಕರ್ತನು ಅದ್ಭುತಕಾರ್ಯವನ್ನು ಮಾಡಲಿ ಎಂದು ಪ್ರಾರ್ಥಿಸುತ್ತೇನೆ. ಈ 'ಕಣ್ಣೀರಿನ ಕೂಗು' ಎನ್ನುವ ಪುಸ್ತಕ ಉತ್ತಮವಾಗಿ ನಿಮ್ಮೆಲ್ಲರ ಹೃದಯಗಳನ್ನು ಮುಟ್ಟಲಿ ಎಂದು ಹಾರೈಸುತ್ತೇನೆ. ದೇವರು ಸಹೋದರಿ. ಪಿ.ತೇಜಸ್ಸ್ ರವರನ್ನು ಇನ್ನೂ ಹೆಚ್ಚು ಪುಸ್ತಕಗಳ ಮುಖಾಂತರ ಅನೇಕ ಜನರನ್ನು ದೇವರ ರಾಜ್ಯಕ್ಕಾಗಿ ಸಿದ್ಧಪಡಿಸಲೆಂದು ಕರ್ತನಲ್ಲಿ ಬೇಡಿಕೊಳ್ಳುತ್ತೇನೆ.

ಕರ್ತನ ಸೇವಕಿಯಾದ

ಎ.ಪರಿಮಳ

# ಅಭಿಪ್ರಾಯ

ಪಾಸ್ಟರ್ ಕೆ.ಹಾಲೇಷ್ ನಾಯ್ಕ್ ಮತ್ತು ಕುಟುಂಬದವರು ತಿಳಿಸುವ ಅಭಿಪ್ರಾಯ ಏನೆಂದರೆ ನಂಬಿಕೆಯ ರಹಸ್ಯ' ಎಂಬ ಪುಸ್ತಕ ದೇವರಾತ್ಮನಿಂದ ಬರೆದ. ಸಹೋದರಿ ಪಿ.ತೇಜಸ್ ರವರಿಗೆ ಕರ್ತನ ಹೆಸರಿನಲ್ಲಿ ವಂದನೆಗಳು. ಈ ಪುಸ್ತಕ ಓದಿದ ಮೇಲೆ ನನ್ನ ಜೀವಿತದಲ್ಲಿ ನಂಬಿಕೆಯು ಬಹಳ ಪ್ರಾಮುಖ್ಯತೆ ಎಂದು ತಿಳಿದಿದ್ದೇನೆ. ಮತ್ತು ನಂಬಿಕೆಯು ಬಲವಾಗಿದೆ. ನಂಬಿಕೆಯು ಸಮರ್ಪಣೆಯ ನಂಬಿಕೆಯಾಗಿ ನನ್ನ ಜೀವಿತದಲ್ಲಿ ಮಾರ್ಪಟ್ಟಿದೆ ಮತ್ತು ನನ್ನ ಜೀವಿತದಲ್ಲಿ ನನ್ನ ಕುಟುಂಬದಲ್ಲಿ ನನ್ನ ಸೇವೆಯಲ್ಲಿ ಧೃಡವಾದ ನಂಬಿಕೆಯಿಂದ ಮುಂದುವರೆಯುತ್ತಿದ್ದೇನೆ ಹಾಗೆ ಈ ಪುಸ್ತಕದಿಂದ ದೇವರು ನನ್ನನ್ನು ಆಶೀರ್ವದಿಸಿದ್ದಾನೆ. ನಂಬಿಕೆಯಲ್ಲಿ ಯಥಾರ್ಥತೆ ಮತ್ತು ನಂಬಿಕೆಯಲ್ಲಿ ಮಹತ್ವವನ್ನು ಮತ್ತು ಅದ್ಭುತ ಕಾರ್ಯಗಳನ್ನು ಕಾಣುತ್ತಿದ್ದೇನೆ. ನಂಬಿಕೆಯಲ್ಲಿ ಜಯ ಸಿಕ್ಕಿದೆ ಈ ಪುಸ್ತಕದಿಂದ ನನ್ನ ನಂಬಿಕೆ ಹೆಚ್ಚಾಗಿ ಅಭಿವೃದ್ಧಿ ಹೊಂದಿದೆ ನನ್ನ ಕುಟುಂಬದಲ್ಲಿಯೂ ಮತ್ತು ನನ್ನ ಸೇವೆಯಲ್ಲಿಯೂ ಉಪಯೋಗವಾಗಿ ಕರ್ತನು ನಡೆಸಿದ್ದಾನೆ ಈ ಪುಸ್ತಕದಿಂದ ನನ್ನ ಜೀವಿತದಲ್ಲಿ ಹೆಚ್ಚಾದ ನಂಬಿಕೆಯನ್ನು ಹೊಂದಿದ್ದೇನೆ. ಮುಖ್ಯವಾಗಿ ಏನೆಂದರೆ ಸತ್ಯವೇದದಲ್ಲಿರುವ ದೇವರ ಮೇಲೆ ನಂಬಿಕೆ ಇಟ್ಟಿರುವ ಜನರನ್ನು ಮುಖ್ಯವಾಗಿಟ್ಟುಕೊಂಡು ಈ ಪುಸ್ತಕವನ್ನು ಬರೆದಿದ್ದಾರೆ ದೇವರಿಗೆ ಸ್ತೋತ್ರವಾಗಲಿ.

"ಅದ್ಭುತ ಸಾಕ್ಷಿ" ಎನ್ನುವ ಈ ಪುಸ್ತಕವು ಸಹ ತುಂಬ ಅದ್ಭುತವಾಗಿದೆ. ಈ ಪುಸ್ತಕವೂ ಸಹ ಸತ್ಯವೇದದಲ್ಲಿರುವ ಪ್ರಧಾನ ವ್ಯಕ್ತಿಗಳ ಕುರಿತಾಗಿ ಬರೆಯಲಾಗಿದೆ. ಹೇಗೆ ಪ್ರತಿಯೊಂದು ವ್ಯಕ್ತಿಯಲ್ಲಿ ತಪ್ಪು ಇರುತ್ತದೆ ನಮ್ಮ ಪೂರ್ವಿಕರು ಯಾವ ಯಾವ ತಪ್ಪುಗಳಿಂದ ಕೂಡಿದ್ದರು ಮತ್ತು ದೇವರಿಗೆ ಯಾವ ರೀತಿ ಮೆಚ್ಚಿಗೆಯಾಗಿ ನಡೆದುಕೊಂಡರು ಎಂದು ಈ ಪುಸ್ತಕವು ತಿಳಿಸುತ್ತದೆ. ಈ ಪುಸ್ತಕವನ್ನು ಓದಿದಮೇಲೆ ನನಗೆ ತುಂಬಾ ಆಶ್ಚರ್ಯವಾಯಿತು. ಮತ್ತು ನಾನು ಎಷ್ಟು ಪರಿಶುದ್ಧನಾಗಿ ನಡೆಯಬೇಕೆಂದು ಅರ್ಥವಾಯಿತು. ಯಾಕೆಂದರೆ ಕರ್ತನನ್ನು ಮುಖಾ-ಮುಖಿ ನೋಡಿದಂತ ಮೋಶೆಯೇ ಒಂದು

ಸಮಯದಲ್ಲಿ ತಪ್ಪಿತಸ್ತನಾಗಿ ಕಂಡುಬಂದನು ಎಂದ ಮೇಲೆ ನಾನು ಕರ್ತನ ಬಳಿ ಇಂದು ಯಾವ ರೀತಿಯಲ್ಲಿ ಕಾಣಿಸಬಹುದು ಎನ್ನುವ ಭಯ ನನ್ನಲ್ಲಿ ಹುಟ್ಟಿತು. ನಮ್ಮ ಸಭೆಗೆ ಈ ಪುಸ್ತಕವು ಬಹಳ ಆಶೀರ್ವದಕರವಾಗಿದೆ.

ಮತ್ತು 'ಪ್ರೀತಿಯ ಯಶಸ್ಸು' ಈ ಪುಸ್ತಕವು ಕೂಡ ಬಹಳ ಚನ್ನಾಗಿದೆ. ದೇವರಿಗೆ ಮಹಿಮೆ, ಈಗಿನ ಕಾಲದ ಸಭೆಗೆ ಮತ್ತು ಜನರಿಗೆ ಬಹಳ ಮುಖ್ಯವಾಗಿ ಬೇಕಾಗಿರುವ ಪುಸ್ತಕವಾಗಿದೆ. ಈಹೊತ್ತು ಅನೇಕ ಸಭೆಗಳಲ್ಲಿ ಮತ್ತು ಕುಟುಂಬಗಳಲ್ಲಿ ಜನರಲ್ಲಿ ನಿಜವಾದ ಕರುಣೆಯುಳ್ಳ ಪ್ರೀತಿಯಿಲ್ಲ ಆದರೆ ಈ ಪುಸ್ತಕ ಓದಿದ ಮೇಲೆ ನಿಜವಾಗಿಯೂ ಕರುಣೆಯುಳ್ಳ ಪ್ರೀತಿ ಏನೆಂದು ನನಗೆ ಗೊತ್ತಾಗಿದೆ. ಈ ಪುಸ್ತಕ ಅನೇಕ ಜನರಿಗೆ ಉಪಯೋಗವಾಗಿದೆ, ಮತ್ತು ನನ್ನ ಜೀವಿತದಲ್ಲಿಯೂ ನನ್ನ ಸಭೆಯಲ್ಲಿಯೂ ನನ್ನ ಕುಟುಂಬದಲ್ಲಿಯೂ ಈ ಪುಸ್ತಕದ ಮೂಲಕ ದೇವರು ಅನೇಕ ಕಾರ್ಯಗಳನ್ನು ಮಾಡಿದ್ದಾರೆ. ಅಪಾರವಾದ ಪ್ರೀತಿ, ಪರಲೋಕದ ಪ್ರೀತಿ, ನಿರಂತರವಾದ ಪ್ರೀತಿ, ಮತ್ತು ಸ್ನೇಹಿತನ ಪ್ರೀತಿ, ಹೃದಯದ ಪ್ರೀತಿ, ಸತ್ಯದ ಪ್ರೀತಿ ಮತ್ತು ಮರಣ ಗೆದ್ದ ಪ್ರೀತಿ, ಈ ಎಲ್ಲಾ ಪ್ರೀತಿ ಯೇಸುಕ್ರಿಸ್ತನಲ್ಲಿದೆ ಎಂದು ದೇವರು ನನಗೆ ಅತಿಶಯವಾಗಿ ಮಾತನಾಡಿದ್ದಾನೆ. ನಿಜವಾಗಿ ಈ ಪುಸ್ತಕದಿಂದ ಪ್ರೀತಿಯ ಬಗ್ಗೆ ಬಹಳವಾಗಿ ತಿಳಿದುಕೊಂಡಿದ್ದೇನೆ ಹಾಗೂ ನನ್ನ ಆತ್ಮೀಕ ಜೀವನದಲ್ಲಿ ಬದಲಾವಣೆ ತರುವಂತೆ ಕರ್ತನು ಮಾಡಿದ್ದಾನೆ.

ಈಗ 'ಕಣ್ಣೀರಿನ ಕೂಗು' ಎನ್ನುವ ಈ ಪುಸ್ತಕದಲ್ಲಿ ನಿಮಗೆ ನನ್ನ ಅಭಿಪ್ರಾಯವನ್ನು ತಿಳಿಸಲು ನಾನು ಬಹಳ ಸಂತೋಷವುಳ್ಳವನಾಗಿದ್ದೇನೆ. ನೀವೆಲ್ಲರೂ, ಫಾಸ್ಟರ್ ಪಿ.ತೇಜಸ್ಸ್ ರವರ ಈ ಪುಸ್ತಕಗಳನ್ನು ತಪ್ಪದೇ ಓದಬೇಕೆಂದು ನಿಮಗೆ ನನ್ನ ಸಲಹೆಯನ್ನು ಕೊಡುತ್ತೇನೆ. ಈ ಎಲ್ಲಾ ಪುಸ್ತಕಗಳು ನನ್ನ ಕುಟುಂಬಕ್ಕೂ ನನ್ನ ಸಭೆಗೂ ಮತ್ತು ನನಗೂ ತುಂಬಾ ಆಶೀರ್ವಾದಕರವಾಗಿರುವುದರಿಂದ ನಿಮಗೂ ಸಹ ಇದು ಆಶೀರ್ವಾದಕರವಾಗಿರುತ್ತದೆಂದು ನಾನು ಹೃದಯಪೂರ್ವಕವಾಗಿ ವಿಶ್ವಾಸಿಸುತ್ತೇನೆ.

"ಶಾಲೋಂ ಪ್ರಾರ್ಥನಾ ಮಂದಿರ" ಸಭೆ
ಫಾಸ್ಟರ್ ಹಾಲೇಷ್ ನಾಯ್ಕ್.ಕೆ
ಹೂವಿನ ಹಡಗಲಿ.

# ಪೀಠಿಕೆ

1. ನೊಂದ ಕೂಗು
2. ಇಕ್ಕಟ್ಟಿನ ಕೂಗು
3. ಮನದಾಳದ ಕೂಗು
4. ಕನಿಕರದ ಕೂಗು
5. ಮನಸ್ಸಿನ ಕೂಗು
6. ವಿಶ್ವಾಸಿಯ ಕೂಗು
7. ನನ್ನ ಕೂಗು
8. ನರಕದ ಕೂಗು

# 1. ನೊಂದ ಕೂಗು

**"ಯೆಹೋವನು ನೋಡಿ ತಾನು ಭೂಮಿಯ ಮೇಲೆ ಮನುಷ್ಯರನ್ನು ಉಂಟುಮಾಡಿದ್ದಕ್ಕೆ ಪಶ್ಚಾತ್ತಾಪಪಟ್ಟು ತನ್ನ ಹೃದಯದಲ್ಲಿ ನೊಂದು ಕೊಂಡನು." (ಆದಿ 6:6)**

ಅನೇಕರು ಕೇಳುವ ಪ್ರಶ್ನೆ 'ಯೆಹೋವ ದೇವರು' ಯಾರು? ಏನು ಅದರರ್ಥ ಎಂದು ಆದಿಕಾಂಡ 1:1–2:4 ರಲ್ಲಿ "ದೇವರು" ಎಂದು ಹೇಳುವ ಇಬ್ರಿಯ ಹೆಸರು 'ಎಲೋಹಿಮ್' ಎಂಬುದಾಗಿದೆ. ಆದಿಕಾಂಡ 2:5 ರಿಂದ ಪ್ರಾರಂಭವಾಗುವ ಸೃಷ್ಟಿಯ ವಿವರಣೆಯಲ್ಲಿ ದೇವರಿಗೆ ಉಪಯೋಗಿಸಿದ ಹೆಸರಿನೊಂದಿಗೆ 'ಯಾಹ್ವೆ' ಮತ್ತು 'ಎಲೋಹಿಮ್' ಎಂಬ ಇಬ್ರಿಯ ಹೆಸರುಗಳು ಸಂಯೋಗಗೊಂಡಿದೆ. ಇದನ್ನು ನಮ್ಮ ಭಾಷಾಂತರದಲ್ಲಿ "ಯೊಹೋವ ದೇವರು" ಎಂದು ಕರೆಯಲಾಗಿದೆ. ಎಲೋಹಿಮ್ ಎಂಬುವ ದೇವರ ಸಾಮಾನ್ಯ ಹೆಸರು, 'ಯಾಹ್ವೆ' ಎಂಬುದು ನಿರ್ದಿಷ್ಟ ಹೆಸರು ಆಗಿದೆ. ಮೋಶೆಯು ದೇವರಿಗೆ ನಾನು ಇಸ್ರಾಯೇಲ್ಯರ ಬಳಿಗೆ ಹೋಗಿ ನಿಮ್ಮ ಪಿತೃಗಳ ದೇವರು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದ್ದಾನೆಂದು ಹೇಳಿದಾಗ ಒಂದು ವೇಳೆ ಅವರು ಆತನ ಹೆಸರೇನೆಂದು ಕೇಳಿದರೆ ನಾನೇನು ಉತ್ತರಕೊಡಬೇಕು ಎಂದಾಗ–ದೇವರು ಮೋಶೆಗೆ ಹೇಳಿದ ಉತ್ತರ "ಯೆಹೋವನು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದ್ದಾನೆ ಎಂದು ಹೇಳು (ವಿಮೋ 3:15) ಅಂದನು. ಅದಕ್ಕಾಗಿ ಹಳೇ ಒಡಂಬಡಿಕೆಯಲ್ಲಿ ದೇವರನ್ನು "ಯೆಹೋವ" ಎನ್ನುವರು.

ದೇವರು ಆಕಾಶವನ್ನೂ ಭೂಮಿಯನ್ನೂ ನೋಡಿದಾಗ ಕ್ರಮವಿಲ್ಲದೆಯೂ ಬರಿದಾಗಿಯೂ ಇತ್ತು; ಆದಿಸಾಗರದ ಮೇಲೆ ಕತ್ತಲಿತ್ತು; ದೇವರಾತ್ಮವು ಜಲಸಮೂಹಗಳ ಮೇಲೆ ಚಲಿಸುತ್ತಿತ್ತು. ಕರ್ತನು ಎಲ್ಲವನ್ನು ನೋಡಿದಾಗ ಇದಕ್ಕೆಲ್ಲಾ ಒಂದು ರೂಪವನ್ನು ಕೊಡಬೇಕೆಂದು ಸೃಷ್ಟಿಕಾರ್ಯ ಮಾಡುವುದಕ್ಕೆ ಮೊದಲುಗೊಂಡರು. ಅವರು ಬರೀ ಬಾಯಿ ಮಾತಿನಿಂದ ಏನೇನು ಸೃಷ್ಟಿ ಮಾಡಿದರು ನೋಡಿರಿ.

**ಮೊದಲ ಸೃಷ್ಟಿ ಕಾರ್ಯಗಳು :**

1. ಬೆಳಕಾಗಲಿ ಅನ್ನಲು ಬೆಳಕಾಯಿತು; ದೇವರು ಆ ಬೆಳಕನ್ನು ಒಳ್ಳೇದೆಂದು ನೋಡಿದನು. ನಂತರ ಬೆಳಕನ್ನು ಕತ್ತಲೆಯನ್ನು ಬೇರೆ ಬೇರೆ ಮಾಡಿ ಬೆಳಕಿಗೆ ಹಗಲೆಂದೂ, ಕತ್ತಲೆಗೆ ಇರುಳೆಂದೂ ಹೆಸರಿಟ್ಟನು.

2. ಜಲಸಮೂಹಗಳ ನಡುವೆ ವಿಸ್ತಾರವಾದ ಗುಮಟವು ಉಂಟಾಗಲಿ ಅದು ಕೆಳಗಣ ನೀರು, ಮೇಲಣ ನೀರು ಬೇರೆ-ಬೇರೆ ಮಾಡಲಿ ಅಂದನು. ಬೇರೆ-ಬೇರೆ ಆದಾಗ ನೀರು ವಿಂಗಡಣೆಯಾಯಿತು. ದೇವರು ಆ ಗುಮಟಕ್ಕೆ 'ಆಕಾಶ' ಎಂದು ಹೆಸರಿಟ್ಟನು.

3. ಆಕಾಶದ ಕೆಳಗಿರುವ ನೀರೆಲ್ಲಾ ಒಂದೇ ಸ್ಥಳದಲ್ಲಿ ಕೂಡಿಕೊಳ್ಳಲಿ. ಒಣನೆಲವು ಕಾಣಿಸಲಿ ಅಂದಾಗ ಹಾಗೆಯೇ ಆಯಿತು. ಒಣನೆಲಕ್ಕೆ 'ಭೂಮಿ' ಎಂದು ಜಲಸಮೂಹಕ್ಕೆ 'ಸಮುದ್ರ'ವೆಂದೂ ಕರೆದನು. ಅದನ್ನು ಸಹಾ ಒಳ್ಳೇದೆಂದು ಹೇಳಿ; ಭೂಮಿಯು ಹುಲ್ಲನ್ನೂ ಬೀಜವುಳ್ಳ ಹಣ್ಣಿನ ಮರಗಳನ್ನೂ ಅವುಗಳ ಜಾತಿಗನುಸಾರವಾಗಿ ಹುಟ್ಟಿಸಲಿ ಎಂದು ಹೇಳಿದನು. ಅದೇ ರೀತಿ ಹುಲ್ಲು ಬೆಳೆದು ಜಾತಿಗನುಸಾರವಾಗಿ ಕಾಯಿಪಲ್ಯದ ಗಿಡಗಳು ಭೂಮಿಯ ಮೇಲೆ ಉಂಟಾದವು. ಬೀಜವುಳ್ಳ ಹಣ್ಣಿನ ಮರಗಳು ಕಾಣಿಸಿದವು. ದೇವರು ಇದನ್ನು ಸಹಾ ಒಳ್ಳೇದೆಂದು ನೋಡಿದನು.

4. ಆಕಾಶಮಂಡಲದಲ್ಲಿ ಬೆಳಕುಗಳು ಉಂಟಾಗಲಿ; ಅವು ಹಗಲಿರುಳುಗಳನ್ನು ಬೇರೆ-ಬೇರೆ ಮಾಡಲಿ; ಇದಲ್ಲದೆ ಅವು ಗುರುತುಗಳಾಗಿದ್ದು ಸಮಯಗಳನ್ನೂ ದಿನಸಂವತ್ಸರಗಳನ್ನೂತೋರಿಸಲಿ; ಭೂಮಿಯ ಮೇಲೆ ಬೆಳಕು ಕೊಡುವುದಕ್ಕೆ ಆಕಾಶದಲ್ಲಿ ದೀಪಗಳಂತಿರಲಿ ಅಂದಾಗ ಹಾಗೆಯೇ ಆಯಿತು. ಹಗಲನ್ನಾಳುವುದಕ್ಕೆ ದೊಡ್ಡ ಬೆಳಕು, ಇರುಳನ್ನಾಳುವದಕ್ಕೆ ಚಿಕ್ಕ ಬೆಳಕನ್ನೂ ಉಂಟು ಮಾಡಿದರು. ಬೆಳಕನ್ನು ಆಕಾಶದಲ್ಲಿಟ್ಟು ನಕ್ಷತ್ರಗಳನ್ನು ಸಹಾ ಉಂಟುಮಾಡಿದನು. ಭೂಮಿಯ ಮೇಲೆ ಬೆಳಕನ್ನು ಕೊಡುವುದಕ್ಕೂ ಹಗಲಿರುಳುಗಳನ್ನೂ ಆಳುವುದಕ್ಕೂ ಬೆಳಕು-ಕತ್ತಲನ್ನು ಬೇರೆ-ಬೇರೆ ಮಾಡಿದನು. ದೇವರು ಇದನ್ನು ಸಹಾ ಒಳ್ಳೇದೆಂದು ನೋಡಿದನು. ದೊಡ್ಡ ಬೆಳಕು ಅಂದರೆ ಸೂರ್ಯ ಮತ್ತು ಚಿಕ್ಕಬೆಳಕು ಅಂದರೆ ಚಂದ್ರ ಎಂದರ್ಥ.

5. ಗುಂಪು-ಗುಂಪಾಗಿ ಚಲಿಸುವ ಜಲಜಂತುಗಳು ನೀರಿನಲ್ಲಿ ತುಂಬಿಕೊಳ್ಳಲಿ; ಪಕ್ಷಿಗಳು ಭೂಮಿಯ ಮೇಲೆ ಅಂತರಿಕ್ಷದೊಳಗೆ ಹಾರಾಡಲಿ ಎಂದಾಗ ಮಹಾಜಲಚರಗಳನ್ನು ನೀರಿನಲ್ಲಿ ತುಂಬಿರುವ ಸಕಲವಿಧವಾದ ಜೀವಿಗಳನ್ನೂ ರೆಕ್ಕೆಗಳುಳ್ಳ ಸಕಲವಿಧವಾದ ಪಕ್ಷಿಗಳನ್ನೂ ಅವುಗಳ ಜಾತಿಗನುಸಾರವಾಗಿ ಉಂಟು ಮಾಡಿದನು, ಅದೇ ರೀತಿಯಲ್ಲಿ ಅವುಗಳಿಗೆ-ನೀವು ಅಭಿವೃದ್ಧಿಯಾಗಿ ಹೆಚ್ಚಿರಿ; ಜಲಚರಗಳು ಸಮುದ್ರದ ನೀರಿನಲ್ಲಿ ತುಂಬಿಕೊಳ್ಳಲಿ; ಪಕ್ಷಿಗಳು ಭೂಮಿಯ ಮೇಲೆ ಹೆಚ್ಚಲಿ ಎಂದು ಆಶೀರ್ವದಿಸಿದನು. ಇದನ್ನೆಲ್ಲಾ ಕರ್ತನು ಒಳ್ಳೇದೆಂದು ನೋಡಿದನು.

6. ಭೂಮಿಯಿಂದ ಜೀವಜಂತುಗಳು ಉಂಟಾಗಲಿ; ಪಶುಕ್ರಿಮಿಗಳೂ ಕಾಡುಮೃಗಗಳೂ ತಮ್ಮ-ತಮ್ಮ ಜಾತಿಗನುಸಾರವಾಗಿ ಹುಟ್ಟಲಿ ಅಂದನು. ದೇವರು ಕಾಡುಮೃಗಗಳನ್ನೂ ಪಶುಗಳನ್ನೂ ನೆಲದ ಮೇಲೆ ಹರಿದಾಡುವ ಕ್ರಿಮಿ-

ಕೀಟಗಳನ್ನೂ ಅವುಗಳ ಜಾತಿಗನುಸಾರವಾಗಿ ಉಂಟು ಮಾಡಿ, ಎಲ್ಲವನ್ನು ಒಳ್ಳೇದೆಂದು ನೋಡಿದನು, ನಂತರ-ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟು ಮಾಡೋಣ ; ಅವರು ಸಮುದ್ರದಲ್ಲಿರುವ ಮೀನುಗಳ ಮೇಲೆಯೂ ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ ಪಶುಗಳ ಮೇಲೆಯೂ ಎಲ್ಲಾ ಸಮಸ್ತ ಭೂಮಿಯ ಮೇಲೆಯೂ ದೊರೆತನ ಮಾಡಲಿ ಅಂದನು. ಹೀಗಿರಲು ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು; ಆಗ ಮನುಷ್ಯನು ಬದುಕುವ ಪ್ರಾಣಿಯಾದನು, ಅದೇ ರೀತಿ ಮನುಷ್ಯನು ಒಂಟಿಯಾಗಿರುವುದು ಒಳ್ಳೇದಲ್ಲ; ಅವನಿಗೆ ಸರಿಬೀಳುವ ಸಹಕಾರಿಯನ್ನು ಉಂಟುಮಾಡುವೆನು ಎಂದು ಹೇಳಿ ಆ ಮನುಷ್ಯನಿಗೆ ಗಾಢನಿದ್ರೆಯನ್ನು ಬರಮಾಡಿ ಅವನ ಪಕ್ಕೆಯ ಎಲುಬುಗಳಲ್ಲಿ ಒಂದನ್ನು ತೆಗೆದುಕೊಂಡು ಅದರ ಸ್ಥಳವನ್ನು ಮಾಂಸದಿಂದ ಮುಚ್ಚಿ ತಾನು ಮನುಷ್ಯನಿಂದ ತೆಗೆದಿದ್ದ ಎಲುಬನ್ನು ಸ್ತ್ರೀಯಾಗಿ ಮಾಡಿ ಆಕೆಯನ್ನು ಅವನ ಬಳಿಗೆ ಕರತಂದನು. ಆ ಮನುಷ್ಯನು ಆಕೆಯನ್ನು ನೋಡಿ-ಈಗ ಸರಿ; ಈಕೆಯು ನನ್ನ ಎಲುಬುಗಳಿಂದ ಬಂದ ಎಲುಬೂ; ನನ್ನ ಮಾಂಸದಿಂದ ಬಂದ ಮಾಂಸವೂ ಆಗಿದ್ದಾಳೆ ಎಂದು ಹೇಳಿ ಈಕೆಯು ನರನಿಂದ ಬಂದುದರಿಂದ ನಾರೀ ಎನ್ನಿಸಿಕೊಳ್ಳುವಳು ಅಂದನು.

ಈ ಆರು ದಿನಗಳಲ್ಲಿ 'ಯೆಹೋವ' ದೇವರು ನೀನು ಈಗ ವಾಸಿಸುತ್ತಿರುವ ಈ ಪ್ರಕೃತಿಯನ್ನು ಅಂದರೆ ಈ ಪ್ರಪಂಚವನ್ನು ಸೃಷ್ಟಿ ಮಾಡಿದರು. ನೀನು ನಿವಸಿಸುವ ಈ ಸ್ಥಳ ಅಂದ ಚಂದವಾಗಿರಬೇಕೆಂದು ನಿನ್ನನ್ನು ಸೃಷ್ಟಿ ಮಾಡುವುದಕ್ಕಿಂತ ಮುಂಚಿತವಾಗಿಯೇ ನಿನಗೆ ಏನೇನು ಅವಶ್ಯಕತೆಗಳು ಬೇಕಾಗಿರುತ್ತದೆ ಎಂದು ಮೊದಲೇ ತಿಳಿದು ಸಕಲವನ್ನು ತನ್ನ ಅಧಿಕಾರದಿಂದಲೂ ಬಾಯಿಮಾತಿನಿಂದಲೂ ಸೃಷ್ಟಿಮಾಡಿದರು. ಮತ್ತು ಇದೆಲ್ಲದರ ಮೇಲೆ ಮನುಷ್ಯನಿಗೆ ಆಳ್ವಿಕೆ ಮಾಡುವ ಅಧಿಕಾರವನ್ನು ಕೊಟ್ಟರು. ದೇವರು ನಿನ್ನ ಮೇಲೆ ಎಂತ ಪ್ರೀತಿ ಇಟ್ಟಿರುವುದಾದರೆ ಆ ಅಧಿಕಾರವನ್ನು ಕೊಟ್ಟಿದ್ದಾರೆ. ಪ್ರಕೃತಿಗೆ ಬೇಕಾದ ಎಲ್ಲಾ ಸೃಷ್ಟಿ ಕಾರ್ಯಗಳು ಮುಗಿಯಿತು; ಈಗ ಮನುಷ್ಯನನ್ನು ಸೃಷ್ಟಿಮಾಡಬೇಕು ಎನ್ನುವ ಸಂಧರ್ಭ, ಇಲ್ಲಿ ಸ್ವಲ್ಪ ಆಲೋಚಿಸಿರಿ ಮನುಷ್ಯನು ಇನ್ನೂ ಹುಟ್ಟಲಿಲ್ಲ! ಹುಟ್ಟುವುದಕ್ಕೆ ಮುಂಚಿತವಾಗಿಯೇ ಸಕಲ ಸೃಷ್ಟಿಯ ಮೇಲೆ ಅಧಿಕಾರ ಕೊಟ್ಟಿದ್ದಾರೆ, ಇದೇ ನಿಜವಾದ ಆಶ್ಚರ್ಯಕರವಾದ ಪ್ರೀತಿಯಾಗಿದೆ. ಭೂಮಿಯಲ್ಲಿ ಒಂದೊಂದು ಸೃಷ್ಟಿಯಾಗುವಾಗ ದೇವರು ಹೃದಯದಲ್ಲಿ ಸಂತೋಷ ಪಡುತ್ತಿದ್ದರು. ಯಾಕೆಂದರೆ ನನ್ನ ಮಕ್ಕಳು ಸಮಸ್ತ ಭೂಮಿಯ ಮೇಲೆ ದೊರೆತನ ಮಾಡಲಿ. ಅವರಿಗೆ ಯಾವ ಕೊರತೆಯೂ ಆಗ ಬಾರದು ಎಂದು ಮನುಷ್ಯನನ್ನು ಸೃಷ್ಟಿ ಮಾಡುವುದಕ್ಕೆ ಮುಂಚಿತವಾಗಿಯೇ ಸಮಸ್ತ ಸೃಷ್ಟಿಕಾರ್ಯವನ್ನು ಮಾಡಿ ಮುಗಿಸಿದರು.

ದೇವರ ಮಗುವೇ ಮನುಷ್ಯನನ್ನು ದೇವರು ಬರೀ ಮಾತಿನಿಂದ ಉಂಟುಮಾಡಲಿಲ್ಲ; ಮನುಷ್ಯನೂ ಸಹಾ ತನ್ನ ಸ್ವರೂಪದಲ್ಲೇ ಇರಬೇಕೆಂದು ಮಣ್ಣಿನಿಂದ ತನ್ನ ಕೈಗಳಿಂದಲೇ ತಾನು ಇರುವ ರೀತಿಯಲ್ಲಿಯೇ ರೂಪಿಸಿ, ತನ್ನ

ಮೂಗಿನಿಂದ ಜೀವ ಶ್ವಾಸವನ್ನು ಊದಿದನು. ಆಗ ಮನುಷ್ಯನು ಬದುಕುವ ಪ್ರಾಣಿಯಾದನೇ ಹೊರತು ಬೇರೆ ಯಾವುದೇ ವಿಜ್ಞಾನದಿಂದ ಮತ್ತೊಂದರಿಂದ ಮನುಷ್ಯನು ಸೃಷ್ಟಿಯಾಗಲಿಲ್ಲ.

"ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟು ಮಾಡೋಣ;" ಇಲ್ಲಿ ನಮ್ಮ (ನಾವು) ಎಂಬ ಬಹುವಚನವು ದೇವರನ್ನೂ ಆತನ ಸನ್ನಿಧಾನದಲ್ಲಿರುವ ಪರಲೋಕದ ಜೀವಿಗಳನ್ನೂ ಸೂಚಿಸಿದ್ದಾರೆ (ಆದಿ.11;7, ಯೆಶಾ 6;8, 1ಅರಸು 22:19) ಇಲ್ಲಿ "ಮನುಷ್ಯ" ಎಂಬ ಪದಕ್ಕೆ ಇಬ್ರಿಯ ಭಾಷೆಯಲ್ಲಿ ಆದಾಮ ಎಂಬ ಪದವಿದ್ದು, ಅದು ಸೃಷ್ಟಿಸಲ್ಪಟ್ಟ ಮೊದಲನೆಯ ಮನುಷ್ಯನ ಹೆಸರು ಆಗಿದೆ (3;21) ಮನುಷ್ಯರು ಮಾತ್ರ ದೇವರ "ಹೋಲಿಕೆ"ಯಲ್ಲಿರುವರು ಅಂದರೆ, ಅವರು ದೇವರೊಂದಿಗೆ ಒಂದು ವಿಶೇಷ ಸಂಬಂಧ ಹೊಂದಿದ್ದು ಭೂಮ್ಯಾಕಾಶ ಸಮುದ್ರಗಳಲ್ಲಿರುವ ಎಲ್ಲಾ ಜೀವಿಗಳ ಮೇಲೆಯೂ ದೇವರ ಪ್ರತಿನಿಧಿಗಳಾಗಿದ್ದು ದೊರೆತನ ಮಾಡುವರು. ಇದರೊಂದಿಗೆ ಆದಿ 5:1, ಕೀರ್ತ 8:5–8 ಕೂಡ ನೋಡಿರಿ.

7. ಭೂಮ್ಯಾಕಾಶಗಳೂ ಅವುಗಳಲ್ಲಿರುವ ಸಮಸ್ತವೂ ನಿರ್ಮಿತವಾದವು. ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿಬಿಟ್ಟು ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡರು. ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿ ಆ ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡದ್ದರಿಂದ ಆ ದಿನವನ್ನು ಪರಿಶುದ್ಧ(ಸಬ್ಬತ್) ದಿನವಾಗಿರಲಿ ಎಂದು ಆಶೀರ್ವದಿಸಿದನು. "ವಿಶ್ರಮಿಸಿಕೊಂಡನು" ಎಂಬ ಭಾಷಾಂತರಿಸಲ್ಪಟ್ಟ ಇಬ್ರಿಯ ಮೂಲ ಭಾಷೆಯ ಕ್ರಿಯಾಪದವು "ವಿಶ್ರಾಂತಿ" ಎಂಬ ಅರ್ಥವುಳ್ಳ 'ಸಬ್ಬತ್' ಎಂಬ ಪದಕ್ಕೆ ಆಧಾರವಾಗಿದೆ. ಮೋಶೆಯ ಧರ್ಮಶಾಸ್ತ್ರದಲ್ಲಿ ಸಬ್ಬತ್ ಆಚರಿಸಬೇಕೆಂಬ ಆಜ್ಞೆಗೆ ದೇವರು ಈ ದಿನದಲ್ಲಿ ವಿಶ್ರಮಿಸಿಕೊಂಡದ್ದು ಒಂದು ಕಾರಣ ಎನ್ನಲಾಗಿದೆ. ವಿಮೋ 20:11, 31:12–17, ಇದರೊಂದಿಗೆ ಇಬ್ರಿ 4:10 ಕೂಡ ನೋಡಿರಿ. ಯಾಕೆಂದರೆ 'ಸಬ್ಬತ್‌ದಿನ'ವನ್ನು ದೇವರ ದಿನವೆಂದು ಆಚರಣೆಗೆ ತರುವದಕ್ಕೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಆರು ದಿವಸಗಳಲ್ಲಿ ನೀನು ದುಡಿದು ನಿನ್ನ ಕೆಲಸವನ್ನೆಲ್ಲಾ ಮಾಡಬೇಕು. ಏಳನೆಯ ದಿನವು ನಿನ್ನ ದೇವರಾದ ಯೆಹೋವನಿಗೆ ಮೀಸಲಾದ ವಿಶ್ರಾಂತಿ ದಿನವಾಗಿದೆ; ಅದರಲ್ಲಿ ನೀನು ಯಾವ ಕೆಲಸವನ್ನೂ ಮಾಡಬಾರದು. ನಿನ್ನ ಗಂಡು ಮಕ್ಕಳು ಹೆಣ್ಣು ಮಕ್ಕಳು ಗಂಡಾಳು ಹೆಣ್ಣಾಳು ಪಶುಗಳು ನಿನ್ನ ಊರಲ್ಲಿ ಇರುವ ಅನ್ಯದೇಶದವರು ಯಾವ ಕೆಲಸವನ್ನೂ ಮಾಡಬಾರದು. ಆರು ದಿನಗಳಲ್ಲಿ ಯೆಹೋವನು ಭೂಮ್ಯಾಕಾಶಗಳನ್ನೂ ಸಮುದ್ರವನ್ನೂ ಅವುಗಳಲ್ಲಿರುವ ಸಮಸ್ತವನ್ನೂ ನಿರ್ಮಾಣಮಾಡಿ ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡನು. ಯೆಹೋವನು ಸಬ್ಬತ್ ದಿನಕ್ಕೆ ಒಡೆಯನಾಗಿದ್ದಾನೆ.

ನನ್ನನ್ನು ಎಲ್ಲರು ಪ್ರಶ್ನೆ ಹಾಕಿ ಕೇಳುತ್ತಿದ್ದರು ಏನೆಂದರೆ 'ಯೆಹೋವ ದೇವರು' ಎಂದರೇನು? ಅದರ ಅರ್ಥ ತಿಳಿಸಿ ಎಂದು. ಆದಿ.1:1, 2:4ರಲ್ಲಿ "ದೇವರು" ಎಂದು ಹೇಳುವ ಪದಕ್ಕೆ ಇಬ್ರಿಯ ಹೆಸರು 'ಎಲೋಹಿಮ್'

ಎಂಬುದಾಗಿದೆ. ಆದಿ 2:5 ರಿಂದ ಪ್ರಾರಂಭವಾಗುವ ಸೃಷ್ಟಿಯ ಎರಡನೆಯ ವಿವರಣೆಯಲ್ಲಿ ದೇವರಿಗೆ ಉಪಯೋಗಿಸಿದ ಹೆಸರೊಂದಿಗೆ, ಯಾಹ್ವೆ ಎಂಬುದು ನಿರ್ಧಿಷ್ಟ ಹೆಸರು ಇದೆ. ಮೋಶೆಯು ದೇವರಿಗೆ – ನಾನು ಇಸ್ರಾಯೇಲ್ಯರ ಬಳಿಗೆ ಕಳುಹಿಸಿದ್ದಾನೆಂದು ಹೇಳಿದಾಗ ಒಂದು ವೇಳೆ ಅವರು ಆತನ ಹೆಸರೇನೆಂದು ಕೇಳಿದರೆ ನಾನೇನು ಉತ್ತರಕೊಡಬೇಕು ಎಂದಾಗ ಇದು ದೇವರು ಮೋಶೆಗೆ ಹೇಳಿದ ಹೆಸರು "ಕರ್ತನಾದ ಯೆಹೋವನು" ವಿಮೋ 3:14,15 ದೇವರ ವೈಯಕ್ತಿಕವಾದ ಹೆಸರು ಹಳೆಯ ಒಡಂಬಡಿಕೆಯಲ್ಲಿ ಸುಮಾರು 5,700 ಬಾರಿ ಕಂಡು ಬರುತ್ತದೆ. ಉರಿಯುವ ಪೊದೆಯಲ್ಲಿ (ವಿಮೋ 3:1–5) ಮೋಶೆಗೆ ಇದೇ ಹೆಸರು ಪ್ರಕಟವಾಯಿತು ಇಬ್ರಿಯ ಭಾಷೆಯಲ್ಲಿ ಇದನ್ನು ಬರೆಯಲು "YHWH" ಎಂಬ ನಾಲ್ಕು ಅಕ್ಷರಗಳು ಬಳಸಲಾಗಿದ್ದು, ಬಹುಶಃ ಯಾಹ್ವೆ (YAH-WAY) ಎಂದು ಉಚ್ಚರಿಸಬೇಕಿತ್ತು. ಈ ಹೆಸರಿನ ಸರಿಯಾದ ಉಚ್ಚರಣೆಯು ನಿಖರವಾಗಿ ತಿಳಿದಿಲ್ಲ. ಯಾಕೆಂದರೆ, ಯೆಹೂದ್ಯರು ಈ ಹೆಸರನ್ನು ಅತಿ ಪವಿತ್ರವೆಂದು ಪರಿಗಣಿಸಿದ್ದರಿಂದ, ದೋಷ ಪರಿಹಾರಕ್ಕೆ ಮಹಾದಿನದ ಸಮಯದಲ್ಲಿಯೂ ವಿಶೇಷ ದಿನಗಳಲ್ಲಿಯೂ ಹೊರತಾಗಿ ಆ ಹೆಸರನ್ನು ಅವರೆಂದಿಗೂ ಗಟ್ಟಿಯಾಗಿ ಉಚ್ಚರಿಸುತ್ತಿರಲಿಲ್ಲ. ಅಷ್ಟು ಮಾತ್ರವಲ್ಲದೆ ನಿರ್ದಿಷ್ಟವಾಗಿ ಆರಿಸಲ್ಪಟ್ಟ ಒಬ್ಬ ಯಾಜಕನು ಮಾತ್ರವೇ ದೇವರ ಹೆಸರನ್ನು ಉಚ್ಚರಿಸಲು ಅವಕಾಶವಿದ್ದಿತ್ತು.

ಪ್ರಿಯ ದೇವರ ಮಗುವೇ 7ನೇ ದಿನ ಸಬ್ಬತ್ ದಿನ ಎಂದು ಹೇಳಿ ಆ ದಿನಕ್ಕೆ ಕರ್ತನು ಒಡೆಯನಾಗಿ ಇರುವುದರಿಂದ ಹೃದಯದಲ್ಲಿ ಎಲ್ಲರೂ ಭಯ ಪಡಬೇಕಾಗಿದೆ. ಆರು ದಿನಗಳು ನಿನಗೋಸ್ಕರ ನಿನ್ನ ಸ್ವಂತ ಕಾರ್ಯಗಳಿಗೋಸ್ಕರ ಬಿಟ್ಟು ಕೊಟ್ಟಿರುವಾಗ ಏಳನೇ ದಿನ ಸಹಾ ನೀನೇ ಉಪಯೋಗಿಸುವುದಾದರೆ ದೇವರಿಗೆ ನೀನು ಯಾವ ರೀತಿ ಗೌರವಿಸುತ್ತೀದ್ದೀಯಾ? ಎಲ್ಲಿ ದೇವರ ಮಾತಿಗೆ ಅಧೀನವಾಗಿದ್ದೀಯಾ. 'ಮನಸಾಕ್ಷಿ' ಎನ್ನುವುದು ನಿನ್ನಲ್ಲಿ ಇದೆಯಾ? ಇರುವುದಾದರೆ ಏಳನೇ ದಿನ ದೇವರಿಗೆ ಮಾತ್ರ ಎಂದು ಅರ್ಥಮಾಡಿಕೋ! ದೇವರು ನಿನಗೋಸ್ಕರ ಸಕಲವನ್ನೂ ನಿರ್ಮಿಸಿ ನಿನ್ನ ಅಧೀನದಲ್ಲಿಟ್ಟು ನೀನು ಸ್ವತಂತ್ರವಾಗಿಯೂ ಮತ್ತು ಅಧಿಕಾರವಾಗಿಯೂ ಜೀವಿಸುವಂತೆ ಎಲ್ಲವನ್ನೂ ಕೊಟ್ಟನು. ಯಾವುದಕ್ಕೂ ಕಡಿಮೆಯಾಗಬಾರದೆಂದು; ಅದೇ ರೀತಿ ನೀನು ಒಂಟಿಯಾಗಿರುವುದನ್ನು ನೋಡಿ ನಿನ್ನ ಕಷ್ಟ–ದುಃಖದಲ್ಲೂ ಸಂತೋಷ–ಸಮಾಧಾನದಲ್ಲೂ ನಿನ್ನೊಂದಿಗೆ ಜೊತೆಯಾಗಿ ಇರುವುದಕ್ಕೆ ನಿನ್ನಂತೆಯೇ ಇರುವ ವ್ಯಕ್ತಿಯನ್ನು ಕೊಟ್ಟರು. ಯಾಕೆ ನಿನ್ನ ಜೊತೆಗೆ ಪ್ರಾಣಿಯನ್ನಾಗಲಿ, ಸಸಿಯನ್ನಾಗಲಿ, ಪಕ್ಷಿಯನ್ನಾಗಲಿ ಅಥವಾ ಸೃಷ್ಟಿ ಮಾಡಿರುವ ಪ್ರಕೃತಿಯ ವಸ್ತುವನ್ನಾಗಲಿ ಕೊಡಲಿಲ್ಲ. . . .. ! ಯೋಚನೆ ಮಾಡಿ ನೋಡು ಕರ್ತನು ನಿನ್ನನ್ನು ಎಷ್ಟು ಆಳವಾಗಿ ಪ್ರೀತಿಸುತ್ತಿದ್ದಾನೆ. ಕೆಲವರು ಕೇಳುತ್ತಾರೆ 'ದೇವರು ನಮಗೋಸ್ಕರ ಇರುವುದಾದರೆ ಈ ರೀತಿ ಯಾಕೆ ನಮಗೆ ಕಷ್ಟಗಳು ಬರುತ್ತವೆ? ದೇವರು ಇದನ್ನು ನೋಡುತ್ತಿಲ್ಲವಾ? ಎಂದು ಅನೇಕ ರೀತಿಯಲ್ಲಿ ಕೇಳುತ್ತಾರೆ.

ದೇವರು ಎಲ್ಲಾ ಸೃಷ್ಟಿಕಾರ್ಯ ಮಾಡುವಾಗಲೂ ಅವರ ಹೃದಯದಲ್ಲಿ

ಸಂತೋಷವಿತ್ತು. ಪ್ರತಿಯೊಂದೂ ಅಂದಚಂದವಾಗಿತ್ತು ಏದೇನ್ ತೋಟವನ್ನು ನೋಡುವಾಗಲ್ಲೆಲ್ಲಾ, ಪ್ರಾಣಿಗಳೂ, ಪಕ್ಷಿಗಳೂ ಸಮುದ್ರ-ಗುಡ್ಡಗಳನ್ನು ಕಾಣುವಾಗ ತುಂಬಾ ರಮ್ಯವಾಗಿತ್ತು, ಅಲ್ಲಿ ಎಲ್ಲವೂ ಸಮಾಧಾನ ನೀಡುತ್ತಿತ್ತು. ದೇವರು ಮಾತನಾಡುವ ಶಬ್ಧವನ್ನು ಎಲ್ಲವೂ ಕೇಳಿಸಿಕೊಳ್ಳುತ್ತಿದ್ದವು. ಅದರಂತೆ ನಡೆದುಕೊಳ್ಳುತ್ತಿತ್ತು. ಆದರೆ ಯಾವಾಗ ಮನುಷ್ಯನನ್ನು ಸೃಷ್ಟಿಮಾಡಿದರೋ ಆಗ ಅವನ ಅವಿಧೇಯತೆಯು ಕರ್ತನ ಹೃದಯವು ನೊಂದು ಕೂಗಿಕೊಂಡಿತು. ಪ್ರಿಯ ಸ್ನೇಹಿತರೇ ಕೇಳುವ ಪ್ರಶ್ನೆಗೆ ನಿಮ್ಮಲ್ಲೇ ಉತ್ತರವಿದೆ. ಆದರೆ ಅದನ್ನು ಗ್ರಹಿಸಿಕೊಳ್ಳಲು ಆಗುತ್ತಿಲ್ಲಾ ಅಷ್ಟೇ! ದೇವರ ಪ್ರೀತಿ ನಿನ್ನ ಮೇಲೆ ಇದ್ದ ಕಾರಣವೇ ನಿನಗೋಸ್ಕರ ಪ್ರತಿಯೊಂದನ್ನು ಸೃಷ್ಟಿಮಾಡಿಕೊಟ್ಟರು. ಆದರೆ ನೀನು ದೇವರು ಹೇಳುವ ಮಾತನ್ನು ಕೇಳದೇ ತಾತ್ಸಾರ ಮಾಡಿ ಅವಿಧೇಯನಾ/ಳಾಗಿ ನಡೆದುಕೊಂಡ ಕಾರಣ (ಆದಿ 3:8-19) ಶಾಪಕ್ಕೆ ಗುರಿಯಾದೆ. ಆದ್ದರಿಂದ ನಿನ್ನ ಜೀವನದಲ್ಲಿ ಕಷ್ಟ ದುಃಖ ನಿನ್ನನ್ನು ಹಿಂಬಾಲಿಸುತ್ತದೆ. ನೀನು ದೇವರ ಮಾತನ್ನು ಕೇಳದೇ ಇಷ್ಟ ಬಂದ ರೀತಿಯಲ್ಲಿ ಸ್ವಂತ ಆಲೋಚನೆಯಲ್ಲಿ ನಡೆದ ಕಾರಣ ಈ ಲೋಕದಲ್ಲಿ ನೀನು ಜೀವಿಸುವವರೆಗೂ ಸಂಕಟವನ್ನು ಅನುಭವಿಸಲೇಬೇಕು. ಈ ಸಂಕಟದಿಂದ ಬಿಡಿಸಲು, ಶಾಪದಿಂದ ಪಾಪದಿಂದ ನಿನ್ನನ್ನು ಬಿಡಿಸಲು ಯೆಹೋವನಾದ ದೇವರು ನಿನಗೋಸ್ಕರ ಎಲ್ಲವನ್ನು ತ್ಯಾಗ ಮಾಡಿದರು. ನೀನು ಆತನಿಗೆ ಏನು ತ್ಯಾಗ ಮಾಡಿದ್ದೀಯಾ? ನೀನು ಪ್ರಶ್ನೆಯನ್ನು ಕೇಳುವುದಕ್ಕೆ ಮುಂಚಿತವಾಗಿ ನೀನು ನಿನ್ನನ್ನು ಶೋಧಿಸಿಕೊಂಡು ನಂತರ ದೇವರಿಗೆ ಅಥವಾ ಮನುಷ್ಯರಿಗೆ ಪ್ರಶ್ನೇ ಹಾಕಿದರೆ ಉತ್ತರ ಸಿಗುತ್ತದೆ.

ಅಂದು ಆದಾಮನು ತಪ್ಪು ಮಾಡುವಾಗ ನನ್ನ ಕರ್ತನ ಹೃದಯವು ನೊಂದು ಆದಾಮನೇ ನೀನು ಎಲ್ಲಿರುವೆ ಎಂದು ಕೂಗಿಕೊಂಡಿತು. ಈಗ ನಿನಗಾಗಿ ಇಂದು ಆತನು ನೊಂದು ಕೊಳ್ಳುತ್ತಿದ್ದಾನೆ, ನನ್ನ ಮಗುವೇ ನೀನು ನನ್ನ ಬಿಟ್ಟು ಎಲ್ಲಿ ಹೋದುತ್ತಿರುವೆ ಎಂದು ನಿನ್ನನ್ನೇ ನೊಂದ ಮನಸ್ಸಿನಿಂದ ಕೂಗಿ ಕರೆಯುತ್ತಿದ್ದಾನೆ. ಪ್ರೀತಿಯ ದೇವರ ಮಗುವೆ ಕರ್ತನ ಶಬ್ಧಕ್ಕೆ ಕಿವಿಗೊಡುತ್ತೀಯಾ!

ನೋಹನ ಚರಿತ್ರೆಗೆ ಬರುವಾಗ, ಮನುಷ್ಯರ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾಗಿರುವದನ್ನೂ ಅವರು ಯೋಚಿಸುವದೆಲ್ಲವು ಯಾವಾಗಲೂ ಬರೀ ಕೆಟ್ಟದ್ದಾಗಿರುವದನ್ನು ಯೆಹೋವನು ಯಾವಾಗಲೂ ದೃಷ್ಟಿಸಿ ನೋಡುತ್ತಲೇ ಇದ್ದನು. ಅದಕ್ಕಾಗಿ ಯೆಹೋವನು-ನಾನು ಸೃಷ್ಟಿಸಿದ ಮನುಷ್ಯ ಜಾತಿಯನ್ನು ಭೂಮಿಯ ಮೇಲಿನಿಂದ ಅಳಿಸಿಬಿಡುವೆನು; ಅದನ್ನು ಉಂಟು ಮಾಡಿದ್ದಕ್ಕೆ ನನ್ನಲ್ಲಿ ಪಶ್ಚಾತ್ತಾಪ ಹುಟ್ಟಿತು; ಮನುಷ್ಯರೊಂದಿಗೆ ಸಕಲಮೃಗ ಕ್ರಿಮಿ-ಪಕ್ಷಿಗಳನ್ನೂ ಅಳಿಸಿ ಬಿಡುವೆನು ಅಂದುಕೊಂಡನು. (ಆದಿ 6:7) ಮನುಷ್ಯರನ್ನು ಸೃಷ್ಟಿ ಮಾಡಿದ ದೇವರು ಅವನಿಗೆ ಕೊಟ್ಟಿರುವ ಸಕಲವನ್ನೂ ನಾಶಮಾಡಬೇಕು ಎನ್ನುವ ತೀರ್ಮಾನಕ್ಕೆ ಬಂದಿದ್ದರೆ ಅಲ್ಲಿರುವ ಪಾಪಗಳು ಎಷ್ಟು ದೊಡ್ಡದಾಗಿದೆ ಎಂದು ಯೋಚಿಸಿನೋಡು. ಅವಿಧೇಯತೆಯೇ ಎಲ್ಲಾ ಪಾಪಕ್ಕಿಂತ ಬಹು ದೊಡ್ಡದಾದ ಪಾಪವಾಗಿದೆ. ಅಲ್ಲಿರುವ ಜನರು ಆತನ ಮಾತಿಗೆ ವಿಧೇಯಳಾ/ನಾಗಿ ಇದ್ದಿದ್ದರೆ ಈ ರೀತಿ ಆಗುತ್ತಿರಲಿಲ್ಲ;

ಆದರೆ ಯೆಹೋವನ ಭಯವೇ ಪರಿಶುದ್ಧವಾದುದಾಗಿದೆ; ಅದೇ ಶಾಶ್ವತವಾದದ್ದು, ಯೆಹೋವನ ವಿಧಿಗಳು ಯಥಾರ್ಥವಾದವುಗಳು; ಅವು ಕೇವಲ ನ್ಯಾಯವಾಗಿವೆ ಇದನ್ನು ತಿಳಿದ ಒಬ್ಬ ವ್ಯಕ್ತಿ ಯೆಹೋವನಲ್ಲಿ ಆಶ್ರಯಹೊಂದಿದ್ದನು. ದೇವರು ಎಲ್ಲಾ ನಾಶ ಮಾಡಬೇಕೆನ್ನುವ ಸಮಯದಲ್ಲಿ ಕರ್ತನ ದಯೆಯು 'ನೋಹ'ನಿಗೆ ದೊರಕಿತು.

ಯಾಕೆಂದರೆ-ನೋಹನು ನೀತಿವಂತನೂ ತನ್ನ ಕಾಲದವರಲ್ಲಿ ತಪ್ಪಿಲ್ಲದವನೂ ಆಗಿದ್ದನು; ಅವನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಂಡಿದ್ದನು. ಆಗ ಯೆಹೋವನು ನೋಹನೊಟ್ಟಿಗೆ-ನಾನು ಎಲ್ಲಾ ದೇಹಿಗಳಿಗೂ ಅಂತ್ಯವನ್ನು ತೀರ್ಮಾನಿಸಿದ್ದೇನೆ; ಭೂಲೋಕವು ಅವರ ಅನ್ಯಾಯದಿಂದ ತುಂಬಿ ಅದೆ; ನಾನು ಅವರನ್ನೂ ಭೂಮಿಯ ಮೇಲಿರುವದೆಲ್ಲವನ್ನೂ ಅಳಿಸಿ ಬಿಡುತ್ತೇನೆ. ನೀನು ತುರಾಯಿ ಮರದಿಂದ 'ನಾವೆ'ಯನ್ನು ಮಾಡಿಕೋ ಅದರಲ್ಲಿ ತುಂಬ ಕೋಣೆಗಳು ಇರಬೇಕು; ಒಳಕ್ಕೂ ಹೊರಕ್ಕೂ ರಾಳವನ್ನು ಹಚ್ಚು ನೀನು ಅದನ್ನು ಮಾಡಬೇಕಾದ ವಿಧಾನ ಹೇಗೆಂದರೆ- ಅದು ಮುನ್ನೂರು ಮೊಳ ಉದ್ದವೂ ಐವತ್ತು ಮೊಳ ಅಗಲವೂ ಮೂವತ್ತು ಮೊಳ ಎತ್ತರವೂ ಉಳ್ಳದ್ದಾಗಿರಬೇಕು. ಅದರ ಚಾವಣಿಯ ಕೆಳಗೆ ಸುತ್ತಲೂ ಒಂದು ಮೊಳ ಎತ್ತರದ ಬೆಳಕು ಕಂಡಿಯನ್ನು ಮಾಡಬೇಕು; ಪಕ್ಕದಲ್ಲಿ ಬಾಗಲನ್ನಿಡಬೇಕು. ನಾವೆಯಲ್ಲಿ ಒಂದರ ಮೇಲೆ ಒಂದಾಗಿ ಮೂರು ಅಂತಸ್ತುಗಳನ್ನು ಮಾಡಬೇಕು. ನಾನಂತೂ ಭೂಮಿಯ ಮೇಲೆ ಜಲಪ್ರಳಯವನ್ನು ಬರಮಾಡಿ ಆಕಾಶದ ಕೆಳಗಿರುವ ಸಕಲ ಪ್ರಾಣಿಗಳನ್ನೂ ಅಳಿಸಿ ಬಿಡುವೆನು; ಭೂಮಿಯಲ್ಲಿರುವ ಸಮಸ್ತವೂ ಲಯವಾಗುವುದು. ಆದರೆ ನಿನ್ನ ಕೂಡ ನಾನು ನನ್ನ ನಿಬಂಧನೆಯನ್ನು ಮಾಡುತ್ತೇನೆ. ನೀನು ನಿನ್ನ ಹೆಂಡತಿ ಮಕ್ಕಳು ಸೊಸೆಯರು ಸಹಿತವಾಗಿ ನಾವೆಯಲ್ಲಿ ಸೇರಬೇಕು. ಇದಲ್ಲದೆ ಜೀವಿಗಳ ಪ್ರತಿಜಾತಿಯಲ್ಲಿಯೂ ಒಂದು ಗಂಡು ಒಂದು ಹೆಣ್ಣು ಹೀಗೆ ಎರಡೆರಡನ್ನು ನಾವೆಯಲ್ಲಿ ಸೇರಿಸಿ ನಿನ್ನೊಂದಿಗೆ ಉಳಿಸಿ ಕಾಪಾಡಬೇಕು. ಅಂದನು. ಈ ರೀತಿ ಮಾತಾಡಿದ ಮೇಲೆ ನೋಹ ನಾವೆಯನ್ನು ಕಟ್ಟಿ ಸಕಲವನ್ನು ತನ್ನ ಬಳಿಯಲ್ಲಿ ಸೇರಿಸಿಕೊಂಡನು. ಆಗ ಕರ್ತನು ನೋಹನಿಗೆ- "ನೀನೂ ನಿನ್ನ ಮನೆಯವರೆಲ್ಲರೂ ನಾವೆಯಲ್ಲಿ ಸೇರಿರಿ; ಈಗಿನವರಲ್ಲಿ ನೀನೊಬ್ಬನೇ ನನ್ನ ಮುಂದೆ ನೀತಿವಂತನಾಗಿ ನಡೆಯುವದನ್ನು ನೋಡಿದ್ದೇನೆ (ಆದಿ 7:1) ನೀನು ಎಲ್ಲಾ ಶುದ್ಧ ಪಶುಗಳಲ್ಲಿ ಏಳೇಳು ಗಂಡು ಹೆಣ್ಣುಗಳನ್ನೂ ನಿನ್ನೊಂದಿಗೆ ತೆಗೆದುಕೋ, ಪಕ್ಷಿಗಳಲ್ಲಿಯೂ ಏಳೇಳು ಗಂಡು ಹೆಣ್ಣುಗಳನ್ನು ತೆಗೆದುಕೋ, ಹೀಗೆ ಆಯಾ ಜಾತಿಯನ್ನು ಭೂಮಿಯ ಮೇಲೆ ಉಳಿಸಿ ಕಾಪಾಡಬೇಕು. ಏಳು ದಿನಗಳ ನಂತರ ನಾನು ಭೂಮಿಯ ಮೇಲೆ ನಾಲ್ವತ್ತು ದಿವಸ ಹಗಲಿರುಳು ಮಳೆಯನ್ನು ಸುರಿಸಿ ನನ್ನಿಂದಾದ ಜೀವರಾಶಿಗಳನ್ನೆಲ್ಲಾ ಭೂಮಿಯ ಮೇಲಿನಿಂದ ಅಳಿಸಿ ಬಿಡುತ್ತೇನೆ ಎಂದು ಹೇಳಿದನು.

ಪ್ರಿಯ ಸ್ನೇಹಿತರೇ ನೋಡಿರಿ ಕರ್ತನ ಮಾತಿಗೆ ಅವಿಧೇಯರಾದ ಕಾರಣ ಅಂತಹ ದೊಡ್ಡ ಅನಾಹುತಕ್ಕೆ ಒಳಗಾದರು. ಅಲ್ಲಿ ನೋಹನ ಕುಟುಂಬಕ್ಕೆ ಮಾತ್ರ

ದಯೆ ದೊರಕಿತು. ಎಷ್ಟು ಆಶ್ಚರ್ಯ ನೋಡಿರಿ, ಅಂತಹ ಸಂದರ್ಭದಲ್ಲೂ ದೇವರ ಕಣ್ಣಿಗೆ ನೋಹನು ಕಂಡು ಬಂದನು. ಯೆಹೋವನು ಏಳು ದಿನಗಳು ಆದ ಮೇಲೆ ಜಲಪ್ರಳಯವು ಭೂಮಿ ಮೇಲೆ ಬಂದಿತು. ಭೂಮಿಯ ಕೆಳಗಿರುವ ಸಾಗರದ ಸೆಲೆಗಳು ಒಡೆದವು; ಆಕಾಶದ ತೂಬುಗಳು ತೆರೆದವು. ನಾಲ್ವತ್ತು ದಿನಗಳೂ ಹಗಲಿರುಳು ಭೂಮಿಯ ಮೇಲೆ ದೊಡ್ಡ ಮಳೆ ಸುರಿಯಿತು. ನೋಹನ ಕುಟುಂಬದವರೆಲ್ಲರೂ ನಾವೆಯಲ್ಲಿದ್ದರು ಆಯಾ ಜಾತಿಗನುಸಾರವಾಗಿ ಸಕಲ ಪ್ರಾಣಿಗಳು ಬಂದು ನಾವೆಯಲ್ಲಿ ಸೇರಿಕೊಂಡವು. ಆಗ ಜಲಪ್ರಳಯದಿಂದ ಭೂಮಿಯ ಮೇಲೆ ನೀರು ಹೆಚ್ಚುತ್ತಾ ನಾವೆಯನ್ನು ಎತ್ತಲು ಅದು ನೀರಿನ ಮೇಲೆ ತೇಲಾಡಿತು. ನೀರು ಪ್ರಬಲವಾಗಿ ಬಲು ಹೆಚ್ಚಲು ನಾವೆಯು ಅದರ ಮೇಲೆ ಚಲಿಸಿತು. ಎಲ್ಲಾ ಬೆಟ್ಟಗಳೂ ಮುಚ್ಚಿಹೋದವು, ನೀರು ಬೆಟ್ಟಕ್ಕಿಂತಲೂ ಹದಿನೈದು ಮೊಳ ಹೆಚ್ಚಲು ಅವುಗಳು ಸಂಪೂರ್ಣವಾಗಿ ಮುಚ್ಚಿಹೋದದರಿಂದ ಪಶು-ಪಕ್ಷಿ-ಮೃಗ-ಕ್ರಿಮಿಗಳು ಮನುಷ್ಯರು ಸಹಿತವಾಗಿ ಭೂಮಿಯ ಮೇಲೆ ಸಂಚರಿಸುವ ಸಕಲ ಪ್ರಾಣಿಗಳೂ ಲಯವಾದವು, ಮೂಗಿನಿಂದ ಶ್ವಾಸಬಿಡುವ ಭೂಜಂತುಗಳೆಲ್ಲಾ ಸತ್ತವು, ಮನುಷ್ಯರು ಮೊದಲುಗೊಂಡು ಎಲ್ಲವೂ ನಾಶವಾಯಿತು, ನಾವೆಯಲ್ಲಿ ಇದ್ದವರು ಮಾತ್ರ ಉಳಿದುಕೊಂಡರು.

ನೋಹನು ದೇವರ ಕಣ್ಣಿಗೆ ಬೀಳದೇ ಇದ್ದಿದ್ದರೇ ಈಗ ನೀನು ಸಹಾ ಈ ಭೂಮಿ ಮೇಲೆ ಬದುಕಲು ಆಗುತ್ತಿರಲಿಲ್ಲ, ಒಬ್ಬನು/ಳು ಮಾಡಿದ ತಪ್ಪಿನಿಂದ ಎಲ್ಲರೂ ಶಿಕ್ಷೆಗೆ ಒಳಗಾಗಬೇಕು. ಮೊದಲು ನೀನು ತಪ್ಪು ಮಾಡಿ, ಅದೇ ರೀತಿ ಇನ್ನೊಬ್ಬರಿಗೆ ಅದು ಹರಡಿಕೊಂಡು ಹೋಗುತ್ತದೆ. ಅದರಿಂದ ಹೆಚ್ಚು ನಾಶನಕ್ಕೆ ಕಾರಣವಾಗುತ್ತದೆ, ಅದಕ್ಕೆ ಒಬ್ಬನಾದರೂ ಕುಟುಂಬದಲ್ಲಿ ನೀತಿವಂತರೂ ಕಂಡು ಬಂದಾಗ ಆ ಕುಟುಂಬ, ನಾಶವಾಗುವುದಿಲ್ಲ, ಕರ್ತನ ಹೃದಯವನ್ನು ಯಾವ ಕಾರಣಕ್ಕೂ ನೊಂದಿಸಬೇಡ, ಆದರೆ ಈಗಿನ ಕಾಲದ ಮನುಷ್ಯನು ತನ್ನ ಇಷ್ಟ ಬಂದ ರೀತಿಯಲ್ಲಿ ಮೋಸ ಮಾಡಿಕೊಂಡು, ಒಬ್ಬರಿಗೊಬ್ಬರು ಜಗಳ ಮಾಡಿಕೊಂಡು, ನೀನು ಮೇಲು, ನೀನು ಕೀಳು ಎಂದು ಜಾತಿ ಭೇದ ಮಾಡುತ್ತಾ, ಶ್ರೀಮಂತ-ಬಡವ ಎಂದುಕೊಂಡು ಚಿಕ್ಕ-ಚಿಕ್ಕ ಜಗಳದಲ್ಲಿ ಕೊಲೆಗಳನ್ನು ಮಾಡುತ್ತಾ ವೈರಾಗ್ಯದಿಂದ ಜೀವಿಸುತ್ತಾ ದೇವರ ಭಯವಿಲ್ಲದೇ ದುಷ್ಟಕಾರ್ಯಗಳನ್ನು ನಡೆಸಿಕೊಂಡು ಹೋಗುವ ಮನುಷ್ಯರನ್ನು ಕರ್ತನು ಮೇಲಿನಿಂದ ನೋಡಿ ನೊಂದ ಮನಸ್ಸಿನಲ್ಲಿ ತನ್ನ ಬಳಿಗೆ ಬರುವುದಕ್ಕೆ ಎಲ್ಲರನ್ನೂ ಕೂಗಿಕರೆಯುತ್ತಲೇ ಇದ್ದಾನೆ. ಆದರೆ ಮನುಷ್ಯನಿಗೆ ದೇವರ ಭಯವೆಲ್ಲಿದೆ? ದೇವರ ಪ್ರೀತಿ ಅವರಿಗೆ ಅರ್ಥವಾಗುತ್ತಾ! ದೇವರ ಬಗ್ಗೆ ಯೋಚಿಸಲೂ ಸಹಾ ಈಗಿರುವ ಸಂತತಿಗೆ ಸಮಯವೇ ಇರುವುದಿಲ್ಲ. ತನ್ನ ಇಷ್ಟ ಬಂದ ರೀತಿಯಲ್ಲಿ ನಡೆದು ಕರ್ತನ ಮನಸ್ಸನ್ನು ನೋಯಿಸುತ್ತಲೇ ಇದ್ದಾರೆ. ಎಷ್ಟು ಸುವಾರ್ತಿಕರು ಹೇಳಿದರೂ. ಎಷ್ಟು ಪ್ರಸಂಗಿಗಳು ಹೇಳಿದರೂ ಕಿವಿಯಿದ್ದು ಕೇಳಲಾರದ ಹಾಗೆ ಜೀವಿಸುವ ಮಂದಮತಿಗಳಾಗಿದ್ದಾರೆ. ಈ ಎಲ್ಲಾ ವಿಚಾರದಿಂದ ನನ್ನ ಕರ್ತನು ನೊಂದುಕೊಳ್ಳುತ್ತಿದ್ದಾನೆ.

ಈ ಪುಸ್ತಕವನ್ನು ಓದುತ್ತಿರುವ ನೀನಾದರೋ ಕರ್ತನ ನೊಂದ ಮನಸ್ಸನ್ನು ಅರ್ಥಮಾಡಿಕೊಂಡು ಜೀವಿಸುವುದಕ್ಕೆ ಪ್ರಯತ್ನಿಸು! ನಿನ್ನ ವಿಚಾರವಾಗಿ ಕರ್ತನು ಎಷ್ಟು ಆಲೋಚಿಸುತ್ತಿದ್ದಾರೆಂದು ತಿಳಿದುಕೋ ತನ್ನ ಒಬ್ಬನೇ ಮಗನನ್ನು ನಿನಗೋಸ್ಕರ ಬಲಿಯಾಗಿ ಕೊಡುವುದರಲ್ಲಿ ಆತನು ಎಷ್ಟು ನಿನ್ನ ಬಗ್ಗೆ ಚಿಂತಿಸುತ್ತಿದ್ದಾನೆಂದು ತಿಳಿದುಕೋ.

ತನ್ನ ಮಗನನ್ನು ಬಲಿಯಾಗಿ ಕೊಡುವಾಗ ಆತನ ಮನಸ್ಸು ತನ್ನ ಒಬ್ಬನೇ ಕುಮಾರನ ಮೇಲೆ ಎಷ್ಟೋ ನೊಂದಿತು. ಆದರೆ ಈಗ ಎಲ್ಲಾ ವ್ಯಕ್ತಿಗಳು ವಿಶೇಷವಾಗಿ ಕರ್ತನನ್ನು ಅರಿತುಕೊಂಡ ಮಕ್ಕಳೂ ಸಹ ಕ್ರಿಸ್ತನ ತ್ಯಾಗವನ್ನು ಮತ್ತು ತಂದೆಯ ನೊಂದ ಕೂಗನ್ನು ಯಾರೂ ಸರಿಯಾಗಿ ಅರ್ಥಮಾಡಿಕೊಳ್ಳದೆ ತನ್ನ ಇಷ್ಟ ಬಂದ ಪ್ರಕಾರ ಜೀವಿಸುತ್ತಾ, ಸ್ವಾರ್ಥಿಗಳಾಗಿ ತನ್ನದೇ ಆದ ಜೀವನ ಶೈಲಿಯಲ್ಲಿ ಮುಳುಗಿ ತನ್ನ ಕುಟುಂಬ, ತನ್ನ ಆದಾಯ, ತನ್ನ ಮರ್ಯಾದೆ, ತನ್ನ ಆಸ್ತಿಗೋಸ್ಕರ, ತನ್ನ ಸುಖ-ಸಂತೋಷಕ್ಕೋಸ್ಕರ ಜೀವಿಸುತ್ತಾ ಕರ್ತನ ಮನಸ್ಸನ್ನು ನೋಯಿಸುತ್ತಲೇ ಇದ್ದಾರೆ. ಆದರೆ ನೀನಾದರೋ ಆ ರೀತಿಯಲ್ಲಿ ಇರಬೇಡ, ಯಾಕೆಂದರೆ -"ನೀನು ಕೂತುಕೊಳ್ಳುವುದೂ ಏಳುವದೂ ಆತನಿಗೆ ಗೊತ್ತಿದೆ; ದೂರದಿಂದಲೇ ನಿನ್ನ ಆಲೋಚನೆಗಳನ್ನು ಬಲ್ಲವನಾಗಿದ್ದಾನೆ, ನೀನು ನಡೆಯುವುದನ್ನು ಮಲಗುವುದನ್ನೂ ಶೋಧಿಸಿ ಗ್ರಹಿಸಿಕೊಳ್ಳುತ್ತಾನೆ. ನಿನ್ನ ನಡತೆಯೆಲ್ಲಾ ಕರ್ತನಿಗೆ ಗೋಚರವಾಗಿದೆ, ನಿನ್ನ ನಾಲಿಗೆಯ ಮಾತುಗಳಲ್ಲಿ ಆತನು ಅರಿಯದೆ ಇರುವಂಥದು ಒಂದೂ ಇಲ್ಲ, ಆತನು ಸುತ್ತಲೂ ನಿನ್ನನ್ನು ಆವರಿಸಿದ್ದಾನೆ. ಆತನ ಕೈಯನ್ನು ನಿನ್ನ ಆತನ ಮೇಲೆ ಇಟ್ಟಿದ್ದಾನೆ" (ಕೀರ್ತ 139;2-5) ಕರ್ತನಿಗೆ ಭಯಭಕ್ತಿಯುಳ್ಳ ವ್ಯಕ್ತಿಯಾಗಿ ಜೀವಿಸಿ ನಿನ್ನಿಂದ ಆತನ ಮನಸ್ಸು ನೋವಾಗದಂತೆ ನೀನು ನಡೆಯಬೇಕಾಗಿರುವುದು ನಿನ್ನ ಕರ್ತವ್ಯವಾಗಿದೆ.

ಕರ್ತನ ಜ್ಞಾನವು ಬಹು ಆಶ್ಚರ್ಯವಾಗಿದೆ; ಬಹು ಉನ್ನತವಾದದ್ದು. ಅದಕ್ಕಾಗಿ ನೀನು ಕರ್ತನಲ್ಲಿ ಭಯಭಕ್ತಿಯಿಂದ ಜೀವಿಸು, ನಾಶನಕ್ಕೆ ಒಳಗಾಗದೇ ನಿತ್ಯಜೀವಕ್ಕಾಗಿ ಪ್ರಯಾಸ ಪಡು; ನೋಹನ ರೀತಿಯಲ್ಲಿ ಇಕ್ಕಟ್ಟಿನಲ್ಲೂ ನೀತಿವಂತಳಾ/ನಾಗಿ ಕರ್ತನ ದೃಷ್ಟಿಗೆ ನೀನು ಕಾಣಿಸುವಾಗ ನಿನ್ನ ಕುಟುಂಬದವರೆಲ್ಲರೂ, ನಿನ್ನ ಸ್ನೇಹಿತರೆಲ್ಲರು, ನಿನ್ನ ನೆರೆಹೊರೆಯವರೆಲ್ಲರೂ ನಿನ್ನ ಮುಖಾಂತರ ರಕ್ಷಿಸಲ್ಪಡಲು ಸಾಧ್ಯವಾಗುತ್ತದೆ. ಕರ್ತನ ಮಾರ್ಗದಲ್ಲಿ ನಡೆಯದೇ ಪಾಪದ ಜೀವಿತದಲ್ಲಿ ಸಿಲುಕಿಕೊಂಡು ಜಿಗುಪ್ಸೆಯಲ್ಲಿ ಇರುವುದಾದರೆ ಪ್ರಯೋಜನವಿಲ್ಲ; ನೋಹನ ಕಾಲದಲ್ಲಿ ಜನರು ಜಲಪ್ರಳಯದಲ್ಲಿ ಸಿಕ್ಕಿ ನಾಶವಾದರು. ಆದರೆ ಈಗ ದೇವರು ಮನುಷ್ಯನು ಮಾಡುತ್ತಿರುವ ಘೋರ ಕೃತ್ಯಗಳನ್ನು ಕಂಡು ನೊಂದು ಕೊಂಡಿದ್ದಾರೆ ಅದಕ್ಕಾಗಿ ಇಡೀ ಪ್ರಪಂಚವನ್ನು ಬೆಂಕಿಯಿಂದ ನಾಶಮಾಡಬೇಕೆಂದು ತೀರ್ಮಾನಿಸಿದ್ದಾರೆ. ನೀನು ಹೋಗುವ ಪಾಪದ ಮಾರ್ಗ ಈಗ ನಿನಗೆ ಆನಂದವಾಗಿ ತೋರುತ್ತದೆ, ಆದರೆ ಅದು ನಿನ್ನನ್ನು ಕರ್ತನೆಡೆಗೆ ಸೇರಿಸುವುದಿಲ್ಲ, ನರಕದ ಕಡೆಗೆ ಸೇರಿಸುತ್ತದೆ. ಇಂತಹ ಬೆಂಕಿಯಲ್ಲಿ ಸಿಕ್ಕಿ ನಾಶವಾಗುವುದಾದರೆ ಯಾರೂ ಬಂದು ನಿನ್ನನ್ನು ಬಿಡಿಸುವುದಿಲ್ಲ. ನಾಶದಿಂದ

ತಪ್ಪಿಸಿ ಕೊಳ್ಳಬೇಕು ಎನ್ನುವುದಾದರೆ ಕರ್ತನ ಮಾತಿಗೆ ವಿಧೇಯಳಾ/ನಾಗಿ ನಡೆದುಕೊಂಡು ನೀನು ಇರುವ ಸ್ಥಳದಲ್ಲಿ ಮಾಡುವ ಕೆಲಸಕಾರ್ಯಗಳಲ್ಲಿ ನೀತಿವಂತಳಾ/ನಾಗಿಯೂ ಒಳ್ಳೆ ವ್ಯಕ್ತಿಯಾಗಿಯೂ ಜೀವಿಸಲು ಅಭ್ಯಾಸ ಮಾಡಿಕೋ. ಆಗ ಕರ್ತನ ನೊಂದ ಕೂಗಿಗೆ ಸಮಾಧಾನ ಪಡಿಸುವ ಒಳ್ಳೇ ವ್ಯಕ್ತಿಯು ನೀನೇ ಆಗಿರುತ್ತೀಯ.

ಆದಾಮನು ಪಾಪ ಮಾಡುವುದಕ್ಕಿಂತ ಮುಂಚೆ ಪ್ರತಿದಿನವೂ ಕರ್ತನು ಬಂದು ಅವನನ್ನು ಮಾತನಾಡಿಸುತ್ತಿದ್ದನು. ಆದರೆ ಹೆಂಡತಿಯ ಮಾತು ಕೇಳಿಕೊಂಡು ಆದಾಮನು ಪಾಪ ಮಾಡಿದ ಮೇಲೆ, ಕರ್ತನನ್ನು, ಆತನ ಪ್ರಸನ್ನತೆಯನ್ನು, ಆತನನ್ನು ನೋಡುವ ಭಾಗ್ಯವನ್ನು, ಆತನು ಕೊಟ್ಟ ಏದೇನ್ ತೋಟವನ್ನು, ತನಗೆ ಕೊಟ್ಟ ಸ್ವಾತಂತ್ರ್ಯವನ್ನು ಸಕಲವನ್ನು ಕಳೆದುಕೊಂಡನು. ಆದರೆ ನೀನು ಇಂದು ಕಲ್ವಾರಿಯ ತ್ಯಾಗದ ಮುಖಾಂತರ ಆತನನ್ನು ಪಡೆದುಕೊಂಡಿದ್ದಿಯ. ಈಗ ನೀನೇ ಚಿಂತಿಸು ಆದಾಮನ ರೀತಿಯಲ್ಲಿ ನೀನು ಕಳೆದುಕೊಳ್ಳಲು ಇಷ್ಟಪಡುತ್ತೀಯಾ! ಅಥವಾ ನೋಹನ ರೀತಿಯಲ್ಲಿ ನೀತಿವಂತನಾಗಿ ನಡೆದುಕೊಂಡು ಕರ್ತನ ಮನಸ್ಸನ್ನು ಸಂತೋಷ ಪಡಿಸುತ್ತೀಯಾ! ನೀನೇ ತೀರ್ಮಾನಿಸು. ನಿನ್ನ ತೀರ್ಮಾನಕ್ಕಾಗಿ ಇಂದು ಕರ್ತನು ಎದುರು ನೋಡುತ್ತಿದ್ದಾನೆ.

"ಇಕ್ಕಟ್ಟಿನ ದಾರಿಯಲ್ಲಿ ನಿನ್ನನ್ನು ಚೈತನ್ಯಗೊಳಿಸುವನು." ಆಮೆನ್

# 2. ಇಕ್ಕಟ್ಟಿನ ಕೂಗು

"ನನ್ನನ್ನು ಇಕ್ಕಟ್ಟಿನಿಂದ ಬಿಡಿಸಿ ಇಂಪಾದ ಸ್ಥಳದಲ್ಲಿ ಸೇರಿಸಿದಾತನೇ, ನನ್ನನ್ನು ಕರುಣಿಸಿ ನನ್ನ ಪ್ರಾರ್ಥನೆಯನ್ನು ಅಂಗೀಕರಿಸು." (ಕೀರ್ತ 4:1)

ಸತ್ಯವೇದದಲ್ಲಿ ಕರ್ತನನ್ನು ಕಿನ್ನರಿಯಿಂದ ಸ್ತುತಿ ಸ್ತೋತ್ರಗಳನ್ನು ಹೇಳುತ್ತಾ ಯಾವಾಗಲೂ ದೇವರ ನಾಮವನ್ನು ಮಹಿಮೆ ಪಡಿಸಿರುವ ಒಂದು ವ್ಯಕ್ತಿಯನ್ನು ನೋಡುತ್ತೇವೆ. ಕರ್ತನು ಆ ವ್ಯಕ್ತಿಯನ್ನು ಆರಿಸಿಕೊಂಡು ಉತ್ತಮವಾದ ವ್ಯಕ್ತಿಯನ್ನಾಗಿ ಮಾರ್ಪಡಿಸಿದ್ದಾನೆ.

ಅಂತಹ ಒಂದು ವ್ಯಕ್ತಿಯ ಬಗ್ಗೆ ನಾವು ವಿಶೇಷವಾಗಿ ಇಂದು ತಿಳಿಯಬೇಕಾಗಿದೆ. ಅವನು ಯಾರಿಗೂ ಬೇಡದವನೂ ಆಗಿ ಕುರಿಯನ್ನು ಮೇಯಿಸುವ ಸಾಧಾರಣ ವ್ಯಕ್ತಿಯಾಗಿದ್ದನು, ಮನುಷ್ಯರಿಗೆ ಅವನ ಅವಶ್ಯವಿರಲಿಲ್ಲ ಆದರೆ ಕರ್ತನಿಗೆ ಅವಶ್ಯವಿತ್ತು. ಯಾಕೆಂದರೆ ಸ್ತುತಿ ಮಾಡುವಂತಹ ವ್ಯಕ್ತಿಗಳನ್ನು ಕರ್ತನು ಮೇಲೆ ತರುವವನಾಗಿದ್ದಾನೆ. ಎಲ್ಲಾ ಇಕ್ಕಟ್ಟಿನಲ್ಲಿಯೂ ಸ್ತುತಿ-ಸ್ತೋತ್ರಗಳನ್ನು ಕಿನ್ನರಿಯಿಂದ ಭಾರಿಸುತ್ತಿದ್ದಂತಹ ವ್ಯಕ್ತಿಯ ಹೆಸರು ದಾವೀದನೆಂದು. ಈ ದಾವೀದನ ಮುಖಾಂತರ ಆಶೀರ್ವಾದ ಹೊರಬರಬೇಕು ಕರ್ತನ ನಾಮ ಮಹಿಮೆಗೊಳ್ಳಬೇಕು. ಈ ದಾವೀದನು ಇಕ್ಕಟ್ಟಿನಲ್ಲಿ ಇರುವಾಗ ಮನುಷ್ಯರ ಬಳಿ ಏನೂ ಕೇಳುತ್ತಿರಲಿಲ್ಲ, ಏನೂ ಹೇಳುತ್ತಿರಲಿಲ್ಲ; ಅವನು ಯಾವಾಗಲೂ ತನ್ನ ದುಃಖ ಭಾರವನ್ನು ಕರ್ತನ ಬಳಿ ಹೇಳುತ್ತಾ ಸ್ತುತಿ-ಸ್ತೋತ್ರಗಳನ್ನು ಸಲ್ಲಿಸುತ್ತಿದ್ದನು. ಆದುದರಿಂದ ಅವನ ಎಲ್ಲಾ ಕಾರ್ಯಗಳು ಪೂರ್ಣವಾಗಿ ಸಫಲವಾಗಿ ಜಯಹೊಂದಿಕೊಳ್ಳುತ್ತಿದ್ದವು.

ದಾವೀದನಿಗೆ ಇಕ್ಕಟ್ಟು ಬಂದಾಗ ಕರ್ತನ ಬಳಿ ಹೀಗೇ ಹೇಳುತ್ತಿದ್ದ-"ನನ್ನ ಸುತ್ತಲು ಸನ್ನದ್ಧರಾಗಿ ನಿಂತಿರುವ ಸಾವಿರಾರು ವೈರಿಗಳಿಗಾದರೂ ನಾನು ಹೆದರೆನು. ಯೆಹೋವನೇ, ನನ್ನ ದೇವರೇ ನನ್ನ ಎಲ್ಲಾ ಶತ್ರುಗಳು ದವಡೆಯ ಮೇಲೆ ಬಡಿದು ಅವರ ಹಲ್ಲುಗಳನ್ನು ಉದುರಿಸಿ ಬಿಟ್ಟವನೇ, ಎದ್ದು ಬಂದು ನನ್ನನ್ನು ರಕ್ಷಿಸು." ಹಾಗೂ "ರಕ್ಷಣೆಯು ಯೆಹೋವನಿಂದಲೇ ಉಂಟಾಗುವುದು." ಎಂದು ತನ್ನ ಇಕ್ಕಟ್ಟಿನ ಕೂಗನ್ನು ದೇವರ ಬಳಿ ಮಾತ್ರ ತಿಳಿಸುವಾಗ ತಕ್ಷಣ ಉತ್ತರ ಕೊಡುವ ದೇವರು ದಾವೀದನ ಹತ್ತಿರವಿರುತ್ತಿದ್ದನು. ಮುಯ್ಯಿಗೆ ಮುಯ್ಯಿ ತೀರಿಸುವ ದೇವರು ಆತನ ಪ್ರಾರ್ಥನೆಗೆ ಉತ್ತರ ಕೊಡುತ್ತಿದ್ದರು. ಆದರೆ ದಾವೀದನ ಸಂತತಿಯು ನಿರಂತರವಾಗಿ ಆಳುವದೆಂದು ದೇವರು ದಾವೀದನಿಗೆ ವಾಗ್ದಾನ ಮಾಡಿದ್ದನು. 2ಸಮುವೇಲ 7 ರಲ್ಲಿ ನಾವು ಗಮನಿಸ ಬಹುದು ದಾವೀದನ ನಂಬಿಕೆ ಎಷ್ಟು ಬಲವಾಗಿದೆ ಎಂದು, ಎಲ್ಲಾ ಶತ್ರುಗಳು ಅವನಿಗೆ ಎದುರಿಗಾಗಿ ನಿಂತಾಗ ಹೃದಯದಲ್ಲಿ ವೈರಿಗಳಿಂದ ಭಯಪೀಡಿತನಾಗಿದ್ದಾಗಲೂ ಮನಸ್ಸಿನಲ್ಲಿ

ಯೆಹೋವನು ತನ್ನನ್ನು ಕಾಪಾಡುವನೆಂದು ತಿಳಿದು ಸುಖವಾಗಿ ನಿದ್ರೆಮಾಡಿದನು. ನೋಡಿರಿ ಎಂಥಹ ಅಪಾರವಾದ ನಂಬಿಕೆ ಅಂತಹ ಒಂದು ಇಕ್ಕಟ್ಟಿನಲ್ಲಿಯೂ ಕರ್ತನನ್ನು ಆಶ್ರಯಿಸಿದನು. ಅಂತಹ ಧೃಢವಾದ ನಂಬಿಕೆ ಇದ್ದರೆ ಮಾತ್ರ ಖಂಡಿತವಾಗಲೂ ಪರಿಸ್ಥಿತಿಯನ್ನು ಜಯಿಸಲು ಸಾಧ್ಯ.

ಪೌಲ-ಸೀಲರು ಕಾರಾಗೃಹದಲ್ಲಿ ಸಂಕೋಲೆಗಳಿಂದ ಬಂದಿಸ್ಪಟ್ಟಾಗ ಅಂತಹ ಇಕ್ಕಟ್ಟಿನಲ್ಲಿ ಅವರು ಕರ್ತನನ್ನು ಸ್ತುತಿಸಿದರು. ಅವರ ಸ್ತುತಿ ಆರಾಧನೆಯನ್ನು ಕೇಳಿದ ದೇವರು ಅಲ್ಲಿ ಒಂದು ದೊಡ್ಡ ಭೂಕಂಪವನ್ನು ಮಾಡಿ ಬಂದನಗಳು ಕಳಚಿಬೀಳುವಂತೆ ಮಾಡಿದನು.

ದೇವರ ಮಗುವೇ ನೀನು ಎಂಥ ಪರಿಸ್ಥಿತಿಯಲ್ಲಿದ್ದರೂ ಎಂಥಹ ಇಕ್ಕಟ್ಟಿನಲ್ಲಿ ಇದ್ದರೂ ಕರ್ತನನ್ನು ಆರಾಧಿಸುದನ್ನು ಸ್ತುತಿಸುವುದನ್ನು ಎಡೆಬಿಡದೆ ಮಾಡು, ಖಂಡಿತವಾಗಿಯೂ ನೀನು ದಾವೀದನ ರೀತಿಯಲ್ಲಿ ಆಶೀರ್ವದಿಸಲ್ಪಡುತ್ತೀಯಾ ಮತ್ತು ಪೌಲ-ಸೀಲರ ರೀತಿಯಲ್ಲಿ ಬಿಡುಗಡೆಯನ್ನು ಹೊಂದಿಕೊಳ್ಳುತ್ತೀಯ.

ಕಟ್ಟು ನಿಟ್ಟಾದ ಸಂಪ್ರದಾಯದಲ್ಲಿ ಜೀವಿಸುತ್ತಿರುವಂತಹ ಒಂದು ಕುಟುಂಬದಲ್ಲಿ ಒಬ್ಬ ಸಹೋದರಿಯು ಯೇಸುಕ್ರಿಸ್ತನನ್ನು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಂಡರು, ಅವರು ದೀಕ್ಷಾಸ್ನಾನ ಹೊಂದಿಕೊಂಡು ಕರ್ತನಿಗಾಗಿ ಜೀವಿಸಬೇಕು ಎಂದು ನಿರ್ಧರಿಸಿ, ಕುಟುಂಬದಲ್ಲಿ ಯಾರಿಗೂ ಇವರು ರಕ್ಷಿಸಲ್ಪಟ್ಟಿದ್ದಾನೆಂದು ತಿಳಿಸದೇ, ಎಲ್ಲರೊಟ್ಟಿಗೆ ಅನ್ಯೋನ್ಯತೆಯಿಂದ ನಡೆದುಕೊಳ್ಳುತ್ತಿದ್ದರು. ಆಗ ಅವರ ಸಂಬಂಧಿಕರಲ್ಲಿ ಒಬ್ಬ ಚಿಕ್ಕ ಹುಡುಗನಿಗೆ ಇವರು ದೇವರ ಬಳಿ ಇರುವುದು ತಿಳಿದಿತ್ತು. ಮತ್ತು ಪ್ರೀತಿಯ ಸಹೋದರಿಯು ಕರ್ತನ ಪ್ರೀತಿಯ ಬಗ್ಗೆ ಆ ಪುಟ್ಟ ಹುಡುಗನಿಗೆ ಆಗ್ಗಾಗ್ಗೆ ತಿಳಿಸುತ್ತಿದ್ದರು. ಅಂತಹ ಒಂದು ಸಂದರ್ಭದಲ್ಲಿ ಆ ಹುಡುಗನಿಗೆ ಎಷ್ಟೇ ಓದುತ್ತಿದ್ದರೂ ಸಹ ಜ್ಞಾಪಕವಿರುತ್ತಿರಲಿಲ್ಲವೆಂದು ಆ ಹುಡುಗನು ಮನಸ್ಸಿನಲ್ಲಿ ನೋವು ತಿನ್ನುತ್ತಿದ್ದನು. ಮನೆಯಲ್ಲಿ ತಂದೆ ತುಂಬಾ ಕಠಿಣ ಸ್ವಭಾವದವರೂ. ತಂದೆಗೆ ಭಯಪಟ್ಟು ಓದುತ್ತಿದ್ದನು. ಅವನಿಗೆ ಪರೀಕ್ಷೆ ಬಂತು ಪರೀಕ್ಷೆಗೆ ಪ್ರತಿದಿನ ಹೋಗಿ ತನಗೆ ತಿಳಿದಿರುವುದನ್ನೆಲ್ಲಾ ಬರೆದನು. ನಂತರ ಶಾಲೆಯಲ್ಲಿ ಅವನಿಗೆ ಫಲಿತಾಂಶ ಬಂದಿತು. ಶಾಲೆಯಲ್ಲಿ ಅವನಿಗೆ ಅಂಕಪಟ್ಟಿಯನ್ನು ಕೈಗೆ ಕೊಟ್ಟು ಪೋಷಕರಿಂದ ಸಹಿ ಹಾಕಿಸಿಕೊಂಡು ಬಾ ಎಂದು ಹೇಳಿದರು. ಆ ಅಂಕಪಟ್ಟಿ ನೋಡುವಾಗ ಎರಡು ವಿಷಯ (subject)ನಲ್ಲಿ ಅವನು ಅನುತ್ತೀರ್ಣನಾಗಿದ್ದನು. ಮಿಕ್ಕ ವಿಷಯಗಳಲ್ಲಿ ಸಾಮಾನ್ಯವಾದ ಅಂಕಗಳು ಬಂದು ಉತ್ತೀರ್ಣವಾಗಿದ್ದನು. ಆ ಪರೀಕ್ಷೆ ಅವನ ಅದೃಷ್ಟಕ್ಕೆ ಅರ್ಧವಾರ್ಷಿಕವಾಗಿತ್ತು. ಇದನ್ನು ನೋಡಿದ ಹುಡುಗ ತುಂಬ ಭಯಪಟ್ಟು ಮೊದಲು ತಾಯಿ ಹತ್ತಿರ ಹೋದನು. ತಾಯಿ ಅದನ್ನು ನೋಡಿ ನನಗೆ ಗೊತ್ತಿಲ್ಲಪ್ಪ! ನೀನು ಏನಾದರೂ ಮಾಡಿಕೋ ನಾನು ಸಹಿ ಹಾಕಲ್ಲ, ನಿಮ್ಮಪ್ಪಾ ಹತ್ತಿರ ಹೋಗಿ ಹಾಕಿಸಿಕೋ ಹೋಗು ಎಂದು ಹೇಳಿ ಗದರಿಸಿದರು. ಅವನಿಗೆ ಬಹಳ ಭಯವಾಯಿತು, ಏನು ಮಾಡಬೇಕೋ ಗೊತ್ತಾಗುತ್ತಿಲ್ಲ ಯಾಕೆಂದರೆ ತಂದೆ ಹತ್ತಿರ

ಹೋದರೆ ರಕ್ತ ಬರುವಾಗೆ ಕುಕ್ಕಿ-ಕುಕ್ಕಿ ಒಡೆಯುತ್ತಾರೆ ನೋವನ್ನ ಸಹಿಸೋಕೆ ಆಗಲ್ಲ, ಮೊದಲೇ ಇದೇ ರೀತಿ ಆದಾಗ ಒಡೆದ ಏಟುಗಳು ಮರೆಯಕ್ಕೆ ಆಗುತ್ತಿಲ್ಲಾ. . . .ಏನಪ್ಪಾ ಮಾಡೋದು ಎಂದು ಚಿಂತಿಸುತ್ತಿರುವಾಗ ಅವನು ಕಡೆದಾಗಿ ಯೇಸುವನ್ನು ನಂಬಿರುವ ಆಂಟಿಯ ಬಳಿ ಬಂದನು. "ನನ್ನ ಅಂಕಪಟ್ಟಿಯನ್ನು ಮುಟ್ಟಿ ನನ್ನ ಕೈಯಲ್ಲಿ ಕೊಡಿ" ಅಂದನು. ಆಗ ಅದನ್ನು ತೆಗೆದು ನೋಡುವಾಗ ಆಂಟಿಗೂ ಸಹ ತುಂಬ ಭಯ ಆಯಿತು. ಇದನ್ನು ನಿಮ್ಮ ಅಪ್ಪ ನೋಡಿದರೆ ನಿನ್ನ ಚರ್ಮ ಸುಳಿತಾರೇ ಗೊತ್ತಾ! ಯಾಕೆ ಈ ರೀತಿ ಮಾಡಿದ್ದೀಯಾ ಚೆನ್ನಾಗಿ ಓದಿಕೊಳ್ಳಲಿಲ್ಲವೇನೋ . . .? ಎಂದು ಜೋರಾಗಿ ಕೇಳಿದರು. ಆಗ ಅವನು  ಆಂಟಿ ನಾನು ಓದುತ್ತೇನೆ ಆದರೆ ಜ್ಞಾಪಕ ಇರಲ್ಲಾ ನಾನೇನು ಮಾಡಲಿ, ಇದು ಒಂದು ಸಾರಿ ಕ್ಷಮಿಸಿದರೆ ಮುಂದೆ ಕಷ್ಟ ಪಟ್ಟು ಹಗಲು-ರಾತ್ರಿ ಓದುತ್ತೇನೆ ಆಂಟಿ. ಅಂದನು. ಮತ್ತೇ ಈಗ ಅಪ್ಪ ಸಹಿ ಹಾಕಬೇಕಲ್ವಾ ಏನು ಮಾಡುತ್ತೀಯಾ? ಎಂದು ಆಂಟಿ ಕೇಳಿದಾಗ ಅವನು ಕೊಟ್ಟ ಉತ್ತರ-"ಆಂಟಿ ನೀವು 'ಯೇಸು'ವನ್ನು ನಂಬುತ್ತೀರಾ ಅಲ್ವಾ ನಿಮ್ಮೊಳಗೆ 'ಯೇಸು' ಇದ್ದಾಗ ಅದರ ಶಕ್ತಿ ನಿಮ್ಮ ಕೈಯಲ್ಲಿ ಇರುತ್ತೇ ಆದುದರಿಂದಲೇ ನನ್ನ ಅಂಕಪಟ್ಟಿಯನ್ನು ಮುಟ್ಟಿ ಕೊಡುವುದಕ್ಕಾಗಿ ನಿಮಗೆ ಕೊಟ್ಟಿದ್ದು. ಈಗ ನಮ್ಮ ಅಪ್ಪಾ ಏನೂ ಅನ್ನಲ್ಲ. ಈ ಸಾರಿ ಬಿಟ್ಟಿದ್ದೇನೆ. ಮುಂದಿನ ಸಾರಿ ಬಂತು ಅಂದ್ರೆ ಬಿಡಲ್ಲ ಉಷಾರ್ ಅನ್ನುತ್ತಾರೆ. ಅದಕ್ಕೆ ನಾನು ನಿಮ್ಮ ಬಳಿ ಬಂದಿದ್ದು" ಎಂದು ಹೇಳಿ ನಂಬಿಕೆಯಿಂದ ಅಂಕಪಟ್ಟಿಯನ್ನು ತೆಗೆದುಕೊಂಡು ತನ್ನ ತಂದೆಯ ಬಳಿ ಹೊರಟುಹೋದನು.

ಪ್ರಿಯ ದೇವರ ಮಕ್ಕಳೇ ನೋಡಿದಿರಾ ಎಂಥಹ ನಂಬಿಕೆ ಆ ಪುಟ್ಟ ಬಾಲಕನಲ್ಲಿ ಬಂದಿತು. ಅಂತಹ ಇಕ್ಕಟ್ಟಿನಲ್ಲಿ ಕರ್ತನನ್ನು ತನಗೆ ಗೊತ್ತಿರುವ ರೀತಿಯಲ್ಲಿ ಆಶ್ರಯಿಸಿರುವುದು ಬಹಳ ಆಶ್ಚರ್ಯವಾಗಿದೆ. ಆ ಆಂಟಿಯೊಟ್ಟಿಗೆ ಇರುವ ಯೇಸು ನನಗೂ ಸಹಾ ಬಿಡುಗಡೆ ಮಾಡುತ್ತಾರೆ ಎನ್ನುವ ನಿರೀಕ್ಷೆ ಆ ಹುಡುಗನ ಹೃದಯದಲ್ಲಿ ಬಂತು ಅದಕ್ಕೆ ಕರ್ತನು ಆ ಹುಡುಗನ ಇಕ್ಕಟ್ಟಿನ ಕೂಗಿಗೆ ಉತ್ತರಕೊಟ್ಟರು. ಆ ಹುಡುಗ ಏನು ಅಂದುಕೊಂಡನೋ ಅದೇ ರೀತಿ ಆಯಿತು. ಆ ಹುಡುಗನ ತಂದೆ ಅವನಿಗೆ ಏನು ಹೇಳಲಿಲ್ಲ. ಒಮ್ಮೆ ಆ ಹುಡುಗನನ್ನು ದುರುಗುಟ್ಟಿಕೊಂಡು ನೋಡಿ, "ಹೂಂ ಸರಿ, ಇದು ಅರ್ಧವಾರ್ಷಿಕ ಪರೀಕ್ಷೆಯೆಂದು ಸುಮ್ಮನೆ ಬಿಡುತ್ತೇನೆ, ಮುಂದೆ ಹೀಗೆ ಬಂದರೆ ನಿನ್ನನ್ನು ನಾನು ಸುಮ್ಮನೆ ಬಿಡಲ್ಲ ಉಷಾರ್." ಎಂದು ಹೇಳಿ ಆ ಹುಡುಗನನ್ನು ಬಿಟ್ಟುಬಿಟ್ಟರು. ಅಬ್ಬಾ! ಎಂತಹ ಆಶ್ಚರ್ಯ.

ಆ ಹುಡುಗ ಯೇಸುವನ್ನು ತಿಳಿಯದ ಒಬ್ಬ ಅನ್ಯನಾಗಿದ್ದನು. ಅವನ ಆಂಟಿ ಯೇಸುವನ್ನು ಅಂಗೀಕರಿಸಿದ್ದರು. ಆದರೆ ಇವನು ತಾಯಿ ಹತ್ತಿರ ಹೋದಾಗ ಯಾವ ಸಹಾಯ ಸಿಗಲಿಲ್ಲ, ಸಾಮಾನ್ಯವಾದ ಆಂಟಿ ಆಗಿದ್ದರೆ ಖಂಡಿತವಾಗಿಯೂ ಅವರ ಬಳಿಯು ಸಹಾ ಅವನು ಬರುತ್ತಿರಲಿಲ್ಲ ಆದರೆ ಅವರಲ್ಲಿ ಇರುವ ನಿಜವಾದ ದೇವರ ಶಕ್ತಿ ಯಾವುದು ಎಂದು ತಿಳಿದ ಆ ಹುಡುಗ ಆಂಟಿ ಬಳಿಗೆ ಹೋದರೆ ಕಾರ್ಯ ಆಗುತ್ತೇ ಎನ್ನುವ ನಂಬಿಕೆ ಅವನಲ್ಲಿ ಬಂತು. ಇಕ್ಕಟ್ಟುಗಳು ಬಂದಾಗ

ಅನೇಕ ಮಾರ್ಗಗಳನ್ನು ಹುಡುಕುತ್ತೇವೆ; ಆದರೆ ದೇವರ ಬಳಿ ಬರುವುದು ತುಂಬಾ ಕಡಿಮೆ. ಅದಕ್ಕೆ ಕರ್ತನು ಹೇಳುವುದು-"ಇಕ್ಕಟ್ಟಿನಲ್ಲಿ ನೀನು ಮೊರೆಯಿಡುವಾಗ ನಾನು ಹತ್ತಿರವಿರುತ್ತೇನೆ." ಆದರೆ ಎಲ್ಲರೂ ಸರ್ವೇ ಸಾಮಾನ್ಯವಾಗಿ ದೇವರನ್ನು ಬಿಟ್ಟು ಮನುಷ್ಯರ ಆಶ್ರಯ ಬೇಡುತ್ತಾರೆ. ಹಾಗೆ ಬೇಡುವುದಾದರೆ ಅದು ಬಹಳಷ್ಟು ಮಟ್ಟಿಗೆ ವ್ಯರ್ಥವಾಗುತ್ತದೆ, ಈ ಅನ್ಯಹುಡುಗನ ಮನಸ್ಸಿನಲ್ಲಿ ದೇವರ ಮೇಲೆ ನಂಬಿಕೆಯು ಬಂದ ರೀತಿ ನಿನ್ನ ಮನಸ್ಸಿನಲ್ಲಿ ಬರುವುದಾದರೆ ನಿನ್ನ ಇಕ್ಕಟ್ಟು ನಿನ್ನಿಂದ ದೂರ ಆಗುತ್ತದೆ. ನೀನು ಇಕ್ಕಟ್ಟಿನಲ್ಲಿ ಇರುವಾಗ ಕರ್ತನ ಬಳಿ ಉದಯಕಾಲದಲ್ಲಿ ಮೊಣಕಾಲು ಹಾಕಿ ಪ್ರಾರ್ಥಿಸು ಬೇಗನೇ ಉತ್ತರ ಸಿಗುತ್ತದೆ. ಆದರೆ ನೀನು ಬೇಡಿಕೊಳ್ಳುವಾಗ ನ್ಯಾಯವಾದದ್ದನ್ನು ಬೇಡಿಕೋ; ಅನ್ಯಾಯವಾದದ್ದನ್ನು ಬೇಡಿದರೆ ಕರ್ತನಿಂದ ನೀನು ಏನನ್ನೂ ಹೊಂದಿಕೊಳ್ಳಲು ಸಾಧ್ಯವೇ ಇಲ್ಲ. ಯಾಕೆಂದರೆ ಕರ್ತನು ಜ್ಞಾನಿಯ ಪ್ರಾರ್ಥನೆಯನ್ನು ಮಾತ್ರ ಕೇಳುತ್ತಾರೆ ಹೊರತು ಅಜ್ಞಾನಿಯ ಪ್ರಾರ್ಥನೆಯನ್ನು ಕೇಳುವುದಿಲ್ಲ. ಆತನು ನೀತಿವಂತನು, ಮತ್ತು ನ್ಯಾಯವಂತನಾಗಿದ್ದಾನೆ ಆತನಲ್ಲಿ ಅನ್ಯಾಯವು ಅಡಕವಾಗಿಲ್ಲ.

ಸೌಲ ದೇವರಿಗೆ ವಿರುದ್ಧವಾಗಿ ನಡೆದುಕೊಂಡು ಸಮುವೇಲನ ಮಾತನ್ನು ಕೇಳದೇ ತನ್ನ ಇಷ್ಟದ ಪ್ರಕಾರ ನಡೆದುಕೊಂಡು ದೇವರು ಕೊಟ್ಟ ಅಧಿಕಾರವನ್ನು ಕಳೆದುಕೊಂಡನು ಅದಕ್ಕಾಗಿ ದೇವರು ಅವನ ಮುಂದೆ ದಾವೀದನನ್ನು ಆರಿಸಿಕೊಂಡು ಅವನ ಸ್ತುತಿ ಆರಾಧನೆಯನ್ನು ಅಂಗೀಕರಿಸಿದನು. ದೇವರಿಂದ ದಾವೀದನಿಗೆ ಅಧಿಕಾರ ದೊರೆತಾಗ ಸೌಲನು ಅವನ ಮೇಲೆ ಹೊಟ್ಟೆಕಿಚ್ಚು ಪಟ್ಟು ದುರಾತ್ಮ ಪೀಡಿತನಾಗಿ ದೇವರಿಗೆ ವಿರುದ್ಧವಾದ ಕಾರ್ಯಗಳನ್ನು ಮಾಡಿ ಎಲ್ಲಾ ನಷ್ಟ ಮಾಡಿಕೊಂಡನು, ಕೊನೆಗೆ ಸ್ವಂತ ಮಗನನ್ನು ಕಳೆದುಕೊಂಡು ತನಗೆ ತಾನೇ ಸ್ವಂತವಾಗಿ ಆತ್ಮಹತ್ಯ ಮಾಡಿಕೊಳ್ಳಲು ಹೋದನು. ಅನ್ಯಾಯವಾದ ಯಾವುದೇ ಕಾರ್ಯವಾದರೂ ಸರೀ ಸ್ವಲ್ಪಕಾಲ ಮಾತ್ರ ನಡೆಯುತ್ತದೆ. ಹಾಗೂ ಅದರಿಂದ ಆಗುವ ಸಂತೋಷ ಸ್ವಲ್ಪಕಾಲಮಾತ್ರ ಅದು ತಾತ್ಕಾಲಿಕವಷ್ಟೇ. ಆದರೆ ನೀತಿಯುಳ್ಳ ನ್ಯಾಯವುಳ್ಳ ಪ್ರಾರ್ಥನೆಗೆಳಿಗೆ ಉತ್ತರವು ಶಾಶ್ವತವಾಗಿ ಬರುವುದು ಆದರೆ ಅದು ತಡವಾಗಿ ಸಿಗುತ್ತದೆ. ನೀನು ಮಾಡುವ ಪ್ರಾರ್ಥನೆಯು ನ್ಯಾಯವಾಗಿ ಇರುವುದಾದರೆ ಅದು ತಡವಾಗಿ ಆಗುತ್ತಿದ್ದರೆ ನೀನು ಚಿಂತೆ ಮಾಡಬೇಡ. ಕರ್ತನ ದೃಷ್ಟಿಯಲ್ಲಿ ಯೋಗ್ಯವಾಗಿರುವ ಎಲ್ಲಾ ಕಾರ್ಯಗಳು ಸಫಲವಾಗುತ್ತದೆ. ಯಾಕೆಂದರೆ ನನ್ನ ಕರ್ತನು ಎಲ್ಲದಕ್ಕೂ ಒಂದು ಸಮಯವನ್ನು ಇಟ್ಟಿದ್ದಾನೆ. ಆ ಸಮಯ ಬರುವವರೆಗೂ ನೀನು ಪ್ರಾರ್ಥಿಸುವ ವಿಷಯಕ್ಕೆ ಬಿಡುಗಡೆ ಬೇಕಾದರೆ ಕಾಯಲೇ ಬೇಕು. ಯಾಕೆಂದರೆ ಕರ್ತನು ನ್ಯಾಯತೀರಿಸುವವನು ಆಗಿದ್ದಾನೆ. ಆತನು ಕುಗ್ಗಿದವರ ಮೊರೆಯನ್ನು ಜ್ಞಾಪಕ ಮಾಡಿಕೊಳ್ಳುವನು. ದೇವರ ಭಯವಿಲ್ಲದೇ ನಡೆದುಕೊಂಡು ಇಷ್ಟ ಬಂದ ರೀತಿಯಲ್ಲಿ ಜೀವನ ಸಾಗಿಸಿ ನಟನೆಗಾಗಿ ಜನರ ಮಧ್ಯದಲ್ಲಿ ದೇವರ ಭಯವನ್ನು ಇಟ್ಟುಕೊಂಡು ಜನರನ್ನು ಮೆಚ್ಚಿಸುತ್ತಾ ಇಕ್ಕಟ್ಟಿನಲ್ಲಿ ಅವರು ದೇವರನ್ನು ಕೂಗುವಾಗ ಅವರಿಗೂ ಸಹಾ ಕರ್ತನು ಕಿವಿಗೊಡುವವನಾಗಿರುವನು ಅಂದಮೇಲೆ ಆತನ ಮೇಲೆ ಭರವಸವಿಟ್ಟವರಿಗೆ ಮತ್ತು

ನೀತಿವಂತರಿಗೆ ಸಮೃದ್ಧಿಯಿರುವುದೆಂದು ನಂಬಲೇಬೇಕು.

ಆದರೆ ಇಲ್ಲಿ ಕೆಲವರು ಸ್ವಾರ್ಥಿಗಳಾಗಿ ದೇವರಿಂದ ಬರುವ ಎಲ್ಲಾ ಆಶೀರ್ವಾದವನ್ನು ಹೊಂದಿಕೊಂಡು ದೇವರಿಗೆ ದೂರವಾಗಿ ಜೀವಿಸುತ್ತಾರೆ. ಆದರೆ ಅಂತಹ ವ್ಯಕ್ತಿಗಳಿಗೆ ಖಂಡಿತವಾಗಿಯೂ ಶಿಕ್ಷೆಯಾಗುತ್ತದೆ. ಯಾಕೆಂದರೆ ಅವರು ದೇವರಿಂದ ದೂರವಾಗಿದ್ದಾರೆ. ದೇವರು ದೂರವಾದ ಮೇಲೆ ಅವರಿಗೆ ಎಷ್ಟು ಸಮೃದ್ಧಿಯಾದರೂ ಏನೂ ಪ್ರಯೋಜನವಿಲ್ಲ. ದೇವರಿಂದ ಏನೇ ಹೊಂದಿಕೊಂಡಿದ್ದರೂ ಅದು ಪರಲೋಕಕ್ಕೆ ಅವರನ್ನು ಸೇರಿಸುವುದಿಲ್ಲ. ಎಲ್ಲವೂ ವ್ಯರ್ಥ. ಇಂತಹ ಮನೋಭಾವನೆ ಅನೇಕರಲ್ಲಿ ಈಹೊತ್ತಿನವರೆಗೂ ನಡೆಯುತ್ತಲೇ ಇದೆ.

ಪ್ರಿಯರೇ, ದೇವರಿಲ್ಲವೆಂದು ಮನಸ್ಸಿನಲ್ಲಿ ಅಂದುಕೊಂಡು ಅವರು ಈ ಲೋಕದಲ್ಲಿ ಕೆಟ್ಟು ಹೋಗುತ್ತಾರೆ. ಹೇಯ ಕೃತ್ಯಗಳನ್ನು ಮಾಡುತ್ತಾರೆ. ಅವರ ಜೊತೆಯಲ್ಲಿ ಇರುವವರು ಸಹಾ ಒಳ್ಳೇದು ಮಾಡಬೇಕು ಎನ್ನುವವರು ಇರುವುದಿಲ್ಲ. ಅವರ ಬಾಯಲ್ಲಿ ವಂಚನೆಯ ಮಾತುಗಳನ್ನು ಆಡುತ್ತಾರೆ. ಮಾಡುವ ಕೆಲಸಕಾರ್ಯಗಳು ಎಲ್ಲವೂ ಮೋಸ ಇದರಿಂದ ಅನೇಕರ ಹೃದಯವೂ ಕಠಿಣವಾಗಿ ಇಷ್ಟ ಬಂದ ರೀತಿಯಲ್ಲಿ ಜೀವಿಸುವ ವ್ಯಕ್ತಿಗಳು ಇರಲಾಗಿ ಕರ್ತನು ಪರಲೋಕದಿಂದ "ಮನುಷ್ಯರಲ್ಲಿ ತನ್ನ ಸಾನ್ನಿಧ್ಯವನ್ನು ಅಪೇಕ್ಷಿಸುವ ಬುದ್ಧಿವಂತರು ಇದ್ದಾರೋ ಎಂದು ಯೆಹೋವನು ಆಕಾಶದಿಂದ ಮನುಷ್ಯರನ್ನು ನೋಡಲಾಗಿ ಒಳ್ಳೆಯದನ್ನು ಮಾಡುವವನು ಇಲ್ಲ ಒಬ್ಬನಾದರೂ ಇಲ್ಲ. ಪ್ರತಿಯೊಬ್ಬನು ದಾರಿ ತಪ್ಪಿದವನು, ಎಲ್ಲರೂ ಕೆಟ್ಟುಹೋದವರೇ." (ಕೀರ್ತನೆ 14;2,3)

ಇಂತಹ ಜನರ ಮಧ್ಯದಲ್ಲಿ ನೀನು ಇರುವುದಾದರೆ ಈ ವ್ಯಕ್ತಿಗಳ ಹಾಗೆ ನಿನ್ನ ಹೃದಯವು ದೇವರನ್ನು ಕೂಗಿ ಕರೆಯುವುದಕ್ಕೆ ಇಕ್ಕಟ್ಟು ಮಾಡಿಕೊಳ್ಳಬೇಡ. ಎಂತಹ ಸಂಧರ್ಭ ಇರುವುದಾದರೂ ನೀನು ಆ ಇಕ್ಕಟ್ಟಿನ ಸಮಯದಲ್ಲಿ ಭಯ-ಭಕ್ತಿಯಿಂದ ಕರ್ತನಲ್ಲಿ ನೀನು ಪ್ರಾರ್ಥಿಸು.

ನೀನು ಯಾವ ಪರಿಸ್ಥಿತಿಯಲ್ಲಿ ಇರುವುದಾದರೂ ಈ ನಿಮಿಷ ನಿನ್ನನ್ನೇ ಕರ್ತನಿಗೆ ಒಪ್ಪಿಸಿಕೊಡು ಇದರಿಂದ ಬಿಡಿಸಲು ಆತನಿಗೆ ಮಾತ್ರ ಸಾಧ್ಯ. ಎಂಥಹ ಬಾಧೆ ನಿನ್ನನ್ನು ಬಾಧಿಸುವುದಾದರೂ ನೀನು ಒಂದು ಸಾರಿ ಕರ್ತನ ಮುಖವನ್ನು ನೋಡಿ ಆ ಒಂದು ಬಾಧೆಯ ಇಕ್ಕಟ್ಟಿನಲ್ಲಿಯೇ ಕರ್ತನನ್ನು ಕೂಗು ಆ ನಿಮಿಷದಲ್ಲೇ ಕರ್ತನಿಗೆ ಚಿತ್ತವಿದ್ದರೆ ನಿನ್ನಿಂದ ಎಲ್ಲಾ ಇಕ್ಕಟ್ಟುಗಳು ತೊಲಗಿಹೋಗುವುದು ಯಾರೂ ಕೊಡದೇ ಇರುವಂತಹ ಸಮಾಧಾನ ನಿನಗೆ ಕರ್ತನು ಕೊಡುವನು."ದೇವರ ಮಾರ್ಗವು ಯಾವ ದೋಷವೂ ಇಲ್ಲದ್ದು;" ಆಮೆನ್

# 3. ಮನದಾಳದ ಕೂಗು

"ಆಗ, ಯಾವನನ್ನು ಕಳುಹಿಸಲಿ, ಯಾವನು ನಮಗೋಸ್ಕರ ಹೋಗುವನು ಎಂಬ ಕರ್ತನ ನುಡಿ. . ." ಯೆಶಾ 6;8

ನ್ಯಾಯಾಧಿಪತಿಗಳು ಧನಿಕರ ಪರವಾಗಿ ತೀರ್ಪುಗಳನ್ನು ಕೊಡುತ್ತಾ ಅದಕ್ಕೆ ಪ್ರತಿಯಾಗಿ ಹಣ ಅಥವಾ ವಸ್ತು ರೂಪದ ಉಡುಗೊರೆಗಳನ್ನು ಅವರಿಂದ ತೆಗೆದುಕೊಳ್ಳುತ್ತಿದ್ದರು ಇದರಿಂದ ಮುಗ್ಧ ಜನರು ಅಂದರೆ ಬಡವರು ವಿಧವೆಯರು, ಅನಾಥ ಮಕ್ಕಳ ಎಲ್ಲಾ ಹಕ್ಕುಗಳು ಉಲ್ಲಂಘನೆಯಾಗುತ್ತಿತ್ತು. ಈ ನ್ಯಾಯಾಧಿಪತಿಗಳು "ಸೇನಾಧೀಶ್ವರನಾದ ಯೆಹೋವನ ಉಪದೇಶವನ್ನು ನಿರಾಕರಿಸಿ ಇಸ್ರಾಯೇಲ್ಯರ ಸದಮಲಸ್ವಾಮಿಯ ವಾಕ್ಯವನ್ನು ಅಸಡ್ಡೆ ಮಾಡಿದ್ದರಿಂದ ಅಗ್ನಿಯ ನಾಲಿಗೆಗಳು ಒಣಕೊಳೆಯನ್ನು ನುಂಗಿಬಿಡುವ ಹಾಗೂ ಒಣಹುಲ್ಲು ಬೆಂಕಿಯಲ್ಲಿ ಕುಗ್ಗುವಂತೆಯೂ ಅವರ ಬೇರು ಕೊಳೆತು ಅವರ ಹೂವು ದೂಳಾಗಿ ತೂರುಹೋಗುವದು." (ಯೆಶಾ 5:24)

ಕರ್ತನು ಜನರು ಹಾಳಾಗಿ ಹೋಗುತ್ತಿದ್ದಾರಲ್ಲಾ, ಉತ್ತಮವಾದ ಮಾರ್ಗದಲ್ಲಿ ನಡೆಸುವ ಒಬ್ಬ ನ್ಯಾಯಾಧಿಪತಿ ಇಲ್ಲವೇ, ನನ್ನ ಸೇವೆಯನ್ನು ಮಾಡಲು ಯಾರು ಇದ್ದಾರೆ ಎಂದು ಮನದಾಳದ ಕೂಗಿನಿಂದ ಕರೆಯುತ್ತಿದ್ದನು. ಅಲ್ಲಿನ ಜನರು ಮಾಡುತ್ತಿದ್ದ ಅನ್ಯಾಯವನ್ನು ನೋಡಿ ಕರ್ತನು ಉರಿಗೊಂಡು ಅವರ ಮೇಲೆ ಕೈಯೆತ್ತಿ ಅವರನ್ನು ಹೊಡೆದು ಬಿಟ್ಟನು; ಆಗ ಬೆಟ್ಟಗಳು ನಡುಗಿದವು, ಹೆಣಗಳು ಬೀದಿಗಳಲ್ಲಿ ಕಸವಾಗಿ ಬಿದ್ದವು, ಇಷ್ಟೆಲ್ಲಾ ನಡೆದರೂ ಆತನ ಕೋಪವು ತೀರದೆ ಕೈಯೆತ್ತಿಯೇ ಇತ್ತು. ಕರ್ತನು ಕೋಪಿಸಿಕೊಳ್ಳಲು ಜನರೇ ಕಾರಣ; ಯಾಕೆಂದರೆ ಆತನ ಮಾತಿಗೆ ವಿಧೇಯರಾಗದೇ ಮುಗ್ಧಜನರನ್ನು ಹಿಂಸಿಸುತ್ತಾ ಕರ್ತನ ನಾಮವನ್ನು ಅಯೋಗ್ಯವಾಗಿ ಉಪಯೋಗಿಸುತ್ತಾ ಆತನ ನಾಮವನ್ನು ದೂಷಿಸುತ್ತಾ ಇದ್ದ ಕಾರಣದಿಂದ ಆತನಿಗೆ ಖಂಡಿತವಾಗಿಯೂ ಕರ್ತನು ಕೋಪಿಸಿಕೊಳ್ಳಲು ಸಾಧ್ಯವಾಯಿತು. ಕರ್ತನು ಎಷ್ಟು ಕರುಣಾಮಯಿ ಆಗಿದ್ದಾನೋ ಅಷ್ಟೇ ಭಯಂಕರನೂ ಆಗಿದ್ದಾನೆ. ಪರ್ವತಗಳ ನಡುಗುವಿಕೆಯು ಕ್ರಿ.ಪೂ 760 ರಲ್ಲಿ ಇಸ್ರಾಯೇಲಿನಲ್ಲಿ ಸಂಭವಿಸಿದ ಪ್ರಚಂಡ ಭೂಕಂಪವನ್ನು ಸೂಚಿಸಬಹುದು (ಆಮೋ 1;1 ನೋಡಿರಿ) ಇಲ್ಲಿ ದೂರದ ಜನಾಂಗದವರು ಅಂದರೆ ಅಶ್ಶೂರ ದೇಶದವರಾಗಿರಬಹುದು. ಬಲಾಢ್ಯವಾದ ಅಶ್ಶೂರ ಸೈನ್ಯವು ಇಸ್ರಾಯೇಲಿನ ಉತ್ತರರಾಜ್ಯದ ಮೇಲೆ ಕ್ರಿ.ಪೂ 738 ರಲ್ಲಿ ದಾಳಿಮಾಡಲು ಪ್ರಾರಂಭಿಸಿ ಕೊನೆಗೆ ಕ್ರಿ.ಪೂ 721 ರಲ್ಲಿ ಇಸ್ರಾಯೇಲಿನ ರಾಜಧಾನಿಯಾದ ಸಮಾರ್ಯವನ್ನು ಸಂಪೂರ್ಣವಾಗಿ ವಶಪಡಿಸಿಕೊಂಡು ಇಸ್ರಾಯೇಲ್ಯರನ್ನು ಸೋಲಿಸಿದಾಗ ಆ ದಾಳಿಯು ಮುಕ್ತಾಯವಾಯಿತು. ಯೆಶಾಯನ ಪ್ರವಾದನ ಗ್ರಂಥದ ಈ ಭಾಗವು (5:25–30) ಮೂಲತಃ ವಚನಗಳು 9:8–21 ರ ಮುಂದುವರೆದ ಭಾಗವೆಂದು ಕೆಲವು ಪಂಡಿತರು ನಂಬುತ್ತಾರೆ. ಏಕೆಂದರೆ ಈ ಭಾಗಗಳಲ್ಲಿ ವಿಷಯ ಹಾಗೂ

ಅವರ ಸ್ವರೂಪವು ಒಂದೇ ಆಗಿರುತ್ತದೆ.

ಅರಸನಾದ ಉಜ್ಜೀಯನು ಕಾಲವಾದ ವರುಷದಲ್ಲಿ "ಕರ್ತನು ಉನ್ನತೋನ್ನತ ಸಿಂಹಾಸನಾರೂಢನಾಗಿರುವನನ್ನು ಕಂಡೆನು. ಆತನ ವಸ್ತ್ರದ ನೆರಿಗೆಯು ಮಂದಿರದಲ್ಲೆಲ್ಲಾ ಹರಡಿತ್ತು. ಆತನ ಸುತ್ತ ಸೆರಾಫಿಯರು ಇದ್ದರು; ಪ್ರತಿಯೊಬ್ಬನು ಆರಾರು ರೆಕ್ಕೆಯುಳ್ಳವನಾಗಿ ಎರಡರಿಂದ ತನ್ನ ಮುಖವನ್ನು ಎರಡರಿಂದ ತನ್ನ ಕಾಲುಗಳನ್ನು ಮುಚ್ಚಿಕೊಂಡು ಎರಡರನ್ನು ಬಡಿಯುತ್ತಾ ನೆಲಸೋಕದೆ ನಿಂತಿದ್ದನು ಆಗ ಒಬ್ಬನು ಮತ್ತೊಬ್ಬನಿಗೆ-ಸೇನಾಧೀಶ್ವರನಾದ ಯೆಹೋವನು "ಪರಿಶುದ್ಧನು, ಪರಿಶುದ್ಧನು, ಪರಿಶುದ್ಧನು;" ಭೂಮಂಡಲವೆಲ್ಲಾ ಆತನ ಪ್ರಭಾವದಿಂದ ತುಂಬಿದೆ ಎಂದು ಕೂಗಿ ಹೇಳಿದನು. ಕೂಗುವವನ ಶಬ್ಧಕ್ಕೆ ದ್ವಾರದ ಅಸ್ತಿವಾರವು ಕದಲಿತು; ಧೂಮವು ಮಂದಿರದಲ್ಲೆಲ್ಲಾ ತುಂಬಿತು." ಈ ದೃಶ್ಯವನ್ನು ಕಂಡ ಯೆಶಾಯನು ತುಂಬ ಭಯಪಟ್ಟು ಅಯ್ಯೋ, ನನ್ನ ಗತಿಯನ್ನು ಏನು ಹೇಳಲಿ! ನಾಶವಾದೆನಲ್ಲಾ; ನಾನು ಹೊಲಸು ತುಟಿಯವನು, ಹೊಲಸು ತುಟಿಯವರ ಮಧ್ಯದಲ್ಲಿ ವಾಸಿಸುವವನು; ಇಂಥ ನನ್ನ ಕಣ್ಣುಗಳು ರಾಜಾಧಿರಾಜನನ್ನು, ಸೇನಾಧೀಶ್ವರನಾದ ಯೆಹೋವನನ್ನು ಕಂಡವು ಎಂದು ಭಯದಿಂದ ಕೂಗಿಕೊಂಡನು.

ದೇವರ ಮಕ್ಕಳೇ ಯೆಶಾಯನು ಕರ್ತನ ರೂಪವನ್ನು ನೋಡುವಾಗ ಹೃದಯದಲ್ಲಿ ಭಯವಾಯಿತು, ಪರಿಶುದ್ಧನಾಗಿರುವ ದೇವರನ್ನು ಅಶುದ್ಧನಾಗಿರುವ ನಾನು ಹೇಗೆ ನೋಡಿದೆ? ನಾನು ಪಾಪಿಯಾಗಿದ್ದೇನೆ ಆತನನ್ನು ನೋಡುವ ಯೋಗ್ಯತೆ ನನಗಿಲ್ಲ ಎನ್ನುವ ಮನಸಾಕ್ಷಿ ಅವನನ್ನು ಭಯಪಡಿಸುತ್ತದೆ. ಯೆಶಾಯನ ಸ್ಥಾನದಲ್ಲಿ ನೀನು ಇದ್ದರೆ ಹೆಮ್ಮೆಯಿಂದ ಎಲ್ಲರೊಟ್ಟಿಗೆ-ನಾನು ಕರ್ತನೊಟ್ಟಿಗೆ ಮಾತಾಡುತ್ತೇನೆ, ಕರ್ತನ ಮುಖವನ್ನು ನಾನು ನೋಡುತ್ತೇನೆ, ನಿನಗಿಂತ ನಾನೇ ಕರ್ತನ ಮುಂದೆ ಹೆಚ್ಚಾಗಿದ್ದೇನೆ ಎಂದು ಹೊಲಸು ಬಾಯಿಂದ ಎಲ್ಲರಿಗೂ ಪ್ರಕಟಿಸುತ್ತಿದ್ದೆ, ಆದರೆ ಯೆಶಾಯ ಆ ರೀತಿ ಮಾಡದೇ ತುಂಬ ಭಯಪಟ್ಟನು, ಯೆಶಾಯನು ತಾನು ನಾಶವಾದೆನು, ಸತ್ತೆನು ಎಂದು ಯೋಚಿಸಲು ಕಾರಣವೇನೆಂದರೆ, ಪಾಪ ತುಂಬಿದ ಮನುಷ್ಯರು ದೇವರ ಮುಖವನ್ನು ದರ್ಶಿಸಬಾರದಿತ್ತು (ಆದಿ 16;13,14, ವಿಮೋ 33:19-23, ನ್ಯಾಯ 13:20-22) ಇಸ್ರಾಯೇಲ್ಯರ ದೇವರನ್ನು ಇಸ್ರಾಯೇಲ್ಯರನ್ನು ಆಳುವಾತನು ಎಂದು ವರ್ಣಿಸಲಾಗಿದೆ.

ಇಸ್ರಾಯೇಲ್ಯರನ್ನು ಆಳುವ ದೇವರನ್ನೇ ನನ್ನ ಪಾಪದ ಕಣ್ಣುಗಳಿಂದ ನೋಡಿದ ನಾನು ಸತ್ತೇ ಹೋಗುತ್ತೇನೆ ಎಂದು ಕೊಂಡಾಗ ಸೆರಾಫಿಯರಲ್ಲಿ ಒಬ್ಬನು ಯಜ್ಞವೇದಿಯಿಂದ ತಾನು ತಂಡಸದಲ್ಲಿ ತೆಗೆದ ಕೆಂಡವನ್ನು ಕೈಯಲ್ಲಿ ಹಿಡಿದುಕೊಂಡು ಯೆಶಾಯನ ಬಳಿಗೆ ಹಾರಿ ಬಂದು ಬಾಯಿಗೆ ಮುಟ್ಟಿಸಿ - "ಇಗೋ, ಇದು ನಿನ್ನ ತುಟಿಗಳಿಗೆ ತಗಲಿತು; ನಿನ್ನ ದೋಷವು ನೀಗಿತು; ನಿನ್ನ ಪಾಪಕ್ಕೆ ಪ್ರಾಯಶ್ಚಿತ್ತವಾಯಿತು ಅಂದನು." ಆಗ ಯೆಶಾಯನಿಗೆ ಹೃದಯದಲ್ಲಿ ಸಂತೋಷ ಬಂದಿತು ಅವನ ಹೃದಯದಲ್ಲಿ ಪ್ರಾಯಶ್ಚಿತ್ತಪಟ್ಟು ಸಂಪೂರ್ಣವಾಗಿ

ಕರ್ತನ ಕಡೆಗೆ ಮನಸ್ಸು ತಿರುಗಿದಾಗ ಅವನ ಎಲ್ಲಾ ಪಾಪ-ದೋಷ ಪರಿಹಾರವಾಯಿತು ಅವನ ನಾಲಿಗೆ ಕೆಂಡದಿಂದ ಮುಟ್ಟಿದಾಗಲೇ ಶುದ್ಧನಾದನು.

ನೀನು ಪಾಪಿಯಾಗಿ ಅಲೆಯುವಾಗ ನಿನ್ನನ್ನು ಸಂಧಿಸಲು ಕರ್ತನು ನಿನ್ನ ಹತ್ತಿರ ಬಂದಾಗ ಹೃದಯವನ್ನು ಒಪ್ಪಿಸಿಕೊಡು. ನೀನು ಮಾಡುವ ಯಾವ ಪುಣ್ಯಕಾರ್ಯ ಕರ್ತನನ್ನು ಮೆಚ್ಚಿಸಲು ಸಾಧ್ಯವಿಲ್ಲ ಕರ್ತನ ಶಬ್ಧಕ್ಕೆ ಕಿವಿಗೊಟ್ಟು ಆತನ ಚಿತ್ತಾನುಸಾರಕ್ಕೆ ಯಾರು ಒಪ್ಪಿಸಿ ಕೊಡುತ್ತಾರೋ ಅವರ ಮಧ್ಯದಲ್ಲಿ ಕರ್ತನು ಕಾಣಿಸಿಕೊಳ್ಳುತ್ತಾನೆ. ಆದರೆ ಪಾಪದ ಫಲವನ್ನು ತನ್ನ ಕಡೆಗೆ ಎಳೆದುಕೊಳ್ಳುತ್ತಾ ಸೃಷ್ಟಿ ಮಾಡಿರುವ ಸದಮಲಸ್ವಾಮಿಯನ್ನು ಮರೆತು; "ಸುರಪಾನದಲ್ಲಿ ಶೂರರೂ ಮದ್ಯಮಿಶ್ರಣದಲ್ಲಿ ಸಾಹಸಿಗಳೂ ಆಗಿ ಲಂಚಕ್ಕೋಸ್ಕರ ದೋಷಿಗಳನ್ನು ನಿರ್ದೋಷಿಗಳೆಂದು ತೀರ್ಪುಮಾಡಿ ನ್ಯಾಯವಂತರ ನ್ಯಾಯವನ್ನು ಹಾಳುಮಾಡುವವರ ಗತಿಯನ್ನು ಏನೆಂದು ಹೇಳಲಿ" (ಯೆಶಾ 5:22,23)

ನಮ್ಮ ಕರ್ತನು ಪ್ರತ್ಯೇಕಿಸಲ್ಪಟ್ಟವನೂ ಪರಿಶುದ್ಧವಾದವನು ಎಂದು ತೋರಿಸಲು ಯೆಶಾಯನು "ಇಸ್ರಾಯೇಲ್ಯರ ಪರಿಶುದ್ಧ ದೇವರು" ಎಂಬ ಹೆಸರನ್ನು ಬಳಸುತ್ತಾನೆ. ದೇವರು ಇಸ್ರಾಯೇಲ್ಯರನ್ನು ಆರಿಸಿಕೊಂಡನು ಮತ್ತು ಅವರ ಮಧ್ಯದಲ್ಲಿ ವಾಸಿಸಿದನು, ಇಂಥಹ ಸಂಧರ್ಭದಲ್ಲಿ ಯೆಶಾಯನು ಒಂದು ಶಬ್ಧವನ್ನು ಕೇಳುತ್ತಿದ್ದಾನೆ : " ನನ್ನ ಸೇವೆಗೆ ಯಾವನನ್ನು ಕಳುಹಿಸಲಿ, ಯಾವನು ನಮಗೋಸ್ಕರ ಹೋಗುವನು" ಎಂಬ ಕರ್ತನ ಮನದಾಳದ ಕೂಗು. ಆ ಕೂಗನ್ನು ಕೇಳಿದ ಯೆಶಾಯ " ಇಗೋ ನಾನಿದ್ದೇನೆ, ನನ್ನನ್ನು ಕಳುಹಿಸು" ಯೆಶಾ (6:9) ಎಂದು ಮನಃಪೂರ್ವಕವಾಗಿ ಕರ್ತನ ಪಾದಕ್ಕೆ ಅವನನ್ನೇ ಒಪ್ಪಿಸಿಕೊಟ್ಟನು.

ಪ್ರಿಯ ದೇವರ ಮಕ್ಕಳೇ ಯೆಶಾಯನ ರೀತಿಯಲ್ಲಿ ನೀವು ಕರ್ತನ ಸೇವೆಗಾಗಿ ಒಪ್ಪಿಸಿ ಕೊಡುತ್ತೀರಾ! ಕರ್ತನನ್ನು ತಿಳಿದುಕೊಳ್ಳದೇ ಸೈತಾನನ ಮಾರ್ಗದಲ್ಲಿ ನಡಿಯುವ ಈ ಲೋಕದ ಜೀವನದಲ್ಲಿ ಒಂದು ವೇಳೆ ನೀನು ನಿನ್ನ ಒಳ್ಳೆಯ ಜೀವನವನ್ನು ಹಾಳುಮಾಡಿಕೊಳ್ಳುತ್ತಿದ್ದರೆ ದಯವಿಟ್ಟು ಈಗಲೇ ನಿನ್ನ ಕರ್ತನ ಕಡೆಗೆ ತಿರುಗಿಕೋ.

ದೇವರು ನಿನಗೆ ಒಂದು ಸೇವೆಯನ್ನು ಕೊಟ್ಟಿರುವುದಾದರೆ ಅದನ್ನು ಭಯ-ಭಕ್ತಿಯಿಂದಲೇ ಮಾಡು. ನಿನ್ನೆದುರಿಗೆ ನಿಂತುಕೊಂಡಿರುವ ಒಂದು ವ್ಯಕ್ತಿಯ ಆತ್ಮದ ಬೆಲೆ ಪರಲೋಕದಲ್ಲಿ ಅದು ಅತಿ ಅಮೂಲ್ಯವಾದ ಆತ್ಮವಾಗಿದೆ ಎಂದು ನೀನು ಮರೆಯಲೇ ಬೇಡ, ನೀನು ಒಂದು ಆತ್ಮಕೋಸ್ಕರ ತವಕಿಸುವುದಾದರೆ ಪರಲೋಕದಲ್ಲಿರುವ ನನ್ನ ತಂದೆಯು ನಿನ್ನನ್ನು ನೋಡಿ ತನ್ನ ಭಾರದಲ್ಲಿ ಪಾಲ್ಗೊಳ್ಳುತ್ತಿರುವ ವ್ಯಕ್ತಿಯೆಂದು ಕರ್ತನು ಸಂತೋಷಿಸುತ್ತಾನೆ. ನಿನಗಾಗಿ ಕರ್ತನು ಎಲ್ಲವನ್ನು ಕೊಡುತ್ತಿದ್ದಾನೆ. ಆತನಿಗಾಗಿ ನೀನು ಏನಾದರೂ ಕೊಡುವುದಾದರೆ ಖಂಡಿತವಾಗಿ ನೀನು ನಿನ್ನ ಕುಟುಂಬ ಆಶೀರ್ವಾದ ಹೊಂದಿಕೊಳ್ಳುತ್ತೀರಾ! ನನ್ನ ಕರ್ತನ ಮನದಾಳದ ಕೂಗಿಗೆ ನಿನ್ನ ಕಿವಿ ತೆರೆಯಲಿ. ನಾಶನದಿಂದ ನಿನ್ನನ್ನು ತಪ್ಪಿಸಲು ಆತನು ನಿನ್ನನ್ನು ಕೂಗುತ್ತಿದ್ದಾನೆ.

ತನ್ನ ಮಗನಾದ ಸ್ತೆಫೆನನ್ನು ಕಲ್ಲುಗಳಿಂದ ಕೊಲ್ಲುತ್ತಿದ್ದಾಗ ನನ್ನ ಕರ್ತನ ಮನಸ್ಸು ನೊಂದುಕೊಂಡಿತು. ಒಂದು ಕಡೆ ನನ್ನ ಮಗನು ನನಗಾಗಿ ರಕ್ತಸಾಕ್ಷಿಯಾಗುತ್ತಿದ್ದಾನೆಂದು ಯೇಸುಕ್ರಿಸ್ತನು ಸ್ತೆಫೆನನ್ನು ಅಂಗೀಕರಿಸಿಕೊಳ್ಳಲು ಪರಲೋಕದಲ್ಲಿ ಎದ್ದು ನಿಂತಿರುವುದನ್ನು ಸ್ತೆಫೆನನು ನೋಡಿದನು. ಸ್ತೆಫೆನನ ಸಾವಿಗೆ ಸಮ್ಮತಿಸಿದಂತಹ ಸೌಲನು ಅನೇಕ ದೇವಸೇವಕರ ಸಾವಿಗೆ ಕಾರಣನಾದನು. ದಮಸ್ಕಕ್ಕೆ ಸೌಲನು ಹೋಗುತ್ತಿದ್ದಾಗ ನನ್ನ ಯೇಸುವು ಮನದಾಳದ ಕೂಗನ್ನು ಸೌಲನ ಬಳಿ ಮಾತಾಡಿದರು. "ಸೌಲನೇ ಸೌಲನೇ ಯಾಕೆ ನನ್ನನ್ನು ಹಿಂಸೆಪಡಿಸುತ್ತೀ" ಎಂದು ನನ್ನ ಯೇಸುವು ಮಾತನಾಡಿದರು. ಕರ್ತನನ್ನು ನೋಡಿ ಕಣ್ಣುಗಳನ್ನು ಕಳೆದುಕೊಂಡು ನಂತರ ಮೂರು ದಿನದ ನಂತರ ಅನನೀಯ ಎಂಬ ಸೇವಕನ ಮುಖಾಂತರ ಕಣ್ಣು ಕಾಣುವಂತ ಕಾರ್ಯವನ್ನು ಯೇಸುಕ್ರಿಸ್ತನು ಮಾಡಿದಾಗ ಸೌಲನು ಪೌಲನಾಗಿ ಕರ್ತನಿಗಾಗಿ ಅನೇಕ ಸೇವೆಗಳನ್ನು ಮಾಡಿ ಸಭೆಗಳನ್ನು ಕಟ್ಟಿದನು. ಕರ್ತನಿಗಾಗಿ ಸೆರೆಮನೆಯಲ್ಲಿದ್ದನು. ಪೌಲನು ಮಾಡಿದ ಸೇವೆಯು ಸತ್ಯವೇದದಲ್ಲಿ ಅತಿ ಪ್ರಾಮುಖ್ಯವಾದ ಸೇವೆಯಾಗಿ ಮಾರ್ಪಟ್ಟಿತು.

ಪ್ರೀತಿಯ ದೇವರ ಮಗುವೇ ಇಂದು ನೀನು ಯೆಶಾಯನ ರೀತಿಯಲ್ಲಿ ಹೊಲಸು ತುಟಿಯವನು ಹೊಲಸು ನಾಲಿಗೆಯವನಾಗಿದ್ದರೂ, ಸೌಲನ ರೀತಿಯಲ್ಲಿ ಕರ್ತನ ಮಕ್ಕಳು ಮಾಡುತ್ತಿರುವಂತಹ ಸೇವಾ ಮಾರ್ಗಕ್ಕೆ ಅಡ್ಡವಾಗಿನಿಂತುರುವುದಾದರೂ ಒಂದು ಭಾರಿ ಕರ್ತನ ಮನದಾಳದ ಕೂಗಿಗೆ ಕಿವಿಗೊಡು, ಆತನು ನಿನ್ನಿಂದ ಸೇವೆಯನ್ನು ಅಪೇಕ್ಷಿಸುತ್ತಿದ್ದಾನೆ. ನೀನು ಎಂತಹ ವ್ಯಕ್ತಿಯಾದರು ಆತನಿಗೆ ನಿನ್ನನ್ನು ನೀನು ಒಪ್ಪಿಸಿಕೊಡುವುದಾದರೆ. ಆತನಿಗೋಸ್ಕರ ಒಪ್ಪಿಸಿಕೊಡುವುದಾದರೆ ಖಂಡಿತವಾಗಿಯು ನಿನ್ನಿಂದ ಕರ್ತನು ಸೇವೆಯನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದಾನೆ.

ಭೂಮಿಯ ಮೇಲೆ ಕರ್ತನ ಸೇವೆಮಾಡಲು ನಿನಗಿರುವ ಅವಕಾಶವನ್ನು ನೀನು ಯಾವ ಕಾರಣಕ್ಕೂ ಕಳಕೊಳ್ಳಲೇ ಬೇಡ.

ಭೂಮಿಯಲ್ಲಿರುವ ಸಮಸ್ತವೂ ಕರ್ತನದೇ ನೀನು ಅಯೋಗ್ಯ ಕಾರ್ಯಗಳಲ್ಲಿ ಮನಸ್ಸಿಡದೆ ಮೋಸ ಪ್ರಮಾಣ ಮಾಡದೆ ಶುದ್ಧಹಸ್ತದಿಂದ ನಿನ್ನ ಮನಸ್ಸು ನಿರ್ಮಲವಾಗಿದ್ದು ಯಾವ ಪಾಪವನ್ನೂ ಮಾಡದೇ ಸಂಪೂರ್ಣವಾಗಿ ಕರ್ತನ ಮನದಾಳದ ಕೂಗಿಗೆ ಒಪ್ಪಿಸಿಕೊಡು, ನಿನ್ನ ಆಯಸ್ಸು ಯಾವಾಗ ಕೊನೆಗೊಳ್ಳುತ್ತದೆ ಗೊತ್ತಿಲ್ಲ. ಆಯಸ್ಸು ಮುಗಿಯೊದರೊಳಗೆ ಕರ್ತನಿಗಾಗಿ ಏನಾದರು ಒಂದು ಉತ್ತಮವಾದ ಸೇವೆಯನ್ನು ಮಾಡು. ಆಗ ನಿನ್ನ ಜನ್ಮ ಸಾರ್ಥಕವಾಗುತ್ತದೆ. ಭೂಮಿಯ ಮೇಲೆ ಹುಟ್ಟಿ, ನೀನು ಕರ್ತನಿಗಾಗಿ ಏನೂ ಮಾಡದಿದ್ದರೆ ನೀನು ಈ ಲೋಕದಲ್ಲಿ ಹುಟ್ಟಿ ಏನೂ ಪ್ರಯೋಜನವೇ ಇಲ್ಲ. ನಿನ್ನ ಹೃದಯದ ಆಲೋಚನೆಯನ್ನು ಬದಲಾಯಿಸಿಕೊಂಡು ಕರ್ತನ ಕಡೆಗೆ ತಿರುಗಿಕೋ ....! ಆಮೆನ್

"ಕರ್ತನ ಮಾತುಗಳಿಗೆ ಕಿವಿಗೊಡು" ಆಮೆನ್

# 4. ಕನಿಕರದ ಕೂಗು

"ದಾವೀದನ ಕುಮಾರನೇ, ನಮ್ಮನ್ನು ಕರುಣಿಸು ಎಂದು ಕೂಗುತ್ತಾ ಆತನ ಹಿಂದೆ ಹೋದರು" ಮತ್ತಾ 9:27

ಇಸ್ರಾಯೇಲ್ಯರ ಪ್ರವಾದಿಗಳಲ್ಲಿ ಅನೇಕರು 'ಮೆಸ್ಸಿಯ'ನು ಅರಸನಾದ ದಾವೀದನ ವಂಶದಿಂದ ಬರುವನು ಎಂದು ಹೇಳಿದ್ದರಿಂದ 'ಮೆಸ್ಸೀಯ'ನನ್ನು ದಾವೀದನ ಕುಮಾರನೆಂದು ಕರೆಯಲಾಗಿತ್ತು. ಇದನ್ನು ತಿಳಿದ ಕುರುಡರು ಜನರ ಶಬ್ಧವನ್ನು ಕೇಳಿ ಯಾಕೆ ಇಲ್ಲಿ ಇಷ್ಟೊಂದು ಶಬ್ಧವನ್ನು ಜನರು ಮಾಡುತ್ತಿದ್ದಾರೆಂದು ವಿಚಾರಿಸಿದಾಗ ಈ ಊರಿನಲ್ಲಿ ದಾವೀದ ಕುಮಾರನು ಬಂದಿದ್ದಾನೆ ಎಂಬ ವರ್ತಮಾನವು ಅವರ ಕಿವಿಗೆ ಬಿದ್ದಿತು. ಆಹಾ! ಆ ಕುರುಡರಿಗೆ ಒಂದು ನಿರೀಕ್ಷೆಯಿತ್ತು ಅದು ನೆರವೇರುವ ಸಮಯ ಬಂತೆಂದು ಅವರು ಆಲೋಚಿಸಿ ಈತನಿಂದ ನಮಗೆ ದೃಷ್ಟಿ ಬರಬಹುದು ಎಂದು ಯೇಸುಕ್ರಿಸ್ತನ ಕಡೆಗೆ ಹೋಗುವ ಪ್ರಯತ್ನದಲ್ಲಿದ್ದರು.

ಕುರುಡರು ಬಿಕ್ಷೆಯನ್ನು ಬೇಡುತ್ತಾ ಊರೂರೂ ಅಲೆಯುತ್ತಾ ಯಾವುದೇ ಆಧಾರವಿಲ್ಲದೆ, ಯಾರ ಆಶ್ರಯವಿಲ್ಲದೆ ಕತ್ತಲೆಯ ಜೀವನವನ್ನು ಲೋಕದಲ್ಲಿ ಸಾಗಿಸಬೇಕಾದರೆ ಅವರಿಗೆ ಅದು ಎಷ್ಟು ಕಠಿಣವಾಗಿರುತ್ತದೆಂದು ಒಮ್ಮೆ ಯೋಚಿಸಿನೋಡಿರಿ, ಹಾಗೂ ತಮ್ಮದೇ ಆದಂತಹ ವೈಯಕ್ತಿಕವಾದ ಕಾರ್ಯಗಳನ್ನು ಮಾಡಿಕೊಳ್ಳಲು ಅವರು ತುಂಬಾ ಪ್ರಯಾಸ ಪಡಬೇಕಾಗಿತ್ತು. ಕಣ್ಣು ಕಾಣದೆ ಜೀವನ ನಡೆಸಬೇಕೆನ್ನುವುದಾದರೆ ತುಂಬ ಕಷ್ಟ, ಇಬ್ಬರೂ ಸಹಾ ಕುರುಡರೇ ಎಷ್ಟು ಭಯಾನಕವಾದ ಜೀವನ ಅಲ್ಲವೇ, ಅದರಲ್ಲಿ ಒಂದು ನಿರೀಕ್ಷೆ ನಮಗೆ 'ದಾವೀದ ಕುಮಾರನು' ಸಿಕ್ಕುವುದಾದರೆ ದೃಷ್ಟಿ ಬರುತ್ತದೆ ಎಂದು, ಇದು ಎಂತಹ ಒಂದು ದೊಡ್ಡ ನೀರೀಕ್ಷೆಯಲ್ಲವೇ, ಯಾರೂ ನಂಬುವುದಕ್ಕೆ ಆಗದ ಮನುಷ್ಯನ ಆಲೋಚನೆಗೆ ಎಟುಕದ ಒಂದು ನಿರೀಕ್ಷೆಯಾಗಿದೆ.

ಸಾಮಾನ್ಯ ಮನುಷ್ಯನು ನಂಬಲಾರದ ನಿರೀಕ್ಷೆಯು ಈ ಕುರುಡರಲ್ಲಿ ಇದ್ದ ಕಾರಣ ಅವರು ದಾವೀದನ ಕುಮಾರನನ್ನು ಕೂಗಿ ಕರೆದರು.

ಅಲ್ಲಿನ ಜನರು ಆ ರೀತಿ ಕೂಗುವಾಗ ಎಷ್ಟೋ ರೀತಿಯಲ್ಲಿ ಅವರನ್ನು ತಡೆದಿರಬಹುದು:

1. ಸುಮ್ಮನಿರು ಯಾಕೆ ಆ ರೀತಿ ಕೂಗುತ್ತಿದ್ದೀಯಾ? ನಿನ್ನ ಕೂಗಿಗೆ ಆತನು ಬಂದು ನಿನಗೆ ಕಣ್ಣು ಕೊಡಲ್ಲ.
2. ಯಾಕೆ ಆ ರೀತಿ ಕೂಗಿ-ಕೂಗಿ ನಿನ್ನ ಗಂಟಲನ್ನೂ ಹಾಳುಮಾಡಿಕೊಂಡು,

ಮತ್ತೊಬ್ಬರಿಗೆ ತೊಂದರೆ ಕೊಡುತ್ತೀಯಾ?

3. ನಿನಗೇನು ಹುಚ್ಚು ಹಿಡಿದಿದ್ದೀಯಾ? ನೀನು ಮಾಡಿರುವ ಪಾಪದಿಂದ ನಿನಗೆ ಈ ರೀತಿ ಗತಿ ಬಂದಿದೆ ಅನುಭವಿಸು.

4. ಇಲ್ಲದೇ ಇರುವ ದೂಷಣೆಗಳಿಂದ ಆ ಕುರುಡರನ್ನು ನಿಂದಿಸಿ ಅವಮಾನಿಸಿರಬಹುದು! ಎಷ್ಟೇ ಅವಮಾನವಾದರೂ ಅವರ ಒಂದು ಕೂಗು ಕಡಿಮೆ ಆಗಲಿಲ್ಲ.

(ಇಲ್ಲಿ ಮೇಲ್ಕಂಡ 4 ಅನಿಸಿಕೆಗಳು ಸತ್ಯವೇದದಲ್ಲಿ ಇಲ್ಲ ಆದರೆ ಈ ರೀತಿಯಲ್ಲಿ ಮನುಷ್ಯನ ವರ್ತನೆಗಳು ಇರುತ್ತವೆಂದು ತಿಳಿಸಲಾಗಿದೆ)

ಮನುಷ್ಯರು ಚಿಂತಿಸುವ ಪ್ರಕಾರ ದೇವರು ಚಿಂತಿಸುವುದಿಲ್ಲ, ಮನುಷ್ಯರ ಮಾತನಾಡುವ ರೀತಿಯಲ್ಲಿ ಕರ್ತನು ಮಾತನಾಡುವುದಿಲ್ಲ. ಕರ್ತನ ಮಾತಿನ ಶೈಲಿಯೇ ಬಹು ಆಶ್ಚರ್ಯಕರವಾಗಿದೆ. ಹಾಗೂ ಸಮಾಧಾನಕರವಾಗಿರುತ್ತದೆ.

ಕುರುಡರಿಗೆ ಲೋಕದ ಕಣ್ಣು ಕಾಣದಿದ್ದರೂ, ಆತ್ಮದ ಕಣ್ಣು ತೆರೆದ ಕಾರಣ ಅವರು ದಾವೀದನ ಕುಮಾರನಿಗೆ ಎದುರು ನೋಡುತ್ತಾ ಇದ್ದರು. ಅಂತಹ ಸಮಯದಲ್ಲಿ ಕರ್ತನು ಆ ಮಾರ್ಗದಲ್ಲಿ ಬರುವುದನ್ನು ಕೇಳಿ ಕಣ್ಣು ಕಾಣದೇ ಇರುವ ಈ ಕುರುಡರು ಶಬ್ದದಿಂದ ಕೂಗಲು ಪ್ರಾರಂಭಿಸಿದರು. ಆ ಕೂಗನ್ನು ಕೇಳಿದ ಕರ್ತನು "ನಾನು ಇದನ್ನು ಮಾಡಬಲ್ಲೆನೆಂಬುದನ್ನು ನಂಬುತ್ತೀರೋ" ಎಂದು ಅವರನ್ನೇ ಯೇಸುಕ್ರಿಸ್ತನು ಪ್ರಶ್ನೆ ಕೇಳುತ್ತಿರುವುದನ್ನು ಗಮನಿಸಿರಿ, ಆ ಪ್ರಶ್ನೆಗೆ ಆ ಕುರುಡರು ನಂಬಿಕೆಯಿಂದ ಹೇಳಿದರು "ಹೌದು ಸ್ವಾಮಿ ನಂಬುತ್ತೇವೆ" ಎಂದು ಅವರು ಉತ್ತರ ಕೊಟ್ಟರು. ಆಗ ಕರ್ತನು "ಅವರ ಕಣ್ಣುಗಳನ್ನು ಮುಟ್ಟಿ – ನೀವು ನಂಬಿದಂತೆ ನಿಮಗೆ ಆಗಲಿ ಅಂದನು. ಆಗ ಅವರಿಗೆ ಕಣ್ಣು ಬಂದವು." (ಮತ್ತಾಯ 9:29) ನೋಡಿರಿ 'ಕನಿಕರದ ಕೂಗು' ಎಂತಹ ಕಾರ್ಯವನ್ನು ಮಾಡುತ್ತದೆ. ದೇವರ ಕನಿಕರವನ್ನು ನೀನು ಪಡಕೊಳ್ಳಬೇಕಾದರೆ ನಿನ್ನ ಕೂಗು ಅಹಂಕಾರದಿಂದ ಕೂಡಿರಬಾರದು ನೀನು ನಿನ್ನನ್ನು ತಗ್ಗಿಸಿಕೊಂಡು ಪ್ರಾರ್ಥನೆ ಮಾಡುವುದಾದರೆ ಮಾತ್ರ ದೇವರಿಂದ ನೀನು ಉತ್ತರ ಪಡೆಯಲು ಸಾಧ್ಯವಾಗುತ್ತದೆ. ಅಹಂಕಾರದಿಂದ ಕರ್ತನು ನನಗೆ ಅದ್ಭುತ ಮಾಡಲಿ ನೋಡೋಣ ಆಮೇಲೆ ನಾನು ನಂಬುತ್ತೇನೆ ಎಂದು ಹೇಳಿದರೆ ಯಾವ ಪ್ರಯೋಜನವಾಗುವುದಿಲ್ಲ. ಆತನ ಬಳಿ ತಾಳ್ಮೆಯಿಂದ ಕೂಗುವಾಗ ನಿನ್ನ ಕೂಗಿಗೆ ಕನಿಕರಿಸುತ್ತಾನೆ. ಆ ಕುರುಡರು ತಾಳ್ಮೆಯಿಂದ ಎಲ್ಲವನ್ನು ಸಹಿಸಿಕೊಂಡು ಬಂದ ಕಾರಣ ಅವರ ಕೂಗಿಗೆ ಉತ್ತರ ಸಿಕ್ಕಿತು. ಪ್ರಿಯರೇ ಈ ಕುರುಡರಿಗೆ ಒಂದು ನಿರೀಕ್ಷೆ ಇತ್ತು ಯೇಸುಕ್ರಿಸ್ತನಿಂದ ಗುಣಹೊಂದಬೇಕೆಂದು, ಆ ನಿರೀಕ್ಷೆಯಿಂದ ಅವರಿಗೆ ಸಫಲವೇ ಆಯಿತು.

ಆ ಕುರುಡರು ಬಂದ ತತ್‌ಕ್ಷಣವೇ ಕರ್ತನು ಸುಮ್ಮನೇ ಅದ್ಭುತವನ್ನು ಮಾಡಲಿಲ್ಲ. ಪ್ರಶ್ನೇ ಹಾಕುತ್ತಿದ್ದಾರೆ. ನೀವು ಯಾವುದೇ ವಿಷಯ ಇಟ್ಟುಕೊಂಡಿರುವುದಾದರೆ ಅದಕ್ಕೆ ಪ್ರತಿಯಾಗಿ ಕರ್ತನು ಪ್ರಶ್ನೆ ಹಾಕುತ್ತಾನೆ. ಸುಮ್ಮನೇ

ಹೋಗಿ ಸಭೆಯಲ್ಲಿ ನಿಂತುಕೊಳ್ಳುವುದಾದರೆ ಅಥವಾ ಪ್ರಾರ್ಥಿಸುವ ಸಮಯದಲ್ಲಿ ಸುಮ್ಮನೇ ಕುಳಿತುಕೊಳ್ಳುವುದಾದರೆ ಯಾವ ಉತ್ತರವೂ ನಿನಗೆ ಸಿಕ್ಕುವುದಿಲ್ಲ, ಮತ್ತು ನೀನು ಯಾವ ಅದ್ಭುತವನ್ನೂ ಸಹ ಹೊಂದಿಕೊಳ್ಳಲು ಸಾಧ್ಯವೇ ಇಲ್ಲ. ಕರ್ತನು ನಿನ್ನ ಪ್ರಾಥನೆಗೆ ಉತ್ತರ ಕೊಡಬೇಕೆಂದರೆ ಅದು ಆತನ ಮನಸ್ಸಿಗೆ ಮೆಚ್ಚಿಗೆಯಾಗಿರಬೇಕು. ಕರ್ತನು ಸೇವೆ ಮಾಡುತ್ತಿರುವ ಎಲ್ಲರಿಗೂ ಅಲ್ಲಿ ಅದ್ಭುತವಾಗಲಿಲ್ಲ ಯಾರು ಆತನನ್ನೇ ನಿರೀಕ್ಷಿಸಿಕೊಂಡು ಆತನ ಪಾದದಲ್ಲಿ ಕಣ್ಣೀರಿನಿಂದ ಕೂಗಿಕೊಳ್ಳುತ್ತಿದ್ದರೋ ಅವರನ್ನು ಕರ್ತನು ನೋಡಿ ಗಮನಿಸಿ ನಂತರ ಅವರನ್ನು ಕನಿಕರಿಸಿ ಉತ್ತರ ಕೊಡುತ್ತಿದ್ದನು, ಅದ್ಭುತ ಮಾಡುತ್ತಿದ್ದನು. ಅದೇ ರೀತಿ ನಿನ್ನ 'ಕಣ್ಣೀರಿನ ಕೂಗ'ನ್ನು ಕರ್ತನ ಇಂದು ಗಮನಿಸುವವನಾಗಿದ್ದಾನೆ. ನಿನ್ನ ಕೂಗು ಆತನ ಮನಸ್ಸನ್ನು ಮುಟ್ಟಬೇಕು. ನಿನ್ನ ಕಣ್ಣೀರಿನ ಕೂಗು ಕರ್ತನ ಹೃದಯ ಕದಲಿಸುವುದಾದರೆ ನೀನು ನಿಶ್ಚಯವಾಗಿಯೂ ಆತನಿಂದ ಅದ್ಭುತವನ್ನು ಹೊಂದಿಕೊಳ್ಳಲು ಸಾಧ್ಯವಾಗುತ್ತದೆ. ಆತನು ಕುರುಡರಿಗೆ ಪ್ರಶ್ನೆ ಹಾಕಿದಾಗ ಕುರುಡರು ಸರಿಯಾದ ಉತ್ತರ ಕೊಟ್ಟರು- "ಹೌದು ಸ್ವಾಮಿ ನಂಬುತ್ತೇವೆ" ಎಂದರು. ನಿನ್ನ ಬಳಿಯಲ್ಲಿ ಕರ್ತನು ಪ್ರಶ್ನೆ ಕೇಳುವಾಗ ನಿನ್ನ ಉತ್ತರ ಏನಾಗಿರುತ್ತದೆಂದು ಒಮ್ಮೆ ಯೋಚಿಸಿ ನೋಡು, ನಿನ್ನ ಉತ್ತರ ಕರ್ತನಿಗೆ ಮೆಚ್ಚಿಗೆಯಾಗಿದೆಯಾ ಅಥವಾ ಇಲ್ಲವಾ?

ಕಣ್ಣು ಇರುವ ನಿಮಗೆ ಕರ್ತನ ಮೇಲೆ ಎಂತಹ ನಿರೀಕ್ಷೆ ಇದೆ? ಕರ್ತನು ಎರಡನೇ ಸಾರಿ ಬರುತ್ತಾನೆ. ನಮ್ಮನ್ನು ಪರಲೋಕ ರಾಜ್ಯಕ್ಕೆ ಕರೆದುಕೊಂಡು ಹೋಗುತ್ತಾನೆ, ಅದಕ್ಕಾಗಿ ನಾವು ಸಿದ್ಧವಾಗಬೇಕು ಎನ್ನುವ ನಿರೀಕ್ಷೆ ನಿಮ್ಮಲ್ಲಿ ಇದೆಯಾ. ಇಲ್ಲದಿದ್ದರೆ ಈ ಕುರುಡರ ರೀತಿ ನೀವು ನಿರೀಕ್ಷೆಯ ಫಲವನ್ನು ಹೊಂದದಿದ್ದರೆ. ನೀವು ಕಣ್ಣಿದ್ದರೂ ಕುರಡನಾಗಿ ಹೊಂದಬೇಕಾದ ಆಶೀರ್ವಾದಕ್ಕೆ ಅನ್ಯರಾಗಿ ಜೀವಿಸಬೇಕಾಗುತ್ತದೆ.

ಪ್ರೀಯರೇ ನಿಮ್ಮ ಕಣ್ಣುಗಳು ಲೋಕದ ಕಾರ್ಯಕ್ಕೆ ಪ್ರಯೋಜನವಾಗದೇ ಪರಲೋಕ ರಾಜ್ಯಕ್ಕಾಗಿ ಪ್ರಯೋಜನವಾಗಲಿ. ನೀನು ಆತನ ಸುವಾರ್ತೆಯನ್ನು ಸಾರಿ ಸಾಕ್ಷಿಯಾಗಿ ನಿಲ್ಲಬೇಕೆಂದು ನಿನ್ನ ಜೀವಿತದಲ್ಲಿ ಅದ್ಭುತವನ್ನು ಮಾಡಿದ್ದಾನೆ. ನೀನು ಕಣ್ಣೀರಿಟ್ಟು ಕೂಗುವಾಗ ಕರ್ತನು ಹತ್ತಿರ ಬಂದು ನಿನ್ನ ಕೂಗಿಗೆ ಉತ್ತರ ಕೊಡುವನು, ನಿಷ್ಪಯೋಜನವಾಗಿ ನಿನ್ನ ಇಷ್ಟದ ಪ್ರಕಾರ ನಡೆದುಕೊಂಡು ಆತನ ನಾಮವನ್ನು ಅಯೋಗ್ಯಕ್ಕೆ ತರುವುದಕ್ಕಾಗಿ ಅಲ್ಲ; ಅದನ್ನು ಅನೇಕ ಜನರಿಗೆ ತಿಳಿಸಿ ಆತನ ನಾಮವನ್ನು ಉನ್ನತ ಪಡಿಸುವುದಕ್ಕೆ ಆಗಿದೆ. ಅದಕ್ಕಾಗಿ ನೀನು ಆತನಿಗಾಗಿ ಪ್ರಕಾಶಿಸ ಬೇಕಾಗಿದೆ. ಎರಡನೇ ಬರೋಣಕ್ಕೆ ಸಿದ್ಧವಾಗು, ನಿನ್ನ ಆತ್ಮದ ಕಣ್ಣು ಕುರುಡು ಆಗದಂತೆ ಜಾಗರೂಕತೆಯಿಂದ ಈ ಲೋಕದಲ್ಲಿ ಜೀವಿಸು. ಮತ್ತೇ ಕುರುಡನಾ/ಳಾಗಿ ಜೀವಿಸುವುದಕ್ಕೆ ವಂಚನೆಗೆ ಒಳಗಾಗಬೇಡ. ನಿನ್ನ ಜೀವನದಲ್ಲಿ ಆತನು ಮಾಡಿರುವ ತ್ಯಾಗವನ್ನು ನೆನಸಿಕೊಂಡು ಸಾಕ್ಷಿಯಾಗಿ ಜೀವಿಸು. ಕರ್ತನ ಎರಡನೇ ಬರೋಣಕ್ಕೆ ನಿನ್ನ ಕೂಗು ಹೆಚ್ಚಾಗಲಿ ಮೌನವಾಗಿ ನೀನು ಇದ್ದ ರೀತಿಯಲ್ಲಿ ಇರುವುದಾದರೆ ಖಂಡಿತವಾಗಿ ಕರ್ತನು ನಿನ್ನನ್ನು ಬಿಟ್ಟು ಬಿಡುತ್ತಾನೆ,

ಮತ್ತು ನೀನು ಆತನ ಕನಿಕರವನ್ನೂ ಸಹ ಹೊಂದಿಕೊಳ್ಳಲು ಸಾಧ್ಯವೇ ಇರುವುದಿಲ್ಲ. ಆತನ ಕನಿಕರವು ನಿನ್ನ ಮೇಲೆ ಬರುವಂತೆ ಇಂದಿನಿಂದಲೇ ಕೂಗಿ ಮೊರೆಯಿಡುವುದನ್ನು ಅಭ್ಯಾಸಿಸಿಕೋ.

ಪೌಲನು ಅನೇಕ ಸಭೆಗಳಿಗೆ ಪತ್ರಗಳ ಮುಖಾಂತರ ಎಚ್ಚರಿಸಿದಂತಹ ವ್ಯಕ್ತಿಯಾಗಿದ್ದಾನೆ. ಮತ್ತು ಎಷ್ಟೋ ಕಠಿಣವಾದ ಕಷ್ಟಗಳು ಬಂದರೂ ಸಹ ಸುವಾರ್ತೆಯನ್ನು ಎಡಬಿಡದೇ ಎಲ್ಲಾ ಜನಗಳಿಗೆ ಸಾರಿ ಹೇಳಿದನು. ಇಂತಹ ದಾಹ ಬರುವುದಾದರೆ ಪರಲೋಕದ ತಂದೆ ನಿನ್ನನ್ನು ಪೌಲನ ರೀತಿಯಲ್ಲಿ ಉತ್ತಮನಾ/ಳಾದ ನಂಬಿಗಸ್ಥನು/ಳು ಎಂದು ಕರೆಯುತ್ತಾನೆ. ಅತಿ ದೊಡ್ಡ ಸೇವೆ ಮಾಡಿದಂತಹ ಪೌಲನು ಕರ್ತನ ಕನಿಕರವು ತನ್ನ ಮೇಲೆ ಬರುವಂತೆ ಈ ರೀತಿ ಕೂಗಿ ಕರೆಯುತ್ತಿರುವುದನ್ನು ನೋಡಿರಿ.

ಪೌಲನು ಈ ರೀತಿಯಾಗಿ ಹೇಳಿದ್ದಾನೆ. "ಪಾಪಿಗಳಲ್ಲಿ ನಾನೇ ಮುಖ್ಯ" ಎಂದು ಮನಃಪೂರ್ವಕವಾಗಿ ತಗ್ಗಿಸಿಕೊಂಡು ಕರ್ತನಲ್ಲಿ ಒಪ್ಪಿಕೊಳ್ಳುತ್ತಿದ್ದಾನೆ ಅದಕ್ಕೆ ಅವನ ಕೂಗು ಕರ್ತನಲ್ಲಿ ಮಾನ್ಯವೆಂದೆಣಿಸಲ್ಪಟ್ಟಿತು. ಹಾಗಾದರೆ ಕರ್ತನ ಮುಂದೆ ಸಾಮಾನ್ಯ ವ್ಯಕ್ತಿಯಾಗಿರುವ ನೀನು ಕೂಗುವಾಗೆಲ್ಲಾ ಕರ್ತನು ನಿನ್ನ ಮೊರೆಗೆ ಉತ್ತರ ಕೊಡಬೇಕೆಂದರೆ ನಿನ್ನನ್ನು ಪೌಲನ ರೀತಿಯಲ್ಲಿ ತಗ್ಗಿಸಿಕೊಂಡು ಆತನ ಕನಿಕರವನ್ನು ನೀನು ಪಡೆಯಬೇಕಾಗಿದೆ. ತಗ್ಗಿಸಿಕೊಳ್ಳುವುದಾದರೆ ಆತನು ನಿನ್ನ ಕೂಗಿಗೆ ಕನಿಕರಿಸುತ್ತಾನೆ.

"ಕರ್ತನ ಕನಿಕರವನ್ನು ಆತನ ಎರಡನೇ ಬರೋಣವನ್ನು ನಿರೀಕ್ಷಿಸು" ಆಮೆನ್.

# 5. ಮನಸ್ಸಿನ ಕೂಗು

"ಯಾವನಾದರೂ ನನ್ನ ಹೆಸರಿನಲ್ಲಿ ಈ ಚಿಕ್ಕ ಮಗುವನ್ನು ಸೇರಿಸಿಕೊಂಡರೆ ನನ್ನನ್ನು ಸೇರಿಸಿಕೊಂಡ ಹಾಗಾಯಿತು;" ಲೂಕ 9:48

ಸೃಷ್ಟಿಕರ್ತನಾದ ದೇವರು ತನ್ನ ಜ್ಞಾನದಿಂದ ಬರೀ ಮಾತಿನಿಂದ ಪ್ರಕೃತಿ ಕಾರ್ಯವನ್ನು ನಿರ್ಮಿಸಿದನು. ಮನುಷ್ಯನಿಗೆ ಅನುಕೂಲವಾಗುವಂತೆ ಮೊದಲೇ ಆಲೋಚಿಸಿ ಕರ್ತನು ಪ್ರತಿಯೊಂದು ಕಾರ್ಯಗಳನ್ನು ಮಾಡಿ, ಬೇಕಾಗಿರುವ ಎಲ್ಲಾ ವಸ್ತುಗಳನ್ನು ನಾನಾ ರೀತಿಯ ಮರ-ಗಿಡಗಳು, ಪ್ರಾಣಿಗಳು, ಸಸಿಗಳು, ಕ್ರಿಮಿ-ಕೀಟಗಳನ್ನು ನೀರು, ಗಾಳಿ, ಸೂರ್ಯ-ಚಂದ್ರ, ರಾತಿ-ಹಗಲು ಎಲ್ಲವನ್ನು ತನ್ನ ಮಕ್ಕಳಿಗಾಗಿ ಮಾಡಿದನು. ಆದರೆ ಪ್ರತ್ಯೇಕವಾಗಿ ರೂಪಿಸಿದ್ದು ಮನುಷ್ಯನನ್ನು ಅದೇ ತುಂಬ ಆಶ್ಚರ್ಯ ಪಡಿಸುವಂತ ಕಾರ್ಯವಾಗಿದೆ. ಇದನ್ನು ತಿಳಿಯದ ಮನುಷ್ಯನು ಪಾಪ-ಶಾಪಕ್ಕೆ ಒಳಗಾದನು. ಮನುಷ್ಯನನ್ನು ತನ್ನ ಶ್ವಾಸದಿಂದ ನಿರ್ಮಿಸಿದನು; ಈಗ ಮನುಷ್ಯ ಉಸಿರಾಡುತ್ತಿರುವ ಶ್ವಾಸ ಕರ್ತನಿಂದ ಬಂದಿದ್ದು ಎಂದು ತಿಳಿಯದೇ ಇದನ್ನು ಮರೆತು ಕರ್ತನ ಮಾತಿಗೆ ಅವಿಧೇಯರಾಗಿ ಕರ್ತನ ಆಶೀರ್ವಾದಕ್ಕೆ ದೂರವಾದರು.

ಪ್ರೀಯ ದೇವರ ಮಗುವೇ ನಿನ್ನನ್ನು ಪ್ರತ್ಯೇಕವಾಗಿ ರೂಪಿಸಿ, ನಿನಗೆ ಎಲ್ಲಾ ಅನುಕೂಲತೆಗಳನ್ನು ಮಾಡಿಕೊಟ್ಟಿರುವ ಸೃಷ್ಟಿಕರ್ತನು ನಿನ್ನ ಮನಸ್ಸಿನ ಆಲೋಚನೆಗಳನ್ನು ಬಲ್ಲಾತನಾಗಿದ್ದಾನೆ. ಆದ್ದರಿಂದ ಕರ್ತನ ಬಳಿ ಬರುವಾಗ ನೀನು ಚಿಕ್ಕ ಮಗುವಿನ ರೀತಿ ಆಗಬೇಕು; ಆ ಮಗುವಿನ ಭಾವನೆಯು ನಿನ್ನಲ್ಲಿ ಬರುವಾಗ ನೀನು ಕರ್ತನ ಬಳಿಗೆ ಬರುವ ಮತ್ತೊಬ್ಬರನ್ನು ಸಹ ನೆಲೆಯಾಗಿ ನಿಲ್ಲಿಸಲು ಸಾಧ್ಯವಾಗುತ್ತದೆ. ಮತ್ತು ನೀನು ಕರ್ತನ ಪ್ರೀತಿಯಲ್ಲಿ ನೆಲೆಯಾಗಿ ನಿಲ್ಲಲು ಸಹ ಸಾಧ್ಯವಾಗುತ್ತದೆ. ಆಗ ನೀನು ಮನಸ್ಸು ಬಿಚ್ಚಿ ಕೂಗುವಾಗ ಕರ್ತನು ನಿನಗೆ ಉತ್ತರಕೊಡುವನು.

ಕರ್ತನು ನಿನ್ನ ಪಾಪ-ಶಾಪಗಳೆಲ್ಲವನ್ನು ನೀಗಿಸಲು ಮನುಷ್ಯಕುಮಾರನಾಗಿ ಈ ಭೂಮಿಗೆ ಬಂದನು. ಸತ್ಯದಮಾರ್ಗವನ್ನು ಭೋದಿಸಿದನು, ಸುವಾರ್ತೆಯನ್ನು ಹಗಲು-ರಾತ್ರಿ ಸಾರಿದನು; ಅನೇಕ ಅದ್ಭುತಗಳನ್ನು ಮಾಡಿದನು, ಪಾಪ-ಶಾಪ ವಿಮೋಚನೆಗಾಗಿ ದೀಕ್ಷಾಸ್ನಾನ ಪಡೆದುಕೊಳ್ಳುವಂತೆಯೂ ಅನೇಕರು ಆತನ ಶಿಷ್ಯರಾಗಿ ಎಲ್ಲರಿಗೂ ಸಾಕ್ಷಿಯಾಗಿ ನಿಲ್ಲುವಂತೆಯೂ ಬಲವನ್ನು ಕೊಟ್ಟನು. ಈ ರೀತಿಯಾಗಿ ಸೇವೆಮಾಡಿ ತನ್ನನ್ನೇ ನಮ್ಮೆಲ್ಲರಿಗೋಸ್ಕರ ಬಲಿಯಾಗಿ ಸಮರ್ಪಿಸಿದ ದೇವರ ಮನಸ್ಸನ್ನು ಅರ್ಥ ಮಾಡಿಕೊಳ್ಳುವ ದೇವರ ಮಕ್ಕಳನ್ನು ಆತನು ಪ್ರೀತಿಸುವವನಾಗಿದ್ದಾನೆ. ನಿನ್ನನ್ನು ಕರ್ತನು ನರಕದಲ್ಲಿ ನೋಡುವುದಕ್ಕೆ ಇಷ್ಟ ಪಡುವುದಿಲ್ಲ, ಅದಕ್ಕಾಗಿಯೇ ಆತನು ಪರಲೋಕವನ್ನು ತ್ಯಜಿಸಿ ಭೂಮಿಯಲ್ಲಿ ಹುಟ್ಟಿ

ಬಂದು ನಿನ್ನ ಪರವಾಗಿ ಯಜ್ಞ ಬಲಿಯಾದನು.

ಕರ್ತನು ತನ್ನ ಮನಸ್ಸಿನಿಂದ ನಿನ್ನನ್ನು ತನ್ನ ಬಳಿಗೆ ಬರುವಂತೆ ಕೂಗಿ ಕರೆಯುತ್ತಿದ್ದಾನೆ, ಪ್ರೀತಿಯ ದೇವರ ಮಗುವೇ ಆತನ ಮನಸ್ಸನ್ನು ಅರ್ಥ ಮಾಡಿಕೊಂಡು ಆತನ ಚಿತ್ತದ ಪ್ರಕಾರವಾಗಿ ಜೀವಿಸಲು ಪ್ರಯತ್ನ ಮಾಡು.

ಆತನು ತಿರುಗಿ ಬಂದು ನಮ್ಮೆಲ್ಲರನ್ನು ಆತನಿರುವ ಸ್ಥಳಕ್ಕೆ ಕರೆದುಕೊಂಡು ಹೋಗಬೇಕೆಂದು ನಮಗೋಸ್ಕರ ಪರಲೋಕದಲ್ಲಿ ಬಿಡಾರಗಳನ್ನು ಸಿದ್ಧಪಡಿಸುತ್ತಿದ್ದಾನೆ. ನೀನ್ನನ್ನು ತನ್ನ ಎರಡನೇ ಬರೋಣದಲ್ಲಿ ಆತನು ಪರಲೋಕಕ್ಕೆ ಕರೆದುಕೊಂಡು ಹೋಗುವ ಮನಸ್ಸನ್ನು ಮಾಡಿದ್ದಾನೆ, ಆತನು ನಿನ್ನನ್ನು ನಿತ್ಯಜೀವಕ್ಕೆ ಸೇರಿಸುತ್ತಾನೆ. ಇಂತಹ ಮನಸ್ಸನ್ನು ನಮ್ಮ ದೇವರು ನಮ್ಮ ಪಕ್ಷವಾಗಿ ಇಟ್ಟುಕೊಂಡಿರ ಬೇಕಾದರೆ, ನೀನು ಆತನಿಗಾಗಿ ಸಾಕ್ಷಿಯಾಗಿ ನಿಲ್ಲಬೇಕು ಹಾಗೂ ಆತನ ಸೇವೆ ಮಾಡಬೇಕು ಇಲ್ಲದಿದ್ದರೆ ಕರ್ತನು ನಿನ್ನ ಬಳಿ ಲೆಕ್ಕವನ್ನು ಕೇಳುತ್ತಾನೆ.

ಕರ್ತನ ಕೃಪೆಯು ಆಕಾಶಕ್ಕಿಂತ ದೊಡ್ಡದಾಗಿದೆ. ಆತನ ಸತ್ಯತೆಯು ಮುಗಿಲನ್ನು ನಿಲುಕುತ್ತದೆ. ಈ ರೀತಿ ಆತನ ಕೃಪೆಯು ಎಲ್ಲರನ್ನೂ ಆವರಿಸಿಕೊಂಡಿರುವಾಗ ನೀನು ಸುಮ್ಮನೆ ಸಮಯವನ್ನು ಕಳೆಯುತ್ತಾ ನಿನ್ನ ಜೀವನ ವ್ಯರ್ಥಮಾಡಿಕೊಂಡರೆ ಏನು ಪ್ರಯೋಜನ? ನಿನ್ನ ಮನಸ್ಸು ಯಾವಾಗಲೂ ಕರ್ತನನ್ನು ಹುಡುಕಬೇಕು ಆಗ ನಿನ್ನನ್ನು ನೋಡುವ ಕರ್ತನು ನಿನ್ನ ಕೂಗಿಗೆ ಕಿವಿಗೊಡುವನು ನಿನ್ನ ಮನಸ್ಸು ಚಿಕ್ಕ ಮಗುವಿನ ರೀತಿ ಆಗುವುದಾದರೆ ಮಾತ್ರ ನೀನು ಕರ್ತನ ಬಳಿಯಲ್ಲಿ ಬೆಳೆಯಲು ಸಾಧ್ಯ, ಮತ್ತು ನಿನ್ನ ಜೊತೆಯಲ್ಲಿ ಇರುವ ವ್ಯಕ್ತಿಯ ಮೇಲೆ ನೀನು ಸುಮ್ಮನೆ ಅಹಂಕಾರದಿಂದ ಅಧಿಕಾರ ನಡೆಸುವುದನ್ನು ಬಿಟ್ಟುಬಿಡುತ್ತೀಯ. ಪ್ರೀತಿಯಿಂದ ನಿನ್ನ ಜೊತೆಯಲ್ಲಿರುವ ವ್ಯಕ್ತಿಯ ಮನಸ್ಸನ್ನು ಅರ್ಥಮಾಡಿಕೊಂಡು ತಗ್ಗಿಸಿಕೊಂಡು ಕರ್ತನ ಮಾಧರಿಯತೆಯಲ್ಲಿ ನೀನು ನಿಲ್ಲಬೇಕಾಗಿದೆ. ಯಾಕೆಂದರೆ ಸತ್ಯವೇದ ಹೇಳುತ್ತದೆ ನಿನ್ನ ಪಕ್ಕದಲ್ಲಿರುವ ಸಹೋದರನನ್ನು ನೀನು ಪ್ರೀತಿಸಲು ನಿನಗೆ ಸಾಧ್ಯವಿಲ್ಲದಿದ್ದರೆ ದೂರದಲ್ಲಿರುವ ಕರ್ತನನ್ನು ಹೇಗೆ ಪ್ರೀತಿಸಲು ಸಾಧ್ಯವೆಂದು. ಹಾಗಾದರೆ ಪ್ರೀತಿ ಮಾಡಬೇಕಾದರೆ ಮೊದಲು ಮನಸ್ಸನ್ನು ಅರ್ಥಮಾಡಿಕೊಳ್ಳಬೇಕು, ಮನುಷ್ಯನನ್ನು ಆತನ ಮನಸ್ಸನ್ನು ಅರ್ಥಮಾಡಿಕೊಳ್ಳುವುದಕ್ಕೆ ನೀನು ಕಷ್ಟ ಪಡುತ್ತಿರುವುದಾದರೆ, ಕರ್ತನನ್ನು ಆತನ ಮನಸ್ಸನ್ನು ನೀನು ಹೇಗೆ ಅರ್ಥ ಮಾಡಿಕೊಳ್ಳುತ್ತೀಯಾ. ಅದಕ್ಕೆ ದೇವರು ಹೇಳಿದ್ದು "ನಾನು ಭೂಲೋಕದಲ್ಲಿ ನಡೆಯುವ ಕಾರ್ಯವನ್ನು ಕುರಿತು ನಿಮಗೆ ಹೇಳುವಾಗ ನೀವು ನಂಬದೆಹೋದರೆ ಪರಲೋಕದ ಕಾರ್ಯಗಳನ್ನು ಕುರಿತು ನಿಮಗೆ ಹೇಳಿದರೆ ಹೇಗೆ ನಂಬೀರಿ? (ಯೋಹಾನ 3:12)

ನೀನು ಕರ್ತನಿಗೆ ಒಳ್ಳೆಯ ಸಾಕ್ಷಿಯಾಗಿ ಮನುಷ್ಯರ ಮುಂದೆಯೂ ದೇವರ ಮುಂದೆಯೂ ಕಾಣಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಕೃತಜ್ಞತಾ ಯಜ್ಞಗಳನ್ನು ನೀನು ಯಾವಾಗಲೂ ಸಲ್ಲಿಸಬೇಕು. ಸುಮ್ಮನೆ ಒಂದು ಮೂಲೆಯಲ್ಲಿ

ಕುಳಿತು ಆಲೋಚನೆ ಮಾಡುವುದಾದರೆ, ವ್ಯಕ್ತಿಗಳು ಹೇಳುವ ಪ್ರಕಾರವೆಲ್ಲಾ ನಡೆಯುವುದಾದರೆ, ನೀನು ಕರ್ತನನ್ನು ಹುಡುಕಿ ಪ್ರಾರ್ಥಿಸಿದರೂ ಏನೂ ಪ್ರಯೋಜನವಿಲ್ಲ, ನಿನ್ನ ಹೃದಯವು ಕರ್ತನಲ್ಲಿ ಸ್ಥಿರವಾಗಿ ನಿಲ್ಲಬೇಕು. ಆತನ ಮನಸ್ಸನ್ನು ಅರ್ಥ ಮಾಡಿಕೊಂಡು ಪ್ರಾರ್ಥಿಸಬೇಕು ಆಗಲೇ ಆತನ ಪ್ರಿಯರಾದ ಮಕ್ಕಳ ಕೂಗನ್ನು ಕೇಳಲು ಆತನು ಇಷ್ಟ ಪಡುತ್ತಾನೆ. ನಿನ್ನ ಮನಸ್ಸಿನ ಆಲೋಚನೆ ತಿಳಿದ ಕರ್ತನು ನೀನು ಮಾಡುವ ಕೃತ್ಯಕ್ಕೆ ತಕ್ಕ ರೀತಿಯಲ್ಲಿ ಉತ್ತರ ಕೊಡುವನು. ಕೀರ್ತನೆ 107:9 ರಲ್ಲಿ "ಆತನು ಬಾಯಾರಿದವರ ಆಶೆಯನ್ನು ಪೂರೈಸಿ ಹಸಿದವರನ್ನು ಮೃಷ್ಟಾನ್ನದಿಂದ ತೃಪ್ತಿಗೊಳಿಸುತ್ತಾನೆ." ನಿನ್ನ ಆಶೆಗೆ ತಕ್ಕ ರೀತಿಯಲ್ಲಿಯೇ ಕರ್ತನು ಕಾರ್ಯ ನಡೆಸುತ್ತಾನೆ. ನೀನು ಆತನ ಸೇವೆಯಲ್ಲಿ ಬಾಯಾರಿದ ಜಿಂಕೆಯ ರೀತಿಯಲ್ಲಿ ನೀರಿಗಾಗಿ ತವಕಿಸುವ ಹಾಗೆ ಬೇಡಿಕೊಳ್ಳುವಾಗ ಕರ್ತನು ಜೀವಜಲವಾಗಿ ನಿನಗೆ ಉತ್ತರ ಕೊಡುತ್ತಾನೆ.

ಪ್ರಿಯರೇ ನಿಮ್ಮ ಮನಸ್ಸಿನ ಆಲೋಚನೆ ಏನಾಗಿದೆ; ಕರ್ತನನ್ನು ಕೂಗಿಕೊಳ್ಳುವಾಗ ನಿನ್ನ ಆಲೋಚನೆಗಳು ಯಾವ ರೀತಿ ಕರ್ತನಲ್ಲಿ ಒಳಗೊಂಡಿದೆ? ಕರ್ತನು ಆಶೆ ಪಡುವ ರೀತಿಯಲ್ಲಿ ನಿನ್ನ ಮನಸ್ಸು ಕರ್ತನ ಮನಸ್ಸನ್ನು ಅರ್ಥ ಮಾಡಿಕೊಂಡಿದೆಯಾ ಅಥವಾ ಒಳಗೊಂದು ಹೊರಗೊಂದಿನ ರೀತಿಯಲ್ಲಿ ನೀನು ಕೂಗುತ್ತಿದ್ದೀಯಾ? ಯಾವ ರೀತಿಯಲ್ಲೀದ್ದೀಯಾ ಒಮ್ಮೆ ನಿನ್ನನ್ನು ನೀನೇ ಪರೀಕ್ಷೆ ಮಾಡಿ ನೋಡಿಕೋ! ದೇವರು ಹೇಳಿದರು "ನೀನು ಅಳೆಯುವ ಅಳತೆಯಿಂದಲೇ ನಿನ್ನನ್ನು ಅಳೆಯುವರು ಎಂದು" ನೀನು ಯಾವ ರೀತಿಯಲ್ಲಿ ಪ್ರಾರ್ಥಿಸುತ್ತೀಯೋ ಅದಕ್ಕೆ ತಕ್ಕ ರೀತಿಯಲ್ಲೇ ಉತ್ತರ ಬರುತ್ತೆ ಹೊರತು ನೀನು ಆಲೋಚಿಸುವ ರೀತಿಯಲ್ಲಿ ಸಮಾಧಾನದ ಉತ್ತರ ಸಿಕ್ಕುವುದಿಲ್ಲ. ದೇವರ ಆಜ್ಞೆಗಳನ್ನು ನಿರಾಕರಿಸಿ ಆತನಿಗೆ ವಿರುದ್ಧವಾಗಿ ನೀನು ನಡೆಯುವಾಗ ಕರ್ತನ ಕೃಪೆ ನಿನ್ನೊಟ್ಟಿಗೆ ನಿಲ್ಲುವುದಿಲ್ಲ, ಆಗ ಶಿಕ್ಷೆಗೆ ಒಳಗಾಗುತ್ತೀಯಾ! ನಿನ್ನನ್ನು ಪಾಪದಿಂದಲೂ ಶಾಪದಿಂದಲೂ ಬಿಡಿಸುವುದಕ್ಕೋಸ್ಕರ, ಪರಲೋಕ ರಾಜ್ಯಕ್ಕೆ ನೀನ್ನನ್ನು ಭಾದ್ಯಸ್ಥನಾ/ಳಾಗಿ ನಿಲ್ಲಿಸುವುದಕ್ಕೋಸ್ಕರ ನಿನ್ನನ್ನು ಆಯ್ಕೆ ಮಾಡಿಕೊಂಡು ಕೆಲವು ಆಜ್ಞೆಗಳನ್ನು ನಿನಗೆ ಕೊಟ್ಟಿದ್ದಾರೆ. ಆ ಆಜ್ಞೆಗಳನ್ನು ಕೈಗೊಳ್ಳದೇ ನಿನ್ನ ಮನಸ್ಸು ದೂರವಿದ್ದು; ಸುಮ್ಮನೆ ಆತನನ್ನು ಕೂಗುವುದಾದರೆ ಏನು ಪ್ರಯೋಜನ ನೀನೆ ಯೋಚಿಸಿ ನೋಡು. ಮಗುವಿನ ರೀತಿ ನಿನ್ನ ಸ್ವಭಾವ ಮಾರ್ಪಡಲೇಬೇಕು.

ಎಲ್ಲರ ಮನಸ್ಸನ್ನು ಅರ್ಥಮಾಡಿಕೊಂಡು ಕ್ರಿಸ್ತನ ಪ್ರೀತಿಯನ್ನು ಅವರಿಗೆ ತುಂಬಿಸಬೇಕಾಗಿರುವುದು ನಿನ್ನ ಕರ್ತವ್ಯವಾಗಿದೆ. ಸ್ವಂತ ಬುದ್ಧಿಯಿಂದ ನೀನು ನಡೆದುಕೊಂಡು ಹೋದರೆ ನಿನ್ನ ಜೊತೆಯಲ್ಲಿ ಇರುವ ವ್ಯಕ್ತಿಯ ಕಷ್ಟ ನಿನಗೆ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಕರ್ತನ ಕೃಪಾತಿಶಯದಿಂದ ಮಾತ್ರ ಮತ್ತೊಬ್ಬರನ್ನು ಕನಿಕರಿಸಲು ನಿನಗೆ ಆಗುತ್ತದೆ. ನಿನ್ನಲ್ಲಿ ಯಾವಾಗಲೂ ತಗ್ಗಿಸುವಿಕೆ ಇರಬೇಕು. ಮತ್ತೊಬ್ಬರ ಮೇಲೆ ನೀನು ನಮ್ರತೆಯುಳ್ಳವನಾ/ಳಾಗಿರಬೇಕು. ನಾನು ಬೇರೆಯವರಿಗಿಂತ ಹೆಚ್ಚಾಗಿರಬೇಕು ಎಂದು ಭಾವಿಸದೆ "ನನಗಿಂತ ಮತ್ತೊಬ್ಬರು ಶ್ರೇಷ್ಟವಾದವರು" ಎಂದು ಭಾವಿಸಬೇಕು. ಇಷ್ಟ ಬಂದ ರೀತಿಯಲ್ಲಿ ಕರ್ತನೊಟ್ಟಿಗೆ

ನಡೆದುಕೊಂಡು ಸುಳ್ಳು-ಸುಳ್ಳಾಗಿ ಆಶೆಯನ್ನು ನಿನ್ನ ಜೊತೆಯಲ್ಲಿರುವವರ ಮನಸ್ಸಿನಲ್ಲಿ ಹುಟ್ಟಿಸುತ್ತಾ, ಇಷ್ಟ ಬಂದ ರೀತಿಯಲ್ಲಿ ಅವರ ಮನಸ್ಸನ್ನು ಕದಲಿಸುತ್ತಾ 'ನಾನೇ' ಎಂಬ ಅಹಂಕಾರದಲ್ಲಿ ನೀನು ನಡೆಯುವುದಾದರೆ ನಿನಗೆ ನೀನೇ ಮೋಸಮಾಡಿಕೊಂಡು ಸೈತಾನನಿಗೆ ಲಾಭವಾಗುವ ರೀತಿ ನಡೆದುಕೊಳ್ಳುತ್ತಿದ್ದೀಯಾ ಎಂದು ಅರ್ಥಮಾಡಿಕೋ, ಆಗ ಕರ್ತನಿಂದ ಆಶೀರ್ವಾದಕ್ಕೆ ಬದಲಾಗಿ ಶಾಪವನ್ನು ಬರಮಾಡಿಕೊಳ್ಳುವೆ ಎಂದು ತಿಳಿದಿಕೋ!

ಕರ್ತನ ಮನಸ್ಸನ್ನು ತಿಳಿದು ಒಂದು ಚಿಕ್ಕ ಮಗುವಿನ ರೀತಿಯಲ್ಲಿ ನೀನು ನಡೆದುಕೊಂಡು ಅದರಂತೆ ಮತ್ತೊಬ್ಬರನ್ನು ಸೇರಿಸಿಕೊಳ್ಳದಿದ್ದರೆ ಪರಲೋಕ ರಾಜ್ಯಕ್ಕೆ ನೀನು ಸೇರುವುದಕ್ಕೆ ಆಗುವುದಿಲ್ಲ.

ಪ್ರಿಯರೇ ದಿಕ್ಕಿಲ್ಲದವರನ್ನು ಪರಾಂಬರಿಸಿರಿ ಆಗ ನೀವು ಆಪತ್ಕಾಲದಲ್ಲಿ ಸಿಕ್ಕಿಕೊಂಡಾಗ ಕರ್ತನು ನಿನ್ನನ್ನು ರಕ್ಷಿಸುವನು. ನಿನ್ನ ಜೊತೆಯಲ್ಲಿ ಇರುವ ವ್ಯಕ್ತಿಯನ್ನು ಕರ್ತನೊಟ್ಟಿಗೆ ನಡೆಸುವಾಗ ನಿನ್ನ ಪ್ರಾಣವನ್ನು ಉಳಿಸುವನು. ನೀನು ಸಭೆಯಲ್ಲಿ ನಿಲ್ಲುವಾಗ ಯಾವ ಮನುಷ್ಯನಿಗೂ ಅಧೀನವಾಗದೆ ಕರ್ತನ ಪಾದದಲ್ಲಿ ಸಂತೋಷವಾಗಿ ನಿಲ್ಲುತ್ತೀಯಾ! ಯಾಕೆಂದರೆ ತಪ್ಪು ಮಾಡುವವರ ತಲೆ ಎತ್ತಲ್ಪಡುವುದಿಲ್ಲ. ಕಾಯಿನನು ಹೇಬಲನನ್ನು ಕೊಂದ ಕಾರಣ ಅವನ ತಲೆ ಬೊಗ್ಗಿಸಲ್ಪಟ್ಟಿತೆಂದು ಸತ್ಯವೇದವು ನಮಗೆ ತಿಳಿಸುತ್ತದೆ. ಬೋಧಕರ ಮಾತುಗಳಿಗೆ ನೀನು ಕಿವಿಗೊಟ್ಟು ವಾಕ್ಯದ ಪ್ರಕಾರ ನೀನು ನಡೆಯುವಾಗ ಯಾವುದೇ ಕಾರಣಕ್ಕೂ ನಿನ್ನ ತಲೆ ತಗ್ಗಿಸಲ್ಪಡುವುದಿಲ್ಲ ಮತ್ತು ನೀನು ಅಸ್ವಸ್ಥನಾಗಿ ಬೀಳುವುದಿಲ್ಲ. ಒಂದು ವೇಳೆ ಅಸ್ವಸ್ಥಳಾ/ನಾಗಿ ಬಿದ್ದುಕೊಂಡರೇ ನೀನು ಎಲ್ಲೋ ಎಡವಿರುವಿ ಎಂದು ತಿಳಿದುಕೊಂಡು ದೇವರ ಬಳಿ ಪಶ್ಚಾತ್ತಾಪ ಪಟ್ಟು ನಿನ್ನ ತಪ್ಪುಗಳನ್ನು ದೇವರ ಮುಂದೆ ಅರಿಕೆಮಾಡಿಕೋ ಆಗ ಕರ್ತನು ಅದರಿಂದ ನಿನ್ನನ್ನು ಬಿಡಿಸಿ ಉದ್ಧರಿಸುವನು; ರೋಗವನ್ನೆಲ್ಲಾ ಪರಿಹರಿಸಿ ಆರೋಗ್ಯವನ್ನುಂಟು ಮಾಡುವನು. ನೀನು ಆತನಿಗೆ ವಿರುದ್ಧವಾಗಿ ನಡೆದುಕೊಂಡು ಕರ್ತನ ನಾಮವನ್ನು ಅಯೋಗ್ಯವಾಗಿ ಉಪಯೋಗಿಸಿಕೊಂಡು ಮನಸ್ಸಿನ ಆಲೋಚನೆಗಳನ್ನು ಬೇರೆ ಮಾಡಿಕೊಂಡಿರುವುದಾದರೆ ಈಗಲೇ ನಿನ್ನ ಮನಸ್ಸನ್ನು ಕರ್ತನಿಗೆ ಒಪ್ಪಿಸಿಕೊಟ್ಟು "ಕರ್ತನೇ, ನಿನ್ನ ಆಜ್ಞೆಯನ್ನು ಮೀರಿ ಪಾಪಮಾಡಿದ್ದೇನೆ; ನನ್ನನ್ನು ಕರುಣಿಸಿ ನಿನ್ನ ಕೃಪೆಯಲ್ಲಿ ನಡೆಸು" ಎಂದು ಹೇಳಿ ಪ್ರಾರ್ಥಿಸು. ಮುಂದೆ ಬರುವ ಶಿಕ್ಷೆಗೆ ಒಳಗಾಗದೇ ಆತನ ಎರಡನೇ ಬರೋಣಕ್ಕೆ ಸಿದ್ಧವಾಗು. ಕರ್ತನ ಮನಸ್ಸನ್ನು ಅರ್ಥಮಾಡಿಕೊಂಡು ನೀನು ನಿನ್ನ ಮನಸ್ಸನ್ನು ಬಿಚ್ಚಿ ಕರ್ತನನ್ನು ಕೂಗುವಾಗ ಆ ಕೂಗನ್ನು ಕರ್ತನು ಕೇಳುತ್ತಾನೆ. ಇಹಲೋಕದಲ್ಲೂ ಪರಲೋಕದಲ್ಲೂ ನಿನ್ನ ಸಕಲ ಅವಶ್ಯಕತೆಗಳನ್ನು ಆತನು ತಪ್ಪದೇ ಪೂರೈಸುವವನಾಗಿದ್ದಾನೆ.

"ನೀತಿಯನ್ನು ಬೆಳಕಿನಂತೆ ಇಟ್ಟಿಕೋ" ಆಮೆನ್

# 6. ವಿಶ್ವಾಸಿಯ ಕೂಗು

"ನೀವು ಸಂಶಯ ಪಡದೆ ನಂಬಿದರೆ ನಾನು ಅಂಜೂರದ ಮರಕ್ಕೆ ಮಾಡಿದಂಥದನ್ನು ನೀವು ಮಾಡುವಿರಿ. ಇದು ಮಾತ್ರವಲ್ಲದೆ ಈ ಬೆಟ್ಟಕ್ಕೆ – ನೀನು ಬೇರು ಸಹಿತ ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿದರೂ ಅದೂ ಆಗುವುದು. ನೀವು ನಂಬಿಕೊಂಡು ಪ್ರಾರ್ಥನೆಯಲ್ಲಿ ಏನೇನು ಬೇಡಿಕೊಳ್ಳುವಿರೋ ಅದನ್ನೆಲ್ಲಾ ಹೊಂದುವಿರಿ ಅಂದನು." (ಮತ್ತಾಯ 21:21,22)

ಪ್ರಿಯರೇ ಸಭೆಯಲ್ಲಿ ಬೋಧಕರು ವಾಕ್ಯವನ್ನು ಬೋಧಿಸುವಾಗ ಅದನ್ನು ಆಸಕ್ತಿಯಿಂದ ಕೇಳಿ ಅದರ ಪ್ರಕಾರ ನಡೆದುಕೊಂಡರೇ ನಂಬಿಕೆ ಹೃದಯದಲ್ಲಿ ಹೆಚ್ಚಾಗುತ್ತದೆ. ಮನೆಯಲ್ಲಿ ಕುಳಿತು ಕರ್ತನೊಟ್ಟಿಗೆ ಪ್ರಾರ್ಥಿಸುವಾಗ ಆ ಪ್ರಾರ್ಥನೆಗೆ ತಕ್ಕ ಉತ್ತರ ದೇವರಿಂದ ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಏಕೆಂದರೆ ವಾಕ್ಯ ಇಬ್ಬಾಯಿಕತ್ತಿ ಆಗಿರುವುದರಿಂದ ಅದು ಹೇಳುವವರಲ್ಲಿಯೂ ಕೇಳುವವರಲ್ಲಿಯೂ ಕಾರ್ಯವನ್ನು ನಡೆಸುತ್ತದೆ.

ಯಾವ ಬೋಧಕರೂ ತನ್ನ ಸ್ವಂತ ಜ್ಞಾನದಿಂದ ವಾಕ್ಯವನ್ನು ಬೋಧಿಸಲು ಸಾಧ್ಯವಾಗುವುದಿಲ್ಲ. ಕರ್ತನು ಆರಿಸಿಕೊಂಡ ವ್ಯಕ್ತಿಗೆ ಕೆಲವು ಅರ್ಹತೆಗಳು ಇರುತ್ತದೆ. ಕರ್ತನ ಅಭಿಷೇಕ ಅವರ ಮೇಲೆ ಇರುತ್ತದೆ. ಆಗ ಅವರು ಉತ್ತಮವಾದ ಮಾಧರಿಯಲ್ಲಿ ಜನರನ್ನು ಕರ್ತನೊಟ್ಟಿಗೆ ನಡೆಸುವುದಕ್ಕೆ ಸಾಧ್ಯವಾಗುತ್ತದೆ. ಕರ್ತನು ನಿಮ್ಮ ಮುಂದೆ ನೇರವಾಗಿ ನಿಲ್ಲಲು ಸಾಧ್ಯವಿಲ್ಲ. ಆತನು ಆರಿಸಿಕೊಂಡ ವ್ಯಕ್ತಿಯ ಮುಖಾಂತರ ನಿನ್ನೊಟ್ಟಿಗೆ ಮಾತಾಡಲು ಇಷ್ಟಪಡುತ್ತಾನೆ. ಅದಕ್ಕಾಗಿ ನೀನು ಯಾವಾಗ ಬೋಧಕರ ಮಾತಿಗೆ ಕಿವಿಗೊಡುತ್ತೀಯೋ ಆಗ ನೀನು ಕರ್ತನ ಪಾದ ಸನ್ನಿಧಿಯಲ್ಲಿ ಕುಳಿತು ನಿನ್ನ ವಿಷಯಗಳನ್ನು ಇಟ್ಟು ಪ್ರಾರ್ಥಿಸುವ ವಿಚಾರವಾಗಿ ನಿನಗೆ ಉತ್ತರ ಸಿಗುತ್ತದೆ.

ನಮ್ಮ ಮಹಿಮಾ ಪ್ರಾರ್ಥನಾ ಮಂದಿರ ಸಭೆಯಲ್ಲಿ ದೇವರ ಮಗಳಾಗಿ ಆತನೊಟ್ಟಿಗೆ ಜೀವಿಸುತ್ತಿರುವ ಒಬ್ಬ ಸಹೋದರಿ ಎಸ್.ಎಸ್.ಎಲ್.ಸಿ ಯಲ್ಲಿ 92% ಜಯಿಸಿ ಪತ್ರಿಕೆಯಲ್ಲಿ ಭಾವಚಿತ್ರ ಬರುವ ರೀತಿ ಕರ್ತನು ಮಾಡಿದನು. ಅದೇ ರೀತಿ 2ಪಿ.ಯು.ಸಿ ನಲ್ಲೂ ನಂಬಿಕೆಯನ್ನು ಬಿಡದೇ ನಿರಂತರವಾಗಿ ಪ್ರಾರ್ಥಿಸಿಕೊಂಡು ಬಂದಾಗ 82% ಗಳಿಸಿ ಜಯಿಸಲು ಸಾಧ್ಯವಾಗಯಿತು. ಆ ಸಹೋದರಿ ಕರ್ತನ ವಾಕ್ಯವನ್ನು ಹಿಡಿದು ಪ್ರಾರ್ಥಿಸಿಕೊಂಡು, ಬೋಧಕರು ಹೇಳುವ ಮಾತಿಗೆ ಕಿವಿಗೊಟ್ಟು ನಡೆದ ಕಾರಣ ಒಳ್ಳೇ ಫಲಿತಾಂಶ ಸಿಕ್ಕಿತು. ಅದೇ ರೀತಿ ಕಾಲೇಜ್‌ಗೆ ಸೇರಲು ಐ.ಎಸ್.ಇ (ಇನ್‌ಫರ್‌ಮೇಶನ್ ಸೈನ್ಸ್) ಅನ್ನು ತೆಗೆದುಕೊಳ್ಳಲು ಕರ್ತನು ಕೃಪೆಕೊಟ್ಟನು. ಆ ಸಹೋದರಿ ಅದನ್ನು ಮುಗಿಸಲು ಹೆಜ್ಜೆ–ಹೆಜ್ಜೆಗೂ ಅವಳೊಟ್ಟಿಗೆ ಕರ್ತನು ಕೂಡವಿದ್ದು ಸಹಾಯ ಮಾಡಿದ ಕಾರಣ ಇಂಜಿನೀಯರಿಂಗ್ ಮುಗಿಸಲು

ಸಹಾಯಮಾಡಿ ಅಲ್ಲೇ ಕ್ಯಾಂಪಸ್ ಸೆಲೆಕ್ಷನ್‌ನಲ್ಲಿ ಆಯ್ಕೆಯಾದಳು ಯಾವುದೇ ಮನುಷ್ಯನ ಸಹಾಯವಿಲ್ಲದೇ ಅವಳು ಕೆಲಸಕ್ಕೆ ಸೇರಲು ಸಹಾಯವಾಯಿತು. ಅದಾದ ನಂತರ ಸಹೋದರಿಗೆ ಕೆಲಸ ಖಾಯಂ ಆಗಲು ಪ್ರಾರ್ಥಿಸಿದಳು ಆದರೇ ಆ ಕೆಲಸ ಬಾಂಬೆಗೆ ವರ್ಗಾವಣೆಯಾಯಿತು. ಆ ಸಹೋದರಿ ತುಂಬಾ ದುಃಖದಿಂದ ಕರ್ತನೊಟ್ಟಿಗೆ ಉಪವಾಸದಲ್ಲಿ ಪ್ರಾರ್ಥಿಸಲು ಪ್ರಾರಂಭಿಸಿದಳು. ಅವಳ ಜೊತೆಯಲ್ಲಿ ಅವಳ ತಾಯಿಯು ಸಹ ಹೆಚ್ಚು ಪರಿಶ್ರಮ ಪಡುತ್ತಾ ಸಭೆಯಲ್ಲಿ ವಿಶ್ವಾಸಿಗಳೊಟ್ಟಿಗೆ ವಿಷಯವನ್ನು ತಿಳಿಸಿ ಬೋಧಕರ ಸಹಾಯವನ್ನು ಪಡೆಯುತ್ತಾ ಕಣ್ಣೀರಿನಿಂದ ನಂಬಿಕೆಯಲ್ಲಿ ಪ್ರಾರ್ಥಿಸುತ್ತಿದ್ದರು. ಯಾರು ಏನೇ ಹೇಳಿದರೂ ಆ ಮಾತಿಗೆ ಕಿವಿಗೊಡದೇ ಇಕ್ಕಟ್ಟಿನಲ್ಲೇ ಪ್ರಾರ್ಥಿಸಿಕೊಂಡು ಬಂದರು ಸಹೋದರಿಗೆ ಬೆಂಗಳೂರಿನಲ್ಲಿ ಕೆಲಸ ಆಗಬೇಕು, ತಂದೆ-ತಾಯಿಯೊಟ್ಟಿಗೆ ಇರಬೇಕು, ನಾನು ಬೆಳೆಯುತ್ತಿರುವ ಸಭೆಯಲ್ಲೇ ಇರಬೇಕು ಎನ್ನುವ ಹೋರಾಟದಲ್ಲಿ ಕರ್ತನೊಟ್ಟಿಗೆ ಪ್ರಾರ್ಥಿಸಿದಳು.

ನೋಡಿರಿ! ಕರ್ತನೊಟ್ಟಿಗೆ ಆ ಸಹೋದರಿ ಪ್ರಾರ್ಥಿಸಿದುದಕ್ಕೆ ಹೇಗೆ ಉತ್ತರ ಸಿಕ್ಕಿತು ಅಂದರೆ. ಬೆಂಗಳೂರಿಗೆ ನಿನ್ನ ಕೆಲಸ ವರ್ಗಾವಣೆ ಆಗಲು, ಇಲ್ಲಿ ಖಾಯಂ ಅಗಲ್ಲ ಎಂದು ಹೇಳಿದ ವ್ಯಕ್ತಿಯೇ ದೂರವಾಣಿ ಮುಖಾಂತರ ಸಹೋದರಿಗೆ ಫೋನ್ ಮಾಡಿ ನೀನು ಬಾಂಬೆಗೆ ಹೋಗಬೇಕಾದ ಅವಶ್ಯವಿಲ್ಲ ನಿನಗೆ ಬೆಂಗಳೂರಿನಲ್ಲೇ ಖಾಯಂ ಆಯಿತು. ಎಂದು ಹೇಳಿದರು. ಆ ಸಹೋದರಿಗೆ ಎಲ್ಲಿಲ್ಲದಾ ಸಂತೋಷ ಅವಳಲ್ಲಿ ತುಂಬಿ ತುಳುಕಿತು. ಅವಳ ಉಪವಾಸ ಪ್ರಾರ್ಥನೆಯ ಕಣ್ಣೀರು ಕರ್ತನಲ್ಲಿ ವ್ಯರ್ಥವಾಗಲಿಲ್ಲ. 'ಅಸಾಧ್ಯಗಳನ್ನು ಸಾಧ್ಯಪಡಿಸುವಂತದ್ದೇ' ನನ್ನ ಕರ್ತನ ಕಾರ್ಯಗಳಾಗಿವೆ.

ನೀನು ಯಾರಲ್ಲಿ ನಂಬಿಕೆಯಿಟ್ಟು ವಿಧ್ಯಾಭ್ಯಾಸ ನಡೆಸುತ್ತಿದ್ದೀಯಾ? ಯಾರಲ್ಲಿ ನಂಬಿಕೆಯಿಟ್ಟು ಕೆಲಸಕ್ಕೆ ಹೋಗುತ್ತಿದ್ದೀಯಾ? ಯಾರಲ್ಲಿ ನಂಬಿಕೆಯಿಟ್ಟು ವ್ಯಾಪಾರ ಮಾಡುತ್ತೀದ್ದೀಯಾ? ನೀನೇ ಯೋಚಿಸಿ ನೋಡು. ನೀನು ಕರ್ತನಲ್ಲಿ ನಂಬಿಕೆಯಿಟ್ಟು ಆ ಸಹೋದರಿ ರೀತಿಯಲ್ಲಿ ನೀನು ಮುಂದುವರೆಯುವುದಾದರೆ ಅವಳ ರೀತಿಯಲ್ಲಿ ನಿನ್ನ ಕಾರ್ಯಗಳು ಜಯವಾಗುತ್ತದೆ. ಸ್ವಂತಬುದ್ಧಿಯಿಂದ ಹೋಗುವುದಾದರೆ ತಾತ್ಕಾಲಿಕವಾಗಿ ಜಯ ಸಿಗುತ್ತೇ ಹೊರತು ಸಹೋದರಿಯ ರೀತಿ ಖಾಯಂ ಆಗಲು ಸಾಧ್ಯವೇ ಇಲ್ಲ.

"ಕರ್ತನ ಮಾರ್ಗವನ್ನು ಹುಡುಕು" ಆಮೆನ್

# 7. ನನ್ನ ಕೂಗು

"ಅವರು ತಮ್ಮ ಇಕ್ಕಟ್ಟಿನಲ್ಲಿ ಯೆಹೋವನಿಗೆ ಮೊರೆಯಿಡಲು ಆತನು ಅವರನ್ನು ಕಷ್ಟದಿಂದ ಬಿಡಿಸಿದನು." (ಕೀರ್ತ 107:6)

ನನ್ನ ಪ್ರಿಯನಾಗಿರುವ ಯೇಸುಕ್ರಿಸ್ತನಿಗೆ ನಾನು ಎಷ್ಟು ಸ್ತೋತ್ರಗಳನ್ನು ಸಲ್ಲಿಸಿದರೂ ಸಾಲದು. ಕಾರಣ ಮೇಲೆ ತಿಳಿಸಿರುವ ವಾಕ್ಯದ ಪ್ರಕಾರ ನಾನು ಅನೇಕ ಭಾರಿ ಇಕ್ಕಟ್ಟಿಗೆ ಸಿಲುಕಿಕೊಂಡು ಆತನಿಗೆ ಮೊರೆಯಿಟ್ಟೆನು, ಕರ್ತನು ನನ್ನನ್ನು ಸಕಲ ಕಷ್ಟದಿಂದ ಬಿಡಿಸಿದನು. ನಿಮಗೆ ನಾನು ಕರ್ತನಿಂದ ಹೊಂದಿಕೊಂಡ ಒಂದು ಅದ್ಭುತವನ್ನು ಹಂಚಿಕೊಳ್ಳಲು ಇಷ್ಟಪಡುತ್ತೇನೆ. ನನ್ನ ದುಃಖದ ಈ 'ನನ್ನ ಕೂಗ'ನ್ನು ನಿಮಗೆ ತಿಳಿಸಲು ಕರ್ತನು ನನ್ನ ಹೃದಯದಲ್ಲಿ ಮಾತಾಡಿದ ಕಾರಣ ನಿಮ್ಮೊಟ್ಟಿಗೆ ನಾನು ಕರ್ತನು ಮಾಡಿರುವ ಈ ಮಹಾ ಉಪಕಾರವನ್ನು ಹಂಚಿಕೊಳ್ಳುತ್ತಿದ್ದೇನೆ. ಕರ್ತನಿಗಾಗಿ ಜೀವಿಸಲು ನಾನು ಮನಸ್ಸುಮಾಡಿ ನನ್ನ ಮನೆಯವರನ್ನು ನನಗಿರುವ ಸಕಲ ಆಸ್ತಿ ಐಶ್ವರ್ಯವನ್ನು ಸಮಸ್ತವನ್ನು ಬಿಟ್ಟು ಕ್ರಿಶ 2000ದ ವರ್ಷದಲ್ಲಿ ಮನೆ ಬಿಟ್ಟೆನು. ಆ ಸಮಯದಲ್ಲೇ ನಾನು ಅನೇಕ ರೀತಿಯ ಶೋಧನೆಗಳನ್ನು ಎದುರಿಸಿದೆನು ಆದರೆ ನನ್ನ ಪ್ರಿಯನಾದ ಯೇಸುಕ್ರಿಸ್ತನು ನನ್ನ ಕೂಗನ್ನು ಕೇಳಿ ತಕ್ಕ ಸಮಯದಲ್ಲಿ ನನಗೆ ಉತ್ತರ ಕೊಟ್ಟು ನನ್ನನ್ನು ಬಿಡಿಸಿ ಸಂರಕ್ಷಿಸಿ ಈವರೆಗೂ ತನ್ನ ಕಣ್ಮಣಿಯ ಹಾಗೆ ಕಾಪಾಡಿಕೊಂಡು ಬಂದಿದ್ದಾರೆ. ನಾನು ಆತನ ಆಶ್ರಯದಲ್ಲಿ ಭದ್ರವಾಗಿ ನೆಲೆಗೊಂಡಿದ್ದೇನೆ.

ಎ.ಜಿ.ಬೇತೆಲ್ ಎಂಬ ಸಭೆಯಲ್ಲಿ ನಾನು 'ದೀಕ್ಷಾಸ್ನಾನ'ವನ್ನು ತೆಗೆದು ಕೊಂಡೆನು. ನನಗೆ ದೀಕ್ಷಾಸ್ನಾನ ಕೊಟ್ಟ ನನ್ನ ಆತ್ಮೀಯ ತಂದೆಯ ಹೆಸರು. ಸಂತೋಷ್(ಜಾನ್ಸಸನ್ ವರ್ಗೀಸ್) ಎಂದು ಈ ಪಾಷ್ಟರ್ ಕೈಯಲ್ಲಿ 1997 ಮಾರ್ಚ್ 16 ರಂದು ಕರ್ತನಲ್ಲಿ ಹುಟ್ಟುವಂತೆ ದೇವರು ನನಗೆ ಕೃಪೆ ತೋರಿಸಿದರು. ಅಲ್ಲಿ 21 ದಿನ ಉಪವಾಸದ ಕೂಟಗಳು ನಡೆಯುತ್ತಿತ್ತು. ಪ್ರತಿವರ್ಷ ಈ ಉಪವಾಸ ಕೂಟ ನಡೆಯುತ್ತದೆ. ಈಗಲೂ ಸಹ ನಡೆಯುತ್ತಲೇ ಇದೆ. ನಾನು ಈ ಉಪವಾಸವನ್ನು ತಪ್ಪದೇ ಮಾಡಬೇಕು ಎನ್ನುವ ಹಂಬಲದಿಂದ ದೇವರ ಕೃಪೆಯಿಂದ ರಕ್ಷಣೆಹೊಂದಿದ ದಿನದಿಂದಲೂ ನಾನು ಉಪವಾಸವನ್ನು ಮಾಡುತ್ತಿದ್ದೆನು, ಅದರಿಂದ ಉತ್ತಮವಾದ ಆಶೀರ್ವಾದಗಳನ್ನು ನಾನು ಪಡೆದುಕೊಂಡೆನು, ಇಂತಹ ಸಮಯದಲ್ಲಿ ಸಿಗುವಂತಹ ಆಶೀರ್ವಾದಗಳು ನನ್ನ ಜೀವನವನ್ನೇ ಮಾರ್ಪಡಿಸುತ್ತಿತ್ತು. ಮತ್ತು ನನಗೆ ಸಂತೋಷ, ಸಮಾಧಾನ, ದೇವರೊಟ್ಟಿಗೆ ಮಾತನಾಡುವುದು, ದರ್ಶನವನ್ನು ಕಾಣುವುದು, ಕರ್ತನ ಅನ್ಯೋನ್ಯತೆಯಲ್ಲಿ ಬೆಳೆಯುವುದು ಇನ್ನು ಅಧಿಕವಾದ ಕ್ರಿಸ್ತನ ಪ್ರೀತಿಯಲ್ಲಿ ಬೇರೂರಿ ನಿಲ್ಲುವುದು ನನಗೆ ತುಂಬಾ ಇಷ್ಟವಾಗುತ್ತಿತ್ತು. ಆರಾಧನೆ ಅಂದರೆ ನನಗೆ ಪಂಚಪ್ರಾಣ ಯಾಕೆಂದರೆ

ನಾನು ನನ್ನ ಯೇಸುವಿನ ಬಳಿಯಲ್ಲಿ ಮಾತಾಡುತ್ತಾ, ಕರ್ತನಿಗೆ ಕೃತಜ್ಞತಾ ಸ್ತುತಿ ಸಲ್ಲಿಸುತ್ತಾ ಆತನನ್ನು ಕೊಂಡಾಡುವ ಸಮಯವಿದೇ ಆಗಿದೆ ಮತ್ತು ನಾನು ಆತನೊಟ್ಟಿಗೆ ಹೆಚ್ಚು ಅನ್ಯಭಾಷೆಯಲ್ಲಿ ಮಾತನಾಡಬಹುದು.

ಇದರಿಂದ ನಾನು ಎಷ್ಟು ಆಶೀರ್ವಾದಗಳನ್ನು ಹೊಂದಿಕೊಂಡೆನೆಂದು ವರ್ಣಿಸುವುದಾದರೆ ಸಮಯಸಾಲುವುದೇ ಇಲ್ಲ. ನೀವು ಒಂದು ಭಾರಿ ಆ ಆರಾಧನೆಯ ಅನುಭವಕ್ಕೆ ಬರಲು ಅದರಿಂದ ಆಶೀರ್ವಾದಗಳನ್ನು ಹೊಂದಿಕೊಳ್ಳಲು ನಿಮ್ಮ ಹೃದಯವನ್ನು ಒಪ್ಪಿಸಿಕೊಟ್ಟು ನೋಡಿರಿ, ಆಗ ದಿನವೆಲ್ಲಾ ನಾನು ನನ್ನ ಯೇಸುವಿನೊಟ್ಟಿಗೆ ಇರಬೇಕು, ಬೇರೆ ಯಾರೂ ಈ ಲೋಕದಲ್ಲಿ ಬೇಡ ಎಂದು ನೀವೇ ತೀರ್ಮಾನ ಮಾಡಿಕೊಳ್ಳುತ್ತೀರಾ! ಯಾಕೆಂದರೆ ನನ್ನ ಯೇಸು ನನ್ನ ಜೀವನದಲ್ಲಿ ಮಾಡಿರುವ ಅದ್ಭುತವನ್ನು ವರ್ಣಿಸಲು ಅಸಾಧ್ಯ; ಅದಕ್ಕಾಗಿಯೇ ಎಂಥಹಾ ಕಷ್ಟ ಬಂದರೂ ಹೆದರದೇ ಆತನ ನೆರಳಿನಲ್ಲಿ ನಿಂತಿದ್ದೇನೆ.

ಪ್ರಿಯ ದೇವರ ಮಕ್ಕಳೇ ಜ್ಞಾನವೇ ಇಲ್ಲದೆ ಇರುವ ನನ್ನನ್ನು ಆರಿಸಿಕೊಂಡು, ಈಗ ಈ ಪುಸ್ತಕಗಳನ್ನು ಬರೆಯುವ ಅಭಿಷೇಕ ನನ್ನಲ್ಲಿ ಕರ್ತನು ತುಂಬಿದ್ದಾರೆ ಅಂದರೆ ಆತನ ಪ್ರೀತಿಗೆ ನಾನು ಪಾತ್ರಳಾಗಿದ್ದೇನೆಂದು ನನಗೆ ಅರ್ಥವಾಗುತ್ತದೆ. ನಾನು 2007ನೇ ವರ್ಷದಲ್ಲಿ 21ದಿನದ ಉಪವಾಸದಲ್ಲಿ ಪಾಲ್ಗೊಳ್ಳಬೇಕಾಯಿತು ಆಗ ನಾನು ಆಂಧ್ರಪ್ರದೇಶದಲ್ಲಿ ಒಂದು ಕುಟುಂಬದಲ್ಲಿ ಸೇವೆಯಲ್ಲಿದ್ದೆ. ಆಗ ಈ ಉಪವಾಸ ಆರಂಭವಾಗಿತ್ತು. ನಾನು ಸಹ ಸಭೆಯೊಟ್ಟಿಗೆ ಈ ಉಪವಾಸ ತೆಗೆದುಕೊಳ್ಳಬೇಕೆಂದು ಆಂಧ್ರದಲ್ಲೇ ಉಪವಾಸ ಪ್ರಾರಂಭಮಾಡಿದೆ. ಒಂದನೇ ದಿನದ ಉಪವಾದಸದಂದು ಸಾಯಂಕಾಲ ಬೆಂಗಳೂರಿಗೆ ರೈಲಿನಲ್ಲಿ ಪ್ರಯಾಣಮಾಡಬೇಕಾಗಿತ್ತು. ದೇವರು ನನ್ನೊಟ್ಟಿಗೆ ಇರುತ್ತಾನೆ ಎಂಬ ಧೈರ್ಯದಿಂದ ಉಪವಾಸದಲ್ಲೇ ಪ್ರಯಾಣಮಾಡಿದೆ. ಆಗ ಮಧ್ಯರಾತ್ರಿ 2:00 ಗಂಟೆವರೆಗೂ ಸೀಟು ಸಿಗದೇ ನಿಂತುಕೊಂಡು ಪ್ರಯಾಣ ಮಾಡಿ ನನಗೆ ತುಂಬಾ ಆಯಾಸವಾಯಿತು. ಕಾರಣ ನಾನು ಜನರಲ್‌ಗೆ ಬಂದಿದ್ದು; ಬುಕಿಂಗ್ ಮಾಡಿಕೊಳ್ಳಲಿಲ್ಲ. ಆದರೂ ಪರವಾಗಿಲ್ಲ ಎಂದು ಪ್ರಯಾಣಮಾಡಿದೆ, 2ನೇ ದಿನದ ಉಪವಾಸದಲ್ಲಿ ಮಧ್ಯಾಹ್ನ ಬೆಂಗಳೂರಿಗೆ ಬಂದೆ. ನಾನು ನೇರವಾಗಿ ಸಭೆಗೆ ಹೋದೆ, ಅಲ್ಲಿ ಒಂದು ದಿನ ಇದ್ದು, 4ನೇ ದಿನ ನನ್ನ ಗೆಳತಿ ಸ್ಮಿತಾ ಮನೆಗೆ ಹೋಗಿ ಅಲ್ಲಿ ಆ ದಿನವಿದ್ದು 5ನೇ ದಿನ ನಾನು ನನ್ನ ಆತ್ಮೀಯ ತಮ್ಮನಾದ ಶಾಲೇಮ್ ಆ ದಿನ ಅಲ್ಲೇ ಇದ್ದು 6ನೇ ದಿನ ನಾನು ತಮ್ಮನಾದ ಶಾಲೇಮ್ ಸ್ಮಿತಾ ಬಸ್ಸಿನಲ್ಲಿ ಸಭೆಗೆ ಹೊರಟೆವು. ಬಸ್ಸ್ ಇಳಿದು ಹೆಬ್ಬಾಳ ರಿಂಗ್ರೋಡ್ ದಾಟಿ ಸಭೆಗೆ ಹೋಗಬೇಕು. ಆಗ ನನ್ನ ಬಲಗಡೆ ಶಾಲೇಮ್ ಇದ್ದಾನೆ, ಎಡಗಡೆ ಸ್ಮೀತಾ ಇದ್ದಾಳೆ ಇಬ್ಬರ ಕೈಯಿಡಿದು ಮಧ್ಯದಲ್ಲಿ ನಾನು ರಸ್ತೆದಾಟಲು ಹೋಗುವಾಗ ಸಿಗ್ನಲ್ ಬಿತ್ತು, ಯಾವ ಗಾಡಿಗಳು ಬರಲ್ಲಾ ಎಂದು ತಿಳಿದು ವೇಗನೆ ರಸ್ತೆ ದಾಟಲು ಮುಂದಾದೆವು ಒಂದು 'ಪಲ್ಸರ್' ಗಾಡಿ ವೇಗನೆ ಬಂದ ಕಾರಣ ನನ್ನ ಬಲಗೈಗೆ ಅಪಘಾತವಾಗಿ ಕೆಳಗೆ ಬಿದ್ದು ಹೋದೆನು, ದೇವರ ಕೃಪೆಯಿಂದ ನನ್ನ ಕೈ ಹಿಡಿದಿದ್ದ ಶಾಲೇಮನಿಗೆ ಏನೂ ಆಗಲಿಲ್ಲ. ನನಗೆ ಗಾಡಿ ಹೊಡೆದ ಕಾರಣ ಪ್ರಜ್ಞೆತಪ್ಪಿಹೋಯಿತು. ಆಟೋದಲ್ಲಿ 'ಕೊಲೊಂಬೊ

ಏಷಿಯಾ' ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿ ಬಿಟ್ಟು ಎಲ್ಲರೂ ಹೊರಟುಹೋದರು. ಆದರೆ ಸ್ಮಿತಾ, ಶಾಲೇಮ್ ತುಂಬಾ ಅಳುತ್ತಾ ಅಲ್ಲಿ ಇದ್ದ ವ್ಯಕ್ತಿಗಳೊಟ್ಟಿಗೆ ಸಹಾಯ ಬೇಡುತ್ತಿದ್ದಾರೆ, ಯಾರೂ ಮುಂದಾಗಿ ಬಂದು ಸಹಾಯಮಾಡಲಿಲ್ಲ. ಸ್ಮಿತಾ ಅನೇಕ ಪಾಸ್ಟರ್ ಸಹಾಯಕೇಳಲು ಫೋನ್ ಮಾಡಿದರೂ ಎಲ್ಲಾ ಕಡೆ ಮೀಟಿಂಗ್ ನಡೆಯುತ್ತಿದ್ದ ಕಾರಣ ಯಾರೂ ನಮ್ಮ ಸಹಾಯಕ್ಕೆ ಬರಲೇ ಇಲ್ಲ. ಅವಳಿಗೆ ತುಂಬಾ ಭಯವಾಗಿ ಏನು ಮಡಬೇಕೋ ಗೊತ್ತಾಗದೆ ಅಲೆಯುತ್ತಿದ್ದಳು. ನನ್ನನ್ನು ಎಕ್ಸ್‌ರೇ ರೂಮಿಗೆ ಕರೆದುಕೊಂಡು ಹೋಗಿ ಮಲಗಿಸಿದರು. ನನ್ನನ್ನು ಅಲ್ಲಿ ಒಂದು ನಿಮಿಷ ಒಂಟಿಯಾಗಿ ಬಿಟ್ಟು ಎಲ್ಲರು ಹೊರಗೆ ಹೋದರು. ನಮ್ಮ ಬಳಿಯಲ್ಲಿ 200 ರೂ ಮಾತ್ರ ಹಣವಿತ್ತು. ಅದು ನಾನು ತೆಗೆದುಕೊಳ್ಳುತ್ತಿದ್ದಂತಹ ಚಿಕಿತ್ಸೆಗೆ ಸ್ವಲ್ಪವೂ ಸಾಕಾಗುತ್ತಿರಲಿಲ್ಲ, ಆದಕಾರಣ ನಾನು ಬಹು ದುಃಖದಿಂದ ಆಸ್ಪತ್ರೆಯಲ್ಲಿ ಯೇಸುವಿನ ಬಳಿ ಪ್ರಾರ್ಥಿಸಿದೆ- "ಹೆತ್ತ ತಾಯಿ ತನ್ನ ಕೂಸನ್ನು ಮರೆಯುತ್ತಾಳೆ. ಆದರೆ ನಾನು ನಿನ್ನನ್ನು ಮರೆಯುವುದಿಲ್ಲ" ಎಂದು ಹೇಳಿದ ದೇವರೇ ಕೃಪೆ ತೋರಿಸು, ಇದರಿಂದ ನನ್ನನ್ನು ತಪ್ಪಿಸಿ ಕಾಪಾಡು. ನನ್ನನ್ನು ಕೈ ಬಿಡಬೇಡ ಎಂದು ಹೇಳುತ್ತಾ ಕಣ್ಣೀರು ಇಟ್ಟು ಪ್ರಾರ್ಥಿಸಿದೆನು. ನಂತರ ನನಗೆ ಎಕ್ಸ್‌ರೇ ತೆಗೆದು ಹೊರಗೆ ಕರೆದುಕೊಂಡು ಬರುವಾಗ ನನ್ನ ಎದುರಾಗಿ ಒಬ್ಬ ವ್ಯಕ್ತಿ ಅಂದರೆ-"ಬಂಗಾರದ ಕೂದಲು ನೀಲಿ, ಹಳದಿ ಇರುವ ಚೆಕ್ಸ್ ಶರ್ಟ್ ಗೋದಿ ಬಣ್ಣದ ಪ್ಯಾಂಟ್ ಹಾಕಿರುವ ವ್ಯಕ್ತಿ ಬಂದಾಗ ನನಗೆ ತಿಳಿಯದೇ ಎರಡು ಕೈಗಳನ್ನು ಎತ್ತಿ ಸ್ತೋತ್ರ ಹೇಳಿದೆ ಆಗ ಅವರು ನನ್ನನ್ನು ನೋಡಿ ನಗುತ್ತಾ ಮುಂದೆ ಹೋದರು. ಅಲ್ಲಿ ಸ್ಮಿತಾ ಅಳುತ್ತಾ ಇರುವಾಗ ಆ ವ್ಯಕ್ತಿ ನೋಡಿ  ಯಾಕೆ ಅಳುತ್ತಾ ಇದ್ದೀಯಾ ಅಂದಾಗ-ನನ್ನ ಅಕ್ಕನಿಗೆ ಸಹಾಯ ಮಾಡಲು ಯಾರೂ ಬರುತ್ತಿಲ್ಲಾ. ಆಸ್ಪತ್ರೆಗೆ ಹಣ ಕಟ್ಟಬೇಕು ಎಂದು ಹೇಳಿದಾಗ ಅವರು ಹೇಳಿದರು- "ನೀನು ಭಯಪಡಬೇಡ ನಿನಗೆ ಏನೇ ಬೇಕೆಂದರೂ ನಾನು ಮೇಲೆ ಇರುತ್ತೇನೆ ಬಂದು ಕೇಳು" ಎಂದು ಹೇಳಿ ಹೊರಟು ಹೋದರು. ನನಗೆ ಚಿಕಿತ್ಸೆ ಆದ ಮೇಲೆ ಹೊರಗೆ ಬಂದಾಗ, ಸ್ಮಿತಾ ಹೇಳಿದಳು- ಬಾ ನಮಗೆ ಸಹಾಯ ಮಾಡಿದ ವ್ಯಕ್ತಿಗೆ ಕೃತಜ್ಞತೆ ಹೇಳೋಣ ಅವರು ಮೇಲೆ ಇರುತ್ತಾರಂತೆ ಅಂದಳು. ನಾವಿಬ್ಬರು ಹೋಗಿ ನರ್ಸ್ ಹತ್ತಿರ ಮೇಲೆ ಹೋಗಲು ಜಾಗ ತೋರಿಸಿ ಎಂದು ಕೇಳಿದೆವು ಆಗ- ಅವರು ಇಲ್ಲಾ ಮೇಲೆ ಏನೂ ಇಲ್ಲ; ಯಾರೂ ಇಲ್ಲ ಅಂದರು. ನಮಗೆ ಸಹಾಯ ಮಾಡಿದ ವ್ಯಕ್ತಿ ಮೇಲೆ ಇರುತ್ತೇನೆ ಬಾ ಅಂದರು ಅದಕ್ಕೆ ನಾವು ಕೇಳುತ್ತಿದ್ದೇವೆ ತೋರಿಸಿ ಎಂದು ಕೇಳಿಕೊಂಡೆವು, ನರ್ಸ್ ಹೇಳಿದರು ಇಲ್ಲಾ ಬೇಕಾದರೆ ಹೋಗಿ ನೋಡಿ, ಮೇಲೆ ಏನೂ ಇಲ್ಲ. ನಿಮಗೆ ಆಸ್ಪತ್ರೆನೇ ಸಹಾಯ ಮಾಡಿದ್ದು ಎಂದು ಹೇಳಿದರು. ನಾವು ತುಂಬ ಆಶ್ಚರ್ಯಪಡುತ್ತಾ ಆಸ್ಪತ್ರೆಯಿಂದ ಹೊರಗೆ ಬಂದೆವು. ವಾಕ್ಯ ಹೇಳುತ್ತದೆ- ಆತನು ದೂತನ ಹಾಗೆ ಮನುಷ್ಯ ರೀತಿಯಲ್ಲಿ ಬಂದು ಸಹಾಯ ಮಾಡುತ್ತಾರೆಂದು ಮತ್ತೇ ಯೇಸುದೇವರು ಸತ್ತು 3ನೇ ದಿನ ಎದ್ದು 40 ದಿನ ಶಿಷ್ಯರೊಟ್ಟಿಗೆ ಇರುವಾಗ ಅವರಿಗೆ ಕರ್ತನ ಗುರುತು ತಿಳಿಯಲಿಲ್ಲ, ಯಾವಾಗ ರೊಟ್ಟಿ ಮುರಿದರೋ ಆಗ ಅವರ ಕಣ್ಣು ತೆರೆಯಲ್ಪಟ್ಟಿತು, ಅದೇ ರೀತಿ ನನ್ನ ಕರ್ತನು ನನ್ನ ಕೂಗನ್ನು ಕೇಳಿ ಒಬ್ಬ ಮನುಷ್ಯನ ರೂಪದಲ್ಲಿ ಬಂದು ಸಹಾಯ ಮಾಡಿದನು. ಎಂದು ನಾನು

ಗ್ರಹಿಸಿಕೊಂಡು ಕರ್ತನಿಗೆ ಮಹಿಮೆಯನ್ನು ಸಲ್ಲಿಸಿದೆನು.

ದೇವರು ನಮ್ಮ ಕೂಗನ್ನು ಯಾವಾಗಲು ಕೇಳುವ ದೇವರಾಗಿದ್ದಾನೆ. ನನಗೆ ಯಾರೂ ಸಹಾಯಕರು ಇಲ್ಲದೆ ಇರುವಂತಹ ಸಂಧರ್ಭದಲ್ಲಿ ಕರ್ತನು ತಾನೇ ಇಳಿದು ಬಂದು ಸಹಾಯ ಮಾಡಿದನು, ಇದು ನಂಬಲು ಅಸಾಧ್ಯವಾದಂತಹ ಮಾತಾಗಿದೆ ಆದರೆ ನನ್ನ ಕರ್ತನು ಇಂದಿಗೂ ಜೀವಿಸುತ್ತಿದ್ದಾನೆ ನನ್ನ ಅಸಹಾಯಕವಾದ ಕೂಗನ್ನು ಕೇಳಿ ತಾನೇ ನನಗೆ ಸಹಾಯಮಾಡಿದನು ಎಂದು ನಿಮಗೆ ತಿಳಿಸಲು ನಾನು ಬಹಳ ಸಂತೋಷವುಳ್ಳವಳಾಗಿದ್ದೇನೆ.

ಪ್ರಿಯರೇ ನೀವು ಎಂಥ ಇಕ್ಕಟ್ಟಿನಲ್ಲಿ ಇರುವುದಾದರೂ ಜೀವಿಸುವ ದೇವರ ಬಳಿಯಲ್ಲಿ ಬೇಡಿಕೊಳ್ಳಿರಿ ಆತನು ಪಕ್ಷಪಾತಿಯಲ್ಲಾ ನನಗೆ ಸಹಾಯಮಾಡಲು ಇಳಿದು ಬಂದ ದೇವರು ನಿಮಗಾಗಿಯೂ ಸಹ ಬಂದೇ ಬರುತ್ತಾರೆ. ನಂಬಿಕೆಯಿಂದ ದೇವರನ್ನು ನೋಡಿ ಕೂಗಿಕೊಳ್ಳಿರಿ. ನಿಮ್ಮ ಅಂತರಾಳದ ಕೂಗನ್ನು ಅರ್ಥಮಾಡಿಕೊಳ್ಳುವ ದೇವರು ನಮ್ಮ ದೇವರಾಗಿದ್ದಾರೆ. ಆಮೆನ್.

"ಅನಾಥರ, ವಿಧವೆಯರ ಕೂಗನ್ನು ಕೇಳುವ ದೇವರಿಗೆ ಸ್ತೋತ್ರ" ಆಮೆನ್.

## 8. ನರಕದ ಕೂಗು

"ತಂದೆಯೇ ಅಬ್ರಹಾಮನೇ, ನನ್ನ ಮೇಲೆ ದಯವಿಟ್ಟು ಲಾಜರನನ್ನು ಕಳುಹಿಸು; ಅವನು ತನ್ನ ತುದಿಬೆರಳನ್ನು ನೀರಿನಲ್ಲಿ ಅದ್ದಿ ನನ್ನ ನಾಲಿಗೆಯನ್ನು ತಣ್ಣಗೆ ಮಾಡಲಿ; ಈ ಉರಿಯಲ್ಲಿ ಸಂಕಟಪಡುತ್ತೇನೆ." (ಲೂಕ 16;24)

ಪರಲೋಕದಲ್ಲಿ ಇರುವ ಕರ್ತನು ಮನುಷ್ಯನ ಹೃದಯದಲ್ಲಿ 'ಆತ್ಮ'ವನ್ನು ಇಟ್ಟಿದ್ದಾನೆ. ಆ ಆತ್ಮವಾದರು ನಶಿಸಿ ಹೋಗಬಾರದು ಎಂದು ಅದಕ್ಕೋಸ್ಕರ ತನ್ನ ಪ್ರಾಣವನ್ನು ಕೊಟ್ಟು ಆತನನ್ನು ಅಂಗೀಕರಿಸುವ ವ್ಯಕ್ತಿಗಳಿಗೆ ಪರಲೋಕದಲ್ಲಿ 'ಸ್ಥಳ'ವನ್ನು ಸಹಾ ನಿರ್ಮಿಸಿದ್ದಾನೆ. ಆ ಸ್ಥಳದಲ್ಲಿ ನಿನ್ನ ಆತ್ಮವು ನಿರಂತರವಾಗಿ ನೆಲೆಗೊಳ್ಳುವುದಕ್ಕೋಸ್ಕರ ಆತನು ನಿನ್ನ ವಿಷಯದಲ್ಲಿ ತವಕಿಸುತ್ತಿದ್ದಾನೆ.

ಮನುಷ್ಯನು ಈ ಭೂಮಿಯಲ್ಲಿ ಬದುಕಿದರೆ 60–70 ವರ್ಷಗಳು ಮಾತ್ರ ಬಲ ಹೆಚ್ಚಾದರೆ 80 ವರ್ಷ ಅಷ್ಟೇ ಇದನ್ನು ತಿಳಿದ ಕರ್ತನು ನಾನು ಸೃಷ್ಟಿ ಮಾಡಿರುವ ಮಕ್ಕಳು ನಾಶವಾಗಬಾರದು. ಅವರು ನನ್ನೊಂದಿಗೆ ನಿರಂತರವಾಗಿ ಜೀವಿಸಬೇಕೆಂದು ನಿರ್ಧರಿಸಿ ಸ್ವರ್ಗದಲ್ಲಿ ನಿನಗೋಸ್ಕರ ಬಿಡಾರವನ್ನು ಸಿದ್ಧ ಮಾಡಿದ್ದಾನೆ.

ಕರ್ತನನ್ನು ಅಂಗೀಕರಿಸಿಕೊಳ್ಳದಿದ್ದರೆ, ಅಥವಾ ಅಂಗೀಕರಿಸಿಕೊಂಡು ತಕ್ಕ ಪ್ರಕಾರ ನಡೆಯದೆ ಇರುವ ಆತ್ಮ ಪರಲೋಕಕ್ಕೆ ಹೋಗುವುದಕ್ಕೆ ಸಾಧ್ಯವೇ ಇಲ್ಲ. ಅಂತವರಿಗೆ ನರಕವನ್ನು ಮುಂದೆ ಇಟ್ಟಿದ್ದಾನೆ. ಒಂದು ವೇಳೆ ನಿನ್ನ ಆತ್ಮ ನರಕಕ್ಕೆ ಹೋಗುವುದಾದರೆ ಅದರ ನಿತ್ಯ ನಿರಂತರವಾದ ನೋವಿನ ಕೂಗು ಬಹಳ ಭಯಂಕರವಾಗಿರುತ್ತದೆಂದು ನೀನು ಮರೆಯಬೇಡ.

(ಲೂಕ 16:19–31) ಐಶ್ವರ್ಯವಂತನಾದ ಒಬ್ಬ ಮನುಷ್ಯನಿದ್ದನು. ಅವನು ಉತ್ತಮವಾಗಿರುವ ವಸ್ತ್ರಗಳನ್ನು ಅಂದವಾಗಿ ಧರಿಸಿಕೊಂಡು ಸಕಲಾತಿ ನಯವಾದ ನಾರುಮಡಿಯಿಂದ ತನ್ನ ಅರಮನೆಯ ಮುಂದೆ ಪ್ರತಿದಿನವೂ ವೈಭವದೊಡನೆ ಮೆರೆಯುತ್ತಿದ್ದನು. ಅವನೊಟ್ಟಿಗೆ ಅನೇಕ ಹೆಂಡತಿಯರು, ಕೈ ಕೆಲಸದವರು, ಸ್ನೇಹಿತರು ಹೀಗೆ ಅನೇಕ ಜನರು ಅವನ ಹಣದಾಸೆಗೆ ಅವನ ಹಿಂದೆ ಸುತ್ತುವಂತಹ ಆಳುಗಳು ಇದ್ದರು. ಅರಮನೆಯಲ್ಲಿ ತರತರಹದ ಬೋಜನ ಪದಾರ್ಥಗಳು ಯಾವಾಗಲೂ ಹಬ್ಬದ ಸಂಭ್ರಮಗಳು ಹೀಗೆ ಅನೇಕ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದ ಐಶ್ವರ್ಯವಂತನ ಮನೆ ಬಾಗಿಲಿನಲ್ಲಿ 'ಲಾಜರ'ನೆಂಬ ಒಬ್ಬ ಭಿಕ್ಷುಗಾರನು ಬಿದ್ದುಕೊಂಡಿದ್ದನು. ಇವನನ್ನು ನೋಡುವಾಗ ಅಷ್ಟು ಸೌಂದರ್ಯವಾಗಿ ಇರಲಿಲ್ಲ. ಯಾಕೆಂದರೆ ಅವನ ಮೈ ತುಂಬಾ ಹುಣ್ಣಾಗಿತ್ತು ಬಟ್ಟೆಯೆಲ್ಲಾ ಕೊಳೆಯಾಗಿತ್ತು. ಯಾರೂ ಅವನನ್ನು ಸೇರುತ್ತಿರಲಿಲ್ಲ. ಈ ಲಾಜರನು

ಯೋಚನೆ ಮಾಡಿದ ಈ ಐಶ್ವರ್ಯವಂತನ ಮೇಜಿನಿಂದ ಬಿದ್ದ ಎಂಜಲನ್ನು ತಿಂದು ಹಸಿವು ತೀರಿಸಿಕೊಳ್ಳಬೇಕು ಎಂದು ಮನಸ್ಸಿನಲ್ಲಿ ಅಂದುಕೊಂಡು ಅಯ್ಯೋ ಇವನ ಹುಣ್ಣುಗಳನ್ನು ನಾಯಿಗಳು ಬಂದು ನೆಕ್ಕುತ್ತಿತ್ತು. ಇಂತಹ ಪರಿಸ್ಥಿತಿ ಇರುವ ವ್ಯಕ್ತಿಯನ್ನು ಐಶ್ವರ್ಯವಂತನು ಗಮನಿಸಲೇ ಇಲ್ಲ. ಅವನನ್ನು ನೋಡಿದರೂ ನೋಡದೇ ಹೋಗುತ್ತಿದ್ದನು. ಈ ಲಾಜರನು ಅವನ ಮನೆಯಲ್ಲಿ ಆಗುವಂತಹ ಕಾರ್ಯಗಳನ್ನು ನೋಡುತ್ತಾ ಹಸಿವಿನಿಂದ ಆ ಬಾಗಿಲಲ್ಲೇ ಸತ್ತು ಹೋದನು. ಸತ್ತ ಮೇಲೂ ಸಹಾ ಈ ಐಶ್ವರ್ಯವಂತನು ಆ ಬಿಕ್ಷುಕನ ಶವ ಸಂಸ್ಕಾರಕ್ಕೆ ಯಾವುದೇ ರೀತಿಯಲ್ಲೂ ಸಹಾಯ ಮಾಡದೇ ತನ್ನ ಸ್ವಂತಕಾರ್ಯದಲ್ಲಿ ತೊಡಗಿದನು.

ಪ್ರಿಯ ದೇವರ ಮಗುವೇ ಇಲ್ಲಿ ಗಮನಿಸಬೇಕಾಗಿರುವುದು ಎರಡು ಅಂಶಗಳು ಏನೆಂದರೆ

1. ಈ ಲೋಕವನ್ನು ತ್ಯಜಿಸಿ ಕರ್ತನಿಗಾಗಿ ಜೀವಿಸುವಾಗ ಶೋಧನೆ ಬರುತ್ತದೆ. ಆ ಶೋಧನೆ ಯಾವ ರೀತಿಯಲ್ಲಾದರೂ ಸಹಾ ಬರಬಹುದು. ಅದಕ್ಕೆ ಉದಾಹರಣೆ ಲಾಜರನು. ಇವನಿಗೆ ಲೋಕದಲ್ಲಿ ಐಶ್ವರ್ಯವಿಲ್ಲ ಹಣವಿಲ್ಲ, ಜನರ ಪ್ರೀತಿಯಿಲ್ಲ, ಆರೋಗ್ಯವಿಲ್ಲ, ನೋಡುವುದಕ್ಕೆ ಅಂದ ಚಂದವಿಲ್ಲ ಆದರೂ ಅವನ ಹೃದಯದಲ್ಲಿ ಯೇಸುವಿನ ಪ್ರೀತಿ ಅಪಾರವಾಗಿತ್ತು. ಅದು ಯಾರಿಗೂ ತಿಳಿಯಲಿಲ್ಲ; ಯಾಕೆಂದರೆ ಅವನನ್ನು ನೋಡಿ ಪ್ರೀತಿಸುವಂತ ಜನರೇ ಇರಲಿಲ್ಲ, ಅವನು ಏನೇ ಹೇಳಿದರೂ ಮಾತಾಡಿರೂ, ಕೇಳುವವರು ಯಾರೂ ಈ ಲೋಕದಲ್ಲಿ ಅವನಿಗಾಗಿ ಇರಲಿಲ್ಲ. ಆದರೆ ಇಲ್ಲಿ ಸಿಗದೇ ಇರುವಂತಹದ್ದು ಎಲ್ಲವೂ ಪರಲೋಕದಲ್ಲಿ ಲಾಜರನಿಗೆ ಸರ್ವಶಕ್ತನಾದ ಯೇಸು ದೇವರ ಸನ್ನಿಧಿಯಲ್ಲಿ ಎಲ್ಲವು ಸಿಕ್ಕಿತು ಕಾರಣವೇನೆಂದರೆ ಲಾಜರನು ಯೇಸುಕ್ರಿಸ್ತನನ್ನು ಪ್ರೀತಿಮಾಡುತ್ತಾ ತನ್ನ ಎಲ್ಲ ಪರಿಸ್ಥಿಯನ್ನು ಲೆಕ್ಕಿಸದೆ ಈ ಲೋಕದ ಶೋಧನೆಗೆ ಭಯಪಡದೆ ಎಲ್ಲವನ್ನು ಎದುರಿಸಿ ಪರಲೋಕದ ನಿರೀಕ್ಷೆಯಲ್ಲಿ ಇದ್ದಿದ್ದನ್ನು ಯೇಸುಕ್ರಿಸ್ತನು ಗಮನಿಸಿದ್ದನು. ಅದಕ್ಕೋಸ್ಕರ ಲಾಜರನಿಗಾಗಿ ಪರಲೋಕದಲ್ಲಿ ಎಲ್ಲವನ್ನು ಸಿದ್ಧಮಾಡಿ ಮೊದಲೇ ಇಟ್ಟುಕೊಂಡಿದ್ದರು.

2. ಎರಡನೇದಾಗಿ ಎಲ್ಲವೂ ಇದ್ದ ಐಶ್ವರ್ಯವಂತನಲ್ಲಿ ಕ್ರಿಸ್ತನ ಪ್ರೀತಿ ಇರಲಿಲ್ಲ. ಲೋಕದ ಮೋಹ, ಆಡಂಬರ ಅವನ ಹೃದಯವನ್ನು ಕಠಿಣಪಡಿಸಿತ್ತು. ಇದರಲ್ಲಿ ಅರ್ಥವಾಗುವುದು ಏನೆಂದರೆ ಕ್ರಿಸ್ತನ ಪ್ರೀತಿ ಇಲ್ಲದಿದ್ದರೆ ಈ ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಎಲ್ಲವೂ ಶೂನ್ಯವೆಂದು. ಸತ್ತ ಲಾಜರನು ಏನಾದನು, ಐಶ್ವರ್ಯವಂತನ ಗತಿ ಏನಾಯಿತು ತಿಳಿಯೋಣ:-

ಲಾಜರನು ಸತ್ತ ಮೇಲೆ ಪರಲೋಕದಿಂದ ದೇವದೂತರು ಇಳಿದು ಬಂದು ಅವನನ್ನು ತೆಗೆದುಕೊಂಡು ಹೋಗಿ ಅಬ್ರಹಾಮನ ಎದೆಗೆ ಒರಗಿಸಿದರು. ಹಲ್ಲೇಲೂಯಾ ಆಮೆನ್. ನೋಡಿರಿ! ಈ ಲಾಜರನು ಯಾರಿಗೂ ಬೇಡವಾದ, ವಿಕಾರವಾಗಿದ್ದ ಲಾಜರನು ಮೂಲಪಿತೃವಾದ ಅಬ್ರಹಾಮನ ಎದೆಯಲ್ಲಿ

ಒರಗಿಕೊಂಡನು. ಇದು ಶಾಶ್ವತವಾದ ಮನೆಯಾಗಿದೆ. ನಿರಂತರವಾಗಿ ಯಾವುದೇ ನೋವು, ದುಃಖ, ಕಣ್ಣೀರೂ ಹಸಿವೂ ಇಲ್ಲದೇ ಎಲ್ಲದರಲ್ಲೂ ತೃಪ್ತನಾಗಿ ಜೀವಿಸುವ ವಾಸಸ್ಥಾನಕ್ಕೆ ಲಾಜರನು ಸೇರಿಕೊಂಡನು. ಆಹಾ! ಇವನು ಎಂತಹ ಅದೃಷ್ಟವಂತನು.

ಆದರೆ ಐಶ್ವರ್ಯವಂತನು ಈ ಲಾಜರನು ಸತ್ತ ಮೇಲೆ ಸ್ವಲ್ಪ ದಿವಸಗಳು ಆದ ಮೇಲೆ ಅರಮನೆಯಲ್ಲಿ ಎಲ್ಲಾ ಜನರು ಕೂಡಿರುವಾಗ ಹಬ್ಬದ ಸಂಭ್ರಮಗಳನ್ನು ಸಂತೋಷದಿಂದ ಆಚರಿಸುತ್ತಿರುವಾಗ ತಕ್ಷಣವೇ ಹೃದಯಘಾತದಿಂದ ಸತ್ತು ಹೋಗುತ್ತಾನೆ. ಆಗ ಐಶ್ವವಂತನಿಗೆ ಸಂಪ್ರದಾಯಕ್ಕೆ ತಕ್ಕ ರೀತಿಯಲ್ಲಿ ಉತ್ತುಮವಾದ ಸಂಸ್ಕಾರವನ್ನು ಎಲ್ಲಾ ಕಾರ್ಯಗಳನ್ನು ಮಾಡಿ ಮುಗಿಸಿದರು. ಆದರೆ ದುರದೃಷ್ಟದವನಾಗಿ ಕರ್ತನ ದೃಷ್ಟಿಯಲ್ಲಿ ನಡೆದುಕೊಂಡ ಈ ಐಶ್ವರ್ಯವಂತನಿಗೆ ಭೂಲೋಕದ ಭೋಗ ಅನುಭವಿಸುವ ಅದೃಷ್ಟ ಮಾತ್ರ ಇತ್ತು. ಪರಲೋಕಕ್ಕೆ ಹೋಗುವ ಅದೃಷ್ಟ ಇರಲಿಲ್ಲವಾದುದರಿಂದ ನರಕದಿಂದ ದೂತರು ಬಂದು ಐಶ್ವರ್ಯವಂತನನ್ನು ಕರೆದುಕೊಂಡು ಉರಿಯುವ ಗಂಧಕದ ಬೆಂಕಿಯೊಳಗೆ ದೊಬ್ಬಿದರು. ಅಬ್ಬಾ! ಎಂತಹ ಘೋರವಾಗಿದೆ, ಯಾವ ನೋವನ್ನು ಅರಿಯದವನು ಕೋಮಲನಾಗಿ ಬೆಳೆದವನು ನೋವಿದ ಬೆಂಕಿಯ ನರಕದಲ್ಲಿ ದೊಬ್ಬಲ್ಪಟ್ಟನು. ಇಲ್ಲಿ ಅವನಿಗೆ ಕರುಣೆ ತೋರಿಸುವವರು ಹುಡುಕಿದರೂ ಸಿಕ್ಕುವುದಿಲ್ಲ ಯಾಕೆಂದರೆ "ನರಕದಲ್ಲಿ ಅವನನ್ನು ಕಡಿಯುವ ಹುಳ ಸಾಯುವುದಿಲ್ಲ, ಬೆಂಕಿ ಆರುವುದಿಲ್ಲ. ಪ್ರತಿಯೊಬ್ಬನಿಗೂ ಬೆಂಕಿಯೆಂಬ ಉಪ್ಪಿನ ಹದವು ಕೊಡಲ್ಪಡಬೇಕು" (ಮಾರ್ಕ 9:48) ಈ ನೋವನ್ನು ಅನುಭವಿಸುವ ಐಶ್ವರ್ಯವಂತನು ನರಕದಿಂದ ಕೂಗಿ ಹೋಳುತ್ತಾನೆ-ಕಣ್ಣೆತ್ತಿ ದೂರದಿಂದ ಅಬ್ರಹಾಮನನ್ನೂ ಇವನ ಎದೆಗೆ ಒರಗಿಕೊಂಡಿದ್ದ ಲಾಜರನನ್ನೂ ನೋಡಿ-ತಂದೆಯೇ, ಅಬ್ರಹಾಮನೇ, ನನ್ನ ಮೇಲೆ ದಯವಿಟ್ಟು ಲಾಜರನನ್ನು ಕಳುಹಿಸು; ಅವನು ತನ್ನ ತುದಿಬೆರಳನ್ನು ನೀರಿನಲ್ಲಿ ಅದ್ದಿ ನನ್ನ ನಾಲೆಗೆಯನ್ನು ತಣ್ಣಗೆ ಮಾಲಿ; ಈ ಉರಿಯಲ್ಲಿ ಸಂಕಟಪಡುತ್ತೇನೆ" ಎಂದು ಕೂಗಿ ಹೇಳಿದನು. ಈ ನರಕದಿಂದ ಕೂಗುತ್ತಿರುವ ಐಶ್ವರ್ಯವಂತನ ಕೂಗನ್ನು ಕೇಳಿಸಿಕೊಳ್ಳುವುದಕ್ಕೆ ನಮ್ಮ ಯೇಸು ಕ್ರಿಸ್ತನ ಮನಸ್ಸು ಎಷ್ಟು ದುಃಖ ಪಟ್ಟಿರಬಹುದೆಂದು ಒಮ್ಮೆ ಆಲೋಚಿಸಿರಿ.

ನೋಡಿರಿ ಐಶ್ವರ್ಯವಂತನ ಗತಿ ಏನಾಯಿತು ಈ ಲೋಕದಲ್ಲಿ ಜೀವಿಸುವಾಗ ಯಾವುದೇ ನೋವು, ದುಃಖ, ಕಣ್ಣೀರೂ ಇಲ್ಲ. ಯಾರ ಮಾತಿಗೂ ಬೆಲೆ ಕೊಡದೇ ಇಷ್ಟ ಬಂದ ರೀತಿಯಲ್ಲಿ ಜೀವಿಸಿದನು. ಲಾಜರನು ಅವನ ಬಳಿ ಯೇಸುವಿನ ಸುವಾರ್ತೆ ಹೇಳಿದಾಗ ಅದನ್ನು ತಿರಸ್ಕಾರ ಮಾಡಿರಬಹುದು. ಏಕೆಂದರೆ ಲಾಜರನು ಗತಿ ಇಲ್ಲದವನಾಗಿ, ಬಿಕ್ಷುಗಾರನಾಗಿ ಅವನ ಮುಂದೆ ಬಾಗಿಲಲ್ಲಿ ಇರುವಾಗ ಲಾಜರನ ಮಾತು ಸತ್ಯವಾಗಿ ಕಂಡು ಬರುವುದಿಲ್ಲ. ಸುಖಭೋಗದಲ್ಲಿ ಮುಳುಗಿರುವ ಐಶ್ವರ್ಯವಂತ ದೇವರಿಗೆ ಭಯಪಡಲು ಸಾಧ್ಯವೇ ಆಗಲಿಲ್ಲ. ಜನರ ಮಧ್ಯದಲ್ಲಿ ಕಪಟ ಭಕ್ತಿ ತೋರಿಸಿರಬಹುದು, ಆದರೆ ನಿಜವಾದ ದೇವರ ಭಕ್ತಿ ಇವನಿಗೆ ಸಾಧ್ಯವೇ ಆಗಲಿಲ್ಲ, ದೇವರ ಭಯಭಕ್ತಿ ಇರುವ ವ್ಯಕ್ತಿಗೆ ಮತ್ತೊಬ್ಬರ ಕಷ್ಟ

ಖಂಡಿತವಾಗಿ ಗೊತ್ತಾಗುತ್ತದೆ. ಐಶ್ವರ್ಯವಂತನಿಗೆ ಲಾಜರನ ಹಸಿವಿನ ನೋವು ಗೊತ್ತಾಗಲೇ ಇಲ್ಲ, ಈಗ ನರಕದಲ್ಲಿ ಅವನ ತುದಿಕಾಲಿನ ಬೆರಳಿನ ನೀರನ್ನು ಕೇಳುವ ಗತಿ ಬಂತು. ಇದೇ ಲೋಕದ ಜೀವನ ಪ್ರಿಯ ದೇವರ ಮಕ್ಕಳೇ ಇಂತಹ ಗತಿ ಯಾರಿಗೂ ಬರಬಾರದು ಎಂದು ಯಾವಾಗಲೂ ನಿಮ್ಮ ಬಗ್ಗೆ ಕಾಳಜಿ ಇರುವ ಯೇಸು ಕ್ರಿಸ್ತನು ನಿನ್ನನ್ನು ಈ ನರಕದಿಂದ ಬಿಡಿಸಲು ಇಂದು ನಿನ್ನ ಹತ್ತಿರ ಬಂದಿದ್ದಾನೆ.

ಐಶ್ವರ್ಯವಂತನನ್ನು ನರಕದಿಂದ ಕೂಗಿ ಕೇಳಿದ ಮಾತಿಗೆ ಅಬ್ರಹಾಮನು ಹೇಳಿದ ಮಾತು–"ಕಂದಾ, ನೀನು ಆಶಿಸಿದ ಸುಖವನ್ನು ನಿನ್ನ ಜೀವಮಾನದಲ್ಲಿ ಹೊಂದಿದಿ; ಹಾಗೆಯೇ ಲಾಜರನು ಕಷ್ಟವನ್ನು ಹೊಂದಿದನು ಎಂಬುದನ್ನು ನೆನಪಿಗೆ ತಂದುಕೋ, ಈಗಲಾದರೋ ಲಾಜರನಿಗೆ ಇಲ್ಲಿ ನಿತ್ಯವಾದ ಸಮಾಧಾನ, ಆದರೆ ನಿನಗೆ ನಿತ್ಯ ಸಂಕಟ. ಇದು ಮಾತ್ರವಲ್ಲದೆ ನಮಗೂ ನಿಮಗೂ ನಡುವೆ ದೊಡ್ಡದೊಂದು ಡೊಂಗರ ಸ್ಥಾಪಿಸಿಯದೆ; ಆದಕಾರಣ ಈ ಕಡೆಯಿಂದ ನಿಮ್ಮ ಬಳಿಗೆ ಹೋಗಬೇಕೆಂದಿರುವವರು ಹೋಗಲಾರರು; ಮತ್ತು ಆ ಕಡೆಯಿಂದ ನಮ್ಮ ಬಳಿಗೆ ಯಾರೂ ದಾಟುವದಕ್ಕಾಗದು ಅಂದನು. ಈ ಮಾತನ್ನು ಕೇಳಿದ ಲಾಜರನು ಕಣ್ಣೀರಿನಿಂದ ಮತ್ತೇ ಕೂಗಿ ಕೊಂಡು–"ಅಪ್ಪಾ, ಹಾಗಾದರೆ ಲಾಜರನನ್ನು ನನ್ನ ತಂದೆಯ ಮನೆಗೆ ಕಳುಹಿಸಬೇಕೆಂದು ನಿನ್ನನ್ನು ಬೇಡಿಕೊಳ್ಳುತ್ತೇನೆ. ನನಗೆ ಐದು ಮಂದಿ ಅಣ್ಣ ತಮ್ಮಂದಿರಿದ್ದಾರೆ; ಅವರು ಸಹಾ ಈ ಯಾತನೆಯ ಸ್ಥಳಕ್ಕೆ ಬಂದಾರು; ಬಾರದಂತೆ ಅವನು ತಾನು ಕಂಡದ್ದನ್ನು ಅವರಿಗೆ ಚನ್ನಾಗಿ ಹೇಳಲಿ ಅಂದನು.

ನೋಡಿರಿ! ಐಶ್ವರ್ಯವಂತನಿಗೆ ಎಂತಹ ಕರುಣೆ ನರಕದಿಂದ ಉಕ್ಕಿ ಬರುತ್ತೇ ಅಂತ! ಇವನು ಲೋಕದಲ್ಲಿ ಸುಖ ಭೋಗದಿಂದ ಜೀವಿಸುವಾಗ ಲಾಜರನ ಮಾತು ಅವನಿಗೆ ಹೇಸಿಗೆ ಆಗುತ್ತಿತ್ತು, ಅವನ ಮುಖನೋಡಲು ಸಹಾ ಇಷ್ಟ ಪಡುತ್ತಿರಲಿಲ್ಲ, ಅವನು ಊಟದ ಹಸಿವಿನಿಂದ ಬಳುಲುವಾಗ ಊಟ ಸಹಾ ಕೊಡಲಿಲ್ಲ, ಆದರೆ ಈಗ ನನಗೆ ಬಂದ ಗತಿ ನನ್ನ ಸಹೋದರರಿಗೆ ಬರಬಾರದು ಎಂದು ಕೂಗಿ ಕೇಳುತ್ತಿದ್ದಾನೆ. ಹಣ, ಆಸ್ತಿ ಮನುಷ್ಯನ ಮುಂದೆ ಇರುವಾಗ ಬಡವನ ಹಸಿವು ಅವನ ಕಣ್ಣಿಗೆ ಬೀಳುವುದಿಲ್ಲ. ಕರ್ತನ ಕೂಗು ಕೇಳಿಸುವುದಿಲ್ಲ. "ಮನುಷ್ಯನ ಮಾರ್ಗಗಳು, ಕರ್ತನಿಗೆ ಕಾಣುತ್ತಲೇ ಇವೆ. ಆತನು ಮನುಷ್ಯನ ನಡತೆಯನ್ನೆಲ್ಲಾ ಪರೀಕ್ಷಿಸುವವನಾಗಿದ್ದಾನೆ (ಜ್ಞಾನೋ 5:21) ಇದನ್ನು ಮರೆತ ಐಶ್ವರ್ಯವಂತನು ತಂದೆಯೇ, ಅಬ್ರಹಾಮನೇ, ಹಾಗಲ್ಲ; ಸತ್ತವರ ಕಡೆಯಿಂದ ಒಬ್ಬನು ಅವರ ಬಳಿಗೆ ಹೋದರೆ ಅವರು ದೇವರ ಕಡೆಗೆ ತಿರುಗಿಕೊಳ್ಳುವರು ಎಂದು ಸ್ವಲ್ಪ ಬುದ್ಧಿ ಉಪಯೋಗಿಸಿ ಕೇಳಿದಾಗ ಅದಕ್ಕೆ ಅಬ್ರಹಾಮನು ಕೊಟ್ಟ ಉತ್ತರ–"ಅವರು ಮೋಶೆಯ ಮಾತನ್ನೂ ಪ್ರವಾದಿಗಳ ಮಾತನ್ನು ಕೇಳದಿದ್ದರೆ ಸತ್ತುಹೋಗಿದ್ದವನೊಬ್ಬನು ಜೀವಿತನಾಗಿ ಎದ್ದರೂ ಅವರು ಒಪ್ಪುವದಿಲ್ಲ" ಎಂದು ಹೇಳಿದನು.

ಎಲ್ಲಾ ತಿಳಿದಿರುವ ಐಶ್ವರ್ಯವಂತನು ಏನೂ ತಿಳಿಯದ ರೀತಿಯಲ್ಲಿ

ಲೋಕದ ಆಡಂಬರಕ್ಕೆ ಮರುಳಾಗಿ ತನ್ನ ಆತ್ಮವನ್ನು ನಿತ್ಯನರಕಕ್ಕೆ ಒಪ್ಪಿಸಿಕೊಟ್ಟನು. ಅಲ್ಲಿರುವ ಸಂಕಟವನ್ನು ತಾಳಲಾರದೆ ಕೂಗಿದಾಗ ಅದರಿಂದ ಯಾವುದೇ ಪ್ರಯೋಜನವಾಗಲಿಲ್ಲ. ಇದರಿಂದ ಅರ್ಥಮಾಡಿಕೊಳ್ಳಬೇಕಾದ ಸಂಗತಿ – ಸೈತಾನನು ಈ ಲೋಕದ ಆಸೆಯಿಂದ ಮನುಷ್ಯನ ಬುದ್ಧಿಯನ್ನು ಕಟ್ಟಿ ಅವನ ಅಧೀನಕ್ಕೆ ವಶಪಡಿಸಿಕೊಳ್ಳಬೇಕಾದ ರೀತಿಯನ್ನು ಚೆನ್ನಾಗಿ ಅರ್ಥಮಾಡಿಕೊಂಡು ಉಪಯೋಗಿಸುತ್ತಿದ್ದಾನೆ – ಈ ಲೋಕದ ಯಾತ್ರೆ ಅಲ್ಪ ವರ್ಷಗಳು ಮಾತ್ರ ಎಂದು ಮನುಷ್ಯನು ಗ್ರಹಿಸಿಕೊಳ್ಳುವುದಿಲ್ಲ. ಪ್ರಿಯ ದೇವರ ಮಕ್ಕಳೇ ಇದನ್ನು ಓದಿದ ಮೇಲೆ ನಿಮ್ಮ ಮನಸ್ಸನ್ನು ಬದಲಾಯಿಸಿಕೊಳ್ಳಿರಿ. ನಿಮ್ಮೊಳಗಿರುವ 'ಆತ್ಮ' ಬಹು ಮುಖ್ಯವಾಗಿದೆ. ಸಂಪ್ರದಾಯದ ಮುಖಾಂತರ, ಮೂಢನಂಬಿಕೆಯಿಂದ ಜೀವನವನ್ನು ನಾಶಮಾಡಿಕೊಳ್ಳದೇ, ಸತ್ಯವನ್ನು ತಿಳಿದುಕೊಳ್ಳಲು ಪ್ರಯಾಸಪಡಿರಿ, ಐಶ್ವರ್ಯವಂತನ ರೀತಿಯಲ್ಲಿ ಸುಖಭೋಗಗಳಿಂದ ಈ ಲೋಕದ ಜೀವನದಲ್ಲಿ ನಿನ್ನ ಸಮಯವನ್ನು ಕಳೆಯುತ್ತಿದ್ದೀರಾ! ಬುದ್ಧಿಯಿದ್ದರೂ ಬುದ್ಧಿಯಿಲ್ಲದ ಹಾಗೇ ನಿನ್ನ ಜೀವನವನ್ನು ಹಾಳುಮಾಡಿಕೊಳ್ಳುತ್ತಿದ್ದೀರಾ! ನಿಮ್ಮ ಜೀವನವನ್ನು ರೂಪಿಸಿಕೊಳ್ಳಲು, ನಿಮ್ಮ ಆತ್ಮವನ್ನು ಭದ್ರಪಡಿಸಿಕೊಳ್ಳಲು ನಿಮ್ಮ ಜ್ಞಾನವೇ ಸಾಧನವಾಗಿದೆ. ಕರ್ತನು ನಿಮಗೆ ಕೊಟ್ಟಿರುವ ಜ್ಞಾನವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿರಿ. ನಿಮ್ಮ ಕಣ್ಣು ಇಲ್ಲದ್ದನ್ನೇ ಕಾಣುವುದು, ಮನಸ್ಸು ವಿಪರೀತಗಳನ್ನು ಹೊರಪಡಿಸುವದು. ನೀನು ಸಮುದ್ರದ ನಡುವೆಯಾಗಲಿ ಹಡಗಿನ ಕಂಬದ ತುದಿಯಲ್ಲಾಗಲಿ ಮಲಗಿರುವವನಂತೆ ಇರುವಿ, ಜನರು ನನ್ನನ್ನು ಹೊಡೆದರೂ ನೋವಾಗಲಿಲ್ಲ, ಬಡಿದರೂ ತಿಳಿಯಲಿಲ್ಲ; ಯಾವಾಗ ಎಚ್ಚೆತ್ತೇನು? ಪುನಃ ಅದನ್ನೇ ಹುಡುಕೇನು ಎಂದು ಕೊಳ್ಳುತ್ತಾ (ಜ್ಞಾನೋ 23;34,35) ನಿನ್ನ ಜೀವನವನ್ನು ನಾಶನದ ಗುಂಡಿಗೆ ಕರೆದೊಯ್ಯುವುದಾದರೆ ಏನೂ ಪ್ರಯೋಜನವಿಲ್ಲ, ಇದರಿಂದ ಹೊರಗೆ ಬರಲು ಪ್ರಯತ್ನಿಸುವುದಾದರೆ ಲಾಜರನ ರೀತಿಯಲ್ಲಿ ಪರಲೋಕದಲ್ಲಿ ಅಬ್ರಹಾಮನ ಎದೆಗೆ ಒರಗಿಕೊಂಡು ಶಾಶ್ವತವಾದ ಸಮಾಧಾನವನ್ನು ಹೊಂದುಕೊಂಡು ನಿರಂತರವಾಗಿ ಕರ್ತನೊಟ್ಟಿಗೆ ಜೀವಿಸುತ್ತೀಯ. "ಕಂದಾ, ಕರ್ತನ ಆಜ್ಞೆಗಳನ್ನು ಅನುಸರಿಸು." ಆಮೆನ್.

ದೇವರ ನಾಮಕ್ಕೆ ಸ್ತೋತ್ರ

# ಕಣ್ಣೀರಿನ ಕೂಗು



ಲೇಖಕರ ಮಾತು:

'ಮಹಿಮಾ ಪ್ರಾರ್ಥನಾ ಮಂದಿರ''ದಿಂದ 'ಕಣ್ಣೀರಿನ ಕೂಗು' ಎನ್ನುವ ಈ ನಾಲ್ಕನೆಯ ಪುಸ್ತಕವನ್ನು ಬಿಡುಗಡೆ ಮಾಡಲಾಗಿದೆ. ಈ ಪುಸ್ತಕದ ಮುಖಾಂತರ ದೇವರು ನಿಮ್ಮ ಕಣ್ಣೀರನ್ನು ಒರೆಸಲೆಂದು ನಿಮಗಾಗಿ ಪ್ರಾರ್ಥಿಸುತ್ತೇನೆ. ದೇವರು ನಿಮ್ಮನ್ನು ಆಶೀರ್ವದಿಸಲಿ.

"ಕೇಳಿರಿ! ಮನುಷ್ಯರನ್ನು ಬೇಸರಗೊಳಿಸುವುದು ಅಷ್ಟು ದೊಡ್ಡದಲ್ಲವೆಂದೆಣಿಸಿ ನನ್ನ ದೇವರನ್ನೂ ಬೇಸರಗೊಳಿಸುವಿರಾ?" (ಯೆಶಾ 7:13)

ನಿಮ್ಮ ಪ್ರಾರ್ಥನಾ ಕೋರಿಕೆಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ

ನಮ್ಮ ವಿಳಾಸ:

ಮನೆ ನಂ; 90. 1ನೇ ಮುಖ್ಯ ರಸ್ತೆ. ಸುಬ್ಬಣ್ಣ ಗಾರ್ಡನ್.
ವಿಜಯನಗರ ಬೆಂಗಳೂರು–560040

ಫೋನ್ ನಂಬರ್ – 9900241593, 9880245222

ಪ್ರತಿ ಸೋಮವಾರ ಬೆಳಿಗ್ಗೆ 7 ರಿಂದ 7;30ರವರೆಗೆ ಲೈಟ್ ಟಿ.ವಿಯಲ್ಲಿ ನಮ್ಮ ಕಾರ್ಯಕ್ರಮವು ಪ್ರಸಾರವಾಗುತ್ತಿದೆ. ವೀಕ್ಷಿಸಿರಿ ಆಶೀರ್ವಾದವನ್ನು ಹೊಂದಿಕೊಳ್ಳಿರಿ.

Email : mahimaprarthanamandhira@gmail.com
parimalatej@gmail.com